ಕನ್ನಡ ವಿಶ್ವವಿದ್ಯಾಲಯ, ಹಂಪಿ

"ಡಾ. ವೀಣಾಶಾಂತೇಶ್ವರ ಅವರ ಕಥೆಗಳಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು"

ಕಾವ್ಯಮಂಡಲದ ವತಿಯಿಂದ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ

ಸಂಶೋಧನಾ ವಿದ್ಯಾರ್ಥಿನಿ
ಪುನೀತ. ಎಂ.

ಮಾರ್ಗದರ್ಶಕರು
ಡಾ. ಡಿ. ಮಂಗಳಾ ಪ್ರಿಯದರ್ಶಿನಿ. ಎಂ.ಎ., ಎಂ.ಫಿಲ್., ಪಿಹೆಚ್.ಡಿ.
ಪ್ರಾಂಶುಪಾಲರು
ಮಹಿಳಾ ಪ್ರಥಮ ದರ್ಜೆ ಕಾಲೇಜು, ವಿದ್ಯಾವರ್ಧಕ ಸಂಘ,
ಬಸವೇಶ್ವರ ನಗರ, ಬೆಂಗಳೂರು

ಕಾವ್ಯಮಂಡಲ
೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು-೦೪.

2008

312

ಕನ್ನಡ ವಿಶ್ವವಿದ್ಯಾಲಯ, ಹಂಪಿ

"ಡಾ. ವೀಣಾಶಾಂತೇಶ್ವರ ಅವರ ಕಥೆಗಳಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು"

ಕಾವ್ಯಮಂಡಲದ ವತಿಯಿಂದ ಎಂ. ಫಿಲ್ ಪದವಿಗಾಗಿ ಹಂಪಿ ಕನ್ನಡ
ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ

ಸಂಶೋಧನಾ ವಿದ್ಯಾರ್ಥಿನಿ
ಪುನೀತ. ಎಂ.

ಮಾರ್ಗದರ್ಶಕರು
ಡಾ. ಡಿ. ಮಂಗಳಾ ಪ್ರಿಯದರ್ಶಿನಿ. ಎಂ.ಎ., ಎಂ.ಫಿಲ್., ಪಿಹೆಚ್.ಡಿ.
ಪ್ರಾಂಶುಪಾಲರು
ಮಹಿಳಾ ಪ್ರಥಮ ದರ್ಜೆ ಕಾಲೇಜು, ವಿದ್ಯಾವರ್ಧಕ ಸಂಘ,
ಬಸವೇಶ್ವರ ನಗರ, ಬೆಂಗಳೂರು

ಕಾವ್ಯಮಂಡಲ
೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು-೦೪.

2008

ದೃಢೀಕರಣ ಪತ್ರ

ಎಂ. ಪುನೀತ ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ "ಡಾ. ವೀಣಾಶಾಂತೇಶ್ವರ ಅವರ ಕಥೆಗಳಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು" ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವೀಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಡಿ. ಮಂಗಳಾ ಪ್ರಿಯದರ್ಶಿನಿ
ಎಂ.ಎ. ಎಂ.ಫಿಲ್. ಪಿಹೆಚ್.ಡಿ.
ಪ್ರಾಂಶುಪಾಲರು,
ಮಹಿಳಾ ಪ್ರಥಮ ದರ್ಜೆ ಕಾಲೇಜು,
ವಿದ್ಯಾವರ್ಧಕ ಸಂಘ, ಬಸವೇಶ್ವರ ನಗರ,
ಬೆಂಗಳೂರು

ಸ್ಥಳ : ಬೆಂಗಳೂರು
ದಿನಾಂಕ : 15.09.2008

ಪ್ರಮಾಣ ಪತ್ರ

"ಡಾ. ವೀಣಾಶಾಂತೇಶ್ವರ ಅವರ ಕಥೆಗಳಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು" ಎಂಬ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಡಾ. ಡಿ. ಮಂಗಳಾ ಪ್ರಿಯದರ್ಶಿನಿ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 15.09.2008

ಎಂ. ಪುನೀತ
ಎಂ. ಪುನೀತ
ಸಂಶೋಧನಾ ವಿದ್ಯಾರ್ಥಿನಿ

ಕೃತಜ್ಞತೆಗಳು

ಪ್ರಸ್ತುತ ನಿಬಂಧವನ್ನು ಸಿದ್ಧಪಡಿಸುವಲ್ಲಿ ಮಾರ್ಗದರ್ಶನ ನೀಡಲು ಸಂತೋಷದಿಂದ ಒಪ್ಪಿಕೊಂಡು ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿದ ಪೂಜ್ಯ ಗುರುಗಳಾದ **ಡಾ. ಡಿ. ಮಂಗಳಾ ಪ್ರಿಯದರ್ಶಿನಿ**ರವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಎಂ.ಫಿಲ್ ಪದವಿ ವ್ಯಾಸಂಗಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕಾವ್ಯಮಂಡಲದಲ್ಲಿ ಅವಕಾಶ ನೀಡಿ ಸಹಕರಿಸಿದ ಅಧ್ಯಯನ ಕೇಂದ್ರದ ನಿರ್ದೇಶಕರಾದ **ಪ್ರೊ.ಕಿ.ರಂ. ನಾಗರಾಜ**ರವರಿಗೆ ನನ್ನ ಮನಸ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ನಿಬಂಧಕ್ಕೆ ಉಪಯುಕ್ತವಾದ ಮಾಹಿತಿಗಳನ್ನು ಸಂಗ್ರಹಿಸಲು ಸೂಕ್ತ ಸಲಹೆಗಳನ್ನು ನೀಡಿದ **ಡಾ. ಎಲ್.ಜಿ. ಮೀರಾ**ರವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ನನ್ನ ಬದುಕಿನ ಸ್ಥಿತಿಗತಿಗಳ ಬಗ್ಗೆ ಸದಾ ಚಿಂತಿಸುವ ಹಾಗೂ ತಮ್ಮ ಜೀವನವನ್ನೇ ಮುಡುಪಾಗಿಟ್ಟು ನನ್ನನ್ನು ಈ ಮಟ್ಟಕ್ಕೆ ತಂದು ಮೌನವಾಗಿ ಹುರಿದುಂಬಿಸಿದ ನನ್ನ ಪ್ರೀತಿಯ ತಾಯಿಯಾದ **ಕಲ್ಪನಾ** ಅವರಿಗೂ ನಾನು ಚಿರಋಣಿಯಾಗಿರುತ್ತೇನೆ.

ಹಾಗೂ ನನಗೆ ಸಂಶೋಧನಾ ಸಂದರ್ಭದಲ್ಲಿ ಮನೋಸ್ಥೈರ್ಯವನ್ನು ನೀಡಿ ಸಹಕರಿಸಿದ ನನ್ನೆಲ್ಲಾ ಆತ್ಮೀಯ ಸ್ನೇಹಿತರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ಈ ನಿಬಂಧವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಶ್ರೀಮತಿ ಮಧುರ ಜನಾರ್ಧನ್, ಮಂಥನ್ ಗ್ರಾಫಿಕ್ಸ್, ಬೆಂಗಳೂರು ಇವರಿಗೂ ನನ್ನ ಕೃತಜ್ಞತೆಗಳು.

- ಎಂ. ಪುನೀತ

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯದಲ್ಲಿ 'ಸಣ್ಣಕಥೆ' ಎಂಬ ಸಾಹಿತ್ಯ ರೂಪವೇ ಮನಸೆಳೆಯುವಂತದ್ದು. ಮಹಿಳಾ ಕಥಾ ಸಾಹಿತ್ಯವನ್ನು ಬಹಳವಾಗಿ ಪ್ರಭಾವಿಸಿರುವುದು ಸ್ತ್ರೀವಾದ. ಇಲ್ಲಿ ಸ್ತ್ರೀಯರ ನೆಲೆಗಳನ್ನು ಗಮನಿಸುತ್ತಾ ಹೋದಂತೆ ಇವರ ವೈಯಕ್ತಿಕ ತಾಕಲಾಟಗಳ ಚಿತ್ರಣ, ಸ್ತ್ರೀಪರವಾದ ಸಾಮಾಜಿಕ ಕಾಳಜಿಯನ್ನು ಕಾಣಬಹುದು. ಈ ಕಾಳಜಿಯು ವ್ಯಕ್ತವಾಗಿರುವ ರೀತಿಯು ಲೇಖಕಿಯಿಂದ -ಲೇಖಕಿಗೆ ಭಿನ್ನ. ಪುರುಷ ಪ್ರಧಾನ ಸಮಾಜದಲ್ಲಿ ಸಂವೇದನಾ ಶೀಲಳಾಗಿ ಲೇಖಕಿಯು ಸ್ತ್ರೀ ನೆಲೆಯ ಬಗ್ಗೆ ಚಿಂತಿಸುವುದು ಅವಶ್ಯಕ.

ಭಾರತೀಯ ಸಮಾಜದಲ್ಲಿ ಹೆಣ್ಣು ತನ್ನ ಬದುಕಿನ ಪ್ರತಿಯೊಂದು ಸಂದರ್ಭದಲ್ಲಿ ಗಂಡಿನ ಆಸರೆಯಲ್ಲಿರುತ್ತಾಳೆಂಬುದು ಹಳೆಯ ವಿಚಾರ. ಆದರೆ, ಆಧುನಿಕ ಯುಗದಲ್ಲಿ ಹೆಣ್ಣು ಸಾಮಾಜಿಕವಾಗಿ, ಶೈಕ್ಷಣಿಕವಾಗಿ , ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಬಲಳಾಗುತ್ತಾ ಬಂದಿದ್ದು ತನ್ನದೇ ಆದ ಆಲೋಚನೆಗಳನ್ನು ಹೊಂದಿದ್ದಾಳೆ. ಅಲ್ಲದೆ ಆಲೋಚನೆಗಳ ಮೂಲಕ ಹೊಸ ಯುಗವೊಂದನ್ನು ಕಂಡುಕೊಂಡಿರುವ ಸ್ತ್ರೀ ಅವಕಾಶಗಳಿಗೆ ಹಂಬಲಿಸುತ್ತಾ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುತ್ತಾ ತನ್ನ ಬದುಕನ್ನು ಹೋರಾಟದ ಹಾದಿಯಲ್ಲಿ ಮುಂದುವರೆಸುತ್ತಿದ್ದಾಳೆ. ಈ ನಿಟ್ಟಿನಲ್ಲಿ ಸ್ತ್ರೀ - ಪುರುಷನಿಗೆ ಸರಿಸಮಾನವಾಗಿ ನಿಲ್ಲುವುದರ ಜೊತೆಗೆ ಪುರುಷ ಪ್ರಧಾನ ಸಮಾಜ ಹೆಣ್ಣಿಗೆಂದು ನಿರ್ಮಿಸಿರುವ ಹಲವು ಪದ್ಧತಿ, ಕಟ್ಟು-ಪಾಡುಗಳಲ್ಲಿ ಸ್ತ್ರೀ ವಿಚಾರಪರವಾದ ಚಿಂತನೆಯ ಮೂಲಕ ಒಡೆಯುವ ಪ್ರಯತ್ನವನ್ನು ಮಾಡುತ್ತಿರುವುದು ಗಮನೀಯವಾದ ಅಂಶವಾಗಿದೆ.

ನವ್ಯದ ಸಂದರ್ಭದಲ್ಲಿ ವೀಣಾ ಶಾಂತೇಶ್ವರರವರ ಕಥೆಗಳು ಈ ನಿಟ್ಟಿನ ಆಲೋಚನೆಯಲ್ಲಿ ಪ್ರಸ್ತುತ ಎನಿಸಿವೆ. ಇವರ ಕಥೆಗಳ ಕೇಂದ್ರ ವಸ್ತು ಹೆಣ್ಣು. ಇವರ ಕಥೆಗಳ ನಾಯಕಿಯರು ಪರಂಪರಾಗತ ಅಸಮಾನತೆಗಳ ಬಗ್ಗೆ ಎಚ್ಚರವಿರುವ ತಮ್ಮ ಬದುಕಿನ ನಿರ್ಧಾರವನ್ನು ತಾವೇ ಕೈಗೊಳ್ಳುವ ಸಾಮರ್ಥ್ಯದ ದಿಟ್ಟ ನಿಲುವಿನವರು. ಗಂಡು-ಹೆಣ್ಣಿನ

ಸಂಬಂಧಗಳಿಗೆ ಹುಟ್ಟಿಕೊಳ್ಳುವ ಬಿಕ್ಕಟ್ಟು ಹಾಗೂ ತಾಕಲಾಟಗಳ ವಿಶ್ಲೇಷಣೆ ಮುಖ್ಯವಾಗಿವೆ. ನವ್ಯತೆ, ಲೈಂಗಿಕ ಆಸ್ಥೆಗಳು, ನಗರ ಸಂವೇದನೆ, ಅನುಭವದ ಆಧ್ಯತೆ, ಬಂಡಾಯ-ಇಂಥ ಗುಣಗಳನ್ನು ಗುರುತಿಸಬಹುದು. 'ಸ್ತ್ರೀ-ಪುರುಷರ ಆಕರ್ಷಣೆ, ದಿಸ್ತರ ಮೌಲ್ಯಗಳ ಕಾರಣದಿಂದ ವ್ಯಕ್ತಿ ವಿಶಿಷ್ಟ ಸಮಸ್ಯೆಗಳಿಂದ ಹುಟ್ಟಿಕೊಳ್ಳುವ ಸಂಘರ್ಷಗಳು ಇವುಗಳನ್ನು ಧೈರ್ಯದಿಂದ ಎದುರಿಸುವ ಹೆಣ್ಣುಗಳು - ಹೀಗೆ ಇವರಲ್ಲಿ ವೈವಿಧ್ಯಮಯ ವಸ್ತುಗಳಿವೆ. ಸಮಾಜದ ತರತಮ ವ್ಯವಸ್ಥೆಯನ್ನು ನಿಷ್ಠುರವಾಗಿ ನೋಡುತ್ತವೆ. ಈ ನಿಟ್ಟಿನಲ್ಲಿ ನನ್ನ ಸಂಪ್ರಬಂಧ ಚಿಂತಿಸುವ ಪ್ರಯತ್ನ ಮಾಡುತ್ತದೆ.

ಹೊಸರೀತಿಯ ಕಥೆಗಾರಿಕೆ ಮತ್ತು ವಸ್ತುವನ್ನು ಕುರಿತ ವಿಭಿನ್ನ ಪರಿಭಾವನೆಯಿಂದ ಲೇಖಕಿಯರ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟರು. ಕಥೆಯ ವಸ್ತು, ಧೋರಣೆ, ನಿರೂಪಣಾ ದಾಟಿಗಳಲ್ಲಿ ಹೊಸತನವಿದೆ. ಮೊಟ್ಟಮೊದಲಿಗೆ ಅತ್ಯಂತ ಸೂಕ್ಷ್ಮ ಸಂವೇದನೆಯ ದಿಟ್ಟ ನಿಲುವಿನ ವಿದ್ಯಾವಂತೆಯ ವಿಚಾರಶೀಲಳೂ ಆದ ನಾಯಕಿ ಇಲ್ಲಿ ಉದ್ಭವವಾಗಿದ್ದಾಳೆ. ಕಥೆಗಳಲ್ಲಿನ ಎಲ್ಲಾ ನಾಯಕಿಯರೂ ಇದೇ ಗುಣಗಳ ಪ್ರತೀಕ. ಇವರು ಸಮಸ್ಯೆಗಳನ್ನು ಮುಖಾಮುಖಿಯಾಗಿ ಎದುರಿಸುತ್ತಾರೆ. ತಮ್ಮ ಭವಿಷ್ಯವನ್ನು ಗಂಡ, ಅಪ್ಪ, ಸಮಾಜ, ಧರ್ಮಗಳ ಕೈಗೆ ಕೊಡದೇ ತಾವೇ ನಿರ್ಧರಿಸುತ್ತಾರೆ. ಇವರ ನಿಲುವುಗಳು ಸ್ತ್ರೀಪರವಾಗಿದ್ದರೂ ಅವು ಎಲ್ಲಾ ಘೋಷಣೆಯ ರೂಪ ತಾಳುವುದಿಲ್ಲ. ಕಥೆಯ ಸಂದರ್ಭದಿಂದಲೇ ಅವು ಸಹಜವೆಂಬಂತೆ ಹೊಮ್ಮುತ್ತವೆ. ಪುರುಷರ ನಯವಂಚನೆ, ಹೇಡಿತನ, ಸಂಪ್ರದಾಯ, ಶರಣತೆಗಳನ್ನು ಕಥೆಯ ಮೂಲಕವೇ ಬಯಲುಗೊಳಿಸುತ್ತಾರೆ. ಹೀಗೆ ಎಲ್ಲಾ ಸಂಕೀರ್ಣತೆಗಳೊಂದಿಗೆ ಗ್ರಹಿಸುವ ಹೆಚ್ಚಿನ ಸೂಕ್ಷ್ಮತೆ ಹಾಗೂ ಸಂವೇದನಾ ಶೀಲತೆಗಳು ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಕಥೆಗಳು ಈ ಎಲ್ಲದರ ವ್ಯಾಪ್ತಿಯನ್ನು ಒಳಗೊಂಡಿದೆ.

ಪ್ರಸ್ತುತ ಈ ಸಂಪ್ರಬಂಧವು ಮಹಿಳಾ ಕಥಾ ಸಾಹಿತ್ಯದಲ್ಲಿ ಅದರಲ್ಲಿಯೂ ವೀಣಾರವರ ಕಥೆಗಳಲ್ಲಿನ ಹೆಣ್ಣಿನ ಜೀವನವನ್ನು, ವ್ಯಕ್ತಿತ್ವವನ್ನು ಕುರಿತು ಓದುಗರ

ಮನಸ್ಸು ತಟ್ಟುವಂತೆ ನಿರೂಪಿಸುವಲ್ಲಿ ವೀಣಾರವರು ಹೇಗೆ ಯಶಸ್ವಿಯಾಗಿದ್ದಾರೆ? ಈ ದೃಷ್ಟಿಯಲ್ಲಿ ಹೆಣ್ಣಿನ ಮನಸ್ಥಿತಿ ಮತ್ತು ಮನೋದೌರ್ಬಲ್ಯ ಆಕೆಯನ್ನು ಸಮಾಜ ನೋಡುವ ವಿಭಿನ್ನ ರೀತಿ ಹಾಗೂ ಸ್ವೀಕರಿಸುವ ಮನೋಭಾವ ಎಂಥದು ? ಮುಂತಾದ ಹಲವು ವಿಚಾರಗಳ-ಸಂಬಂಧಗಳ ಶೋಧನೆ ಇವರ ಕಥೆಗಳಲ್ಲಿ ನಡೆಯಬೇಕಾಗಿದೆ. ಹೀಗಾಗಿ ವೀಣಾರವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳ ವಿಶ್ಲೇಷಣೆ ಅಗತ್ಯವಾಗಿದ್ದು ಈ ಅಧ್ಯಯನವು ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೆಣ್ಣಿನ ವಿಭಿನ್ನ ಮುಖಗಳ ಅಧ್ಯಯನವನ್ನು ಮಾಡುವುದೇ ಈ ಸಂಪ್ರಬಂಧದ ಉದ್ದೇಶವಾಗಿದೆ.

ಅಧ್ಯಾಯ - ೧

''ಮಹಿಳಾ ಕಥಾ ಸಾಹಿತ್ಯ ಅದರ ಸ್ವರೂಪ, ಲಕ್ಷಣ ಮತ್ತು ವಿವಿಧ ಧಾರೆಗಳು''

ಪ್ರವೇಶಿಕೆ :

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೊಸಗನ್ನಡ ಸಾಹಿತ್ಯ ಒಂದು ಪ್ರಮುಖ ಘಟ್ಟ ಸಾಮಾಜಿಕ ಜೀವನದಲ್ಲುಂಟಾದ ಸ್ಥಿತ್ಯಂತರಗಳು ಸಾಹಿತ್ಯದ ಮೇಲೆ ಪ್ರಭಾವವನ್ನುಂಟು ಮಾಡಿದವು. ಮುಖ್ಯವಾಗಿ ಅದು ಶಿಕ್ಷಣ, ಸಾಹಿತ್ಯ, ಕೈಗಾರಿಕೆ - ಹೀಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳನ್ನುಂಟು ಮಾಡಿದವು. ಇಂಗ್ಲೀಷಿನ ರೊಮ್ಯಾಂಟಿಕ್ ಸಾಹಿತ್ಯದ ಪ್ರಭಾವ ಹೊಸಗನ್ನಡ ಸಾಹಿತ್ಯದ ಮೇಲೆ ಅನೇಕ ರೀತಿಗಳಲ್ಲಿ ಉಂಟಾಯಿತು. ಧೋರಣೆಗಳ ಪ್ರಭಾವ, ಕಾವ್ಯರೂಪ ಪ್ರಭಾವ, ತಾತ್ವಿಕತೆಯ ಪ್ರಭಾವ ಭಾವನೆಗಳ ಪ್ರಭಾವ. ವಿಚಾರಗಳ ಪ್ರಭಾವ ಇತ್ಯಾದಿ ಸ್ಥೂಲವಾಗಿ ಗುರುತಿಸಿಕೊಳ್ಳಬಹುದು. ಮುಖ್ಯವಾಗಿ ಈ ಹೊಸ ಸಂಧರ್ಭದಲ್ಲಿ ಕೈಗಾರಿಕಾ ಪ್ರಜ್ಞೆ ಹಾಗೂ 'ಗ್ರಾಮೀಣ ಪ್ರಜ್ಞೆ'ಜನತೆಯನ್ನು ಹೊಸ ಸಂಘರ್ಷ, ಹೋರಾಟ ಸಮಸ್ಯೆಗಳಿಗೆ ಈಡು ಮಾಡಿತು.

ಇದರ ಜೊತೆ-ಜೊತೆಗೆ ನಮ್ಮ ಬದುಕಿನ ಮೇಲೆ ರಾಷ್ಟ್ರೀಯ ಚಳುವಳಿ ತೀವ್ರವಾದ ಪ್ರಭಾವವನ್ನುಂಟು ಮಾಡಿತು. ಪಾಶ್ಚಾತ್ಯ ಸಂಪರ್ಕ, ಸಾಮಾಜಿಕ ಚಿಂತನೆಗಳ ಪರಿಣಾಮದಿಂದ ಸಮಾಜದಲ್ಲಿ 'ಮಧ್ಯಮವರ್ಗ' ಉದಯವಾಯಿತು. ಈ ವರ್ಗ ಹೊಸ ಶಿಕ್ಷಣದ ಕಾರಣದಿಂದ ನಮ್ಮ ಅರ್ಥಪೂರ್ಣ ಹಳೆಯ ವಿಚಾರಗಳನ್ನು ಉಳಿಸಿಕೊಳ್ಳುವುದರ ಜೊತೆ -ಜೊತೆಗೆ ಚಿಕಿತ್ಸಕ ಮನೋಭಾವವನ್ನು ರೂಢಿಸಿಕೊಂಡಿತು. ಇದರೊಂದಿಗೆ ಸುಧಾರಣಾ ಮನೋಭಾವ, ಮಾನವತಾ ಮನೋಭಾವವನ್ನು ಬೆಳೆಸಿಕೊಂಡಿತು.

ಮುಖ್ಯವಾಗಿ ನಮ್ಮ 'ದೇಸೀ ಸಂಸ್ಕೃತಿ' ಹಾಗೂ ಹೊಸ 'ವಿದೇಶಿ ಸಂಸ್ಕೃತಿ' ಇವೆರಡರ ನಡುವಿನ ಆಯ್ಕೆಯಲ್ಲಿ ಘರ್ಷಣೆ ಹಾಗೂ ದ್ವಂದ್ವಗಳು ಕಾಣಿಸಿಕೊಂಡವು. ಈ ಯುಗದಲ್ಲಿ ಕಾಣಿಸಿಕೊಂಡ ಸಮಾಜ ಸುಧಾರಕರು ಹಾಗೂ ಸಮಾಜ ಚಿಂತಕರು ಭಾರತೀಯ ಬದುಕಿನಲ್ಲಿ 'ಹೆಣ್ಣು' ಹಾಗೂ 'ದಲಿತ' ಇವರಿಬ್ಬರ ಸ್ಥಿತಿ-ಗತಿಗಳನ್ನು ಸಹಾನುಭೂತಿಯಿಂದ ಗಮನಿಸುವ ಕಳಕಳಿ ತೋರಿದರು.

ಮಹರ್ಷಿ ಕರ್ವೆ ರಾಜಾರಾಮ್ ಮೋಹನ್‌ರಾಮ್ - ಅಂತಹವರು ಸ್ತ್ರೀ ಶಿಕ್ಷಣದ ಅಗತ್ಯ ಹಾಗೂ ಉದ್ದೇಶಗಳನ್ನು ಕುರಿತಂತೆ ತುಂಬಾ ಗಂಭೀರವಾಗಿ ಆಲೋಚಿಸಿದರು. ''ಸ್ತ್ರೀ ಶಿಕ್ಷಣದ ಉದ್ದೇಶ'' ಎಂಬ ಲೇಖನದಲ್ಲಿ ಕರ್ವೆಯವರು ಹೆಣ್ಣಿಗೆ ಶಿಕ್ಷಣ ಅತಿ ಅವಶ್ಯಕ ಎಂಬ ವಿಚಾರವನ್ನು ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಬ್ರಾಹ್ಮಣ ಮಹಿಳೆಯರಿಗೆ ಸಂಪ್ರದಾಯ ಆಚಾರ, ವಿಚಾರ, ಧಾರ್ಮಿಕ ನಂಬಿಕೆಗಳ ಹಿನ್ನೆಲೆಯಲ್ಲಿ ಹಾಕಿರುವ ನಿರ್ಭಂಧಗಳು, ಕಟ್ಟು-ಪಾಡುಗಳು ಅದೆಷ್ಟು ಅಮಾನವೀಯವಾಗಿದೆ ಎಂಬುದನ್ನು ಹೇಳುತ್ತಲೇ ಇಂತಹ ಸ್ತ್ರೀಯರಿಗಿರುವ ಒಂದೇ ವಿಮೋಚನೆಯ ಮಾರ್ಗ ಎಂದರೆ 'ಸ್ತ್ರೀಶಿಕ್ಷಣ', 'ಸ್ತ್ರೀ - ವಿದ್ಯಾಭ್ಯಾಸ' ಎಂಬ ವಿಚಾರವನ್ನು ಪ್ರತಿಪಾದಿಸಿದರು.

ಇದೇ ಸಂದರ್ಭದಲ್ಲಿ ಬ್ರಾಹ್ಮಣ ಮಹಿಳೆಯರಿಗೆ ಸಂಪ್ರದಾಯ ಆಚಾರ, ವಿಚಾರ, ಧಾರ್ಮಿಕ ನಂಬಿಕೆಗಳ ಹಿನ್ನೆಲೆಯಲ್ಲಿ ಹಾಕಿರುವ ನಿರ್ಭಂಧಗಳು, ಕಟ್ಟು-ಪಾಡುಗಳು ಅದೆಷ್ಟು ಅಮಾನವೀಯವಾಗಿದೆ ಎಂಬುದನ್ನು ಹೇಳುತ್ತಲೇ ಇಂತಹ ಸ್ತ್ರೀಯರಿಗಿರುವ ಒಂದೇ ವಿಮೋಚನೆಯ ಮಾರ್ಗ ಎಂದರೆ 'ಸ್ತ್ರೀ ಶಿಕ್ಷಣ' 'ಸ್ತ್ರೀ ವಿದ್ಯಾಭ್ಯಾಸ' ಎಂಬ ವೈಚಾರಿಕ ಜಾಗ್ರತಿ ಕಾಣಿಸಿಕೊಂಡಿತು. ಸ್ತ್ರೀಯರ ಶಿಕ್ಷಣವು ಬಾಲ ವಿಧವೆಯರಿಗೆ, ವಿಧವಾ ಸಮಸ್ಯೆಗೆ, ಬಾಲ್ಯವಿವಾಹಕ್ಕೆ ಮರುಮದುವೆಯ ಚಿಂತನೆಗೆ ಸಹಕಾರಿಯಾಗುತ್ತದೆ ಎಂಬ ಆಶಾಭಾವನೆ ಮೂಡಿತು. ನಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಪಶ್ಚಿಮ ಸಂವೇದನೆಗಳಿಗೆ ಇಂಬು ಕೊಡುವಂತಹದೆ ಅಥವಾ ನಮ್ಮ ದೇಶೀ ಚಿಂತನೆಗಳಿಗೆ ಪೂರಕವಾಗುವಂತಹದೇ? ಪಶ್ಚಿಮ ಮಾದರಿ ಶಿಕ್ಷಣ ಅವಳ ದೇಸೀ ನಂಬಿಕೆಗಳಿಗೆ ಧಕ್ಕೆಯುಂಟು ಮಾಡಿ ನಮ್ಮ ಪಾರಂಪರಿಕ ಹೆಣ್ಣಿನ ಸೂಕ್ಷ್ಮತೆಗಳಿಗೆ ಪೆಟ್ಟು ಬಿದ್ದು , ನಮ್ಮ ಬದುಕಿನ ಮೇಲೆ ಉಂಟುಮಾಡುವ ಸ್ವರೂಪವೇನಾಗಬಹುದು ಎಂಬ ಜಿಜ್ಞಾಸೆ ಮೂಡಿತು. ಸ್ತ್ರೀಯರಿಗೆ ಶಿಕ್ಷಣ ನೀಡಿ ಅಡುಗೆ ಮನೆಯಿಂದ ಅವರನ್ನು ಬಿಡುಗಡೆಗೊಳಿಸಿ ಉದ್ಯೋಗಸ್ಥೆಯಾಗಿಸಿದರೆ ಕುಟುಂಬದ ಗತಿ ಏನಾಗಬಹುದೆಂಬ ಭೀತಿ ಸ್ತ್ರೀಯರಿಗೆ ಆರ್ಯಮಾತೆಯರ್‍ನ್ನಾಗಿಸುವ ಶಿಕ್ಷಣ ನೀಡಬೇಕೆಂಬ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಹೆಣ್ಣಿಗೆ ಪ್ರಕೃತಿದತ್ತವಾಗಿಯೇ ಭರಿಸುವ, ಕಾಪಾಡುವ, ಪೋಷಿಸುವ ತಾಯ್ತನದ ಗುಣಗಳಿರುವುದರಿಂದ ಅವಳು ಗೃಹಿಣಿ ಧರ್ಮದಿಂದ ವಿಮುಕ್ತಳಾಗುವುದು ಸರಿಯಲ್ಲ ಎಂಬ ಚಿಂತನೆಯಿಂದ ಹಿಡಿದು ಬ್ರಿಟೀಷರು

ಭಾರತೀಯರನ್ನು ದಾಸ್ಯದಲ್ಲಿಟ್ಟಿರುವಂತೆ ಪುರುಷರು ಸ್ತ್ರೀಯರನ್ನು ಗೃಹಬಂಧನದಲ್ಲಿಟ್ಟು ದಾಸಿಯರಂತೆ ಕಾಣುತ್ತಿದ್ದಾರೆ. ಅವರ ಪರಿಸ್ಥಿತಗಳನ್ನು ಅರ್ಥೈಸಿಕೊಳ್ಳಲು ಶಿಕ್ಷಣವು ನೆರವನ್ನೊದಗಿಸುವುದರಿಂದ ಸ್ತ್ರೀ ಶಿಕ್ಷಣದ ಕಡೆಗೆ ನಿರ್ಲಕ್ಷ್ಯವಿದೆ ಎಂಬ ಚಿಂತನೆಯವರೆಗೂ ಪರ ಹಾಗೂ ವಿರೋಧ ಪ್ರತಿಕ್ರಿಯೆಗಳು ಮೂಡಿಬಂದವು.

ಆಧುನಿಕ ಕನ್ನಡ ಮಹಿಳಾ ಸಾಹಿತ್ಯ

೨೦ನೇ ಶತಮಾನದ ಮೊದಲ ಅರ್ಧವನ್ನು ಆಧುನಿಕ ಕನ್ನಡ ಮಹಿಳಾ ಸಾಹಿತ್ಯ. ಮೊದಲ ಪೀಳಿಗೆಯ ಕಾಲ ಎಂದು ಗುರುತಿಸುವುದು ಈ ಕಾಲದ ಮೊದಲ ತಲೆಮಾರಿನ ಲೇಖಕಿಯರಲ್ಲಿ ನಂಜನಗೂಡು ತಿರುಮಲಾಂಬ ಆದ್ಯರು. ಈ ಕಾಲದ ಹೊಸ ಎಚ್ಚರದ ಸ್ತ್ರೀಯರು ತಮ್ಮ ಸಮಸ್ಯೆಗಳನ್ನು ತಾವೇ ವಿವರಿಸಿಕೊಳ್ಳಲು ಪರಿಹರಿಸಿಕೊಳ್ಳಲು ಪ್ರಯತ್ನಿಸಿದ್ದ ತಿರುಮಲಾಂಬಾ, ಕಲ್ಯಾಣಮ್ಮನಂತಹ ಮಹಿಳೆಯರ ಮೂಲಕ ಗಮನಿಸಬಹುದು. ಈ ಮಹಿಳೆಯರು ತಮ್ಮ ವೈಯಕ್ತಿಕ ಬದುಕಿನಲ್ಲಿ ನೊಂದವರಾಗಿದ್ದರು. ತಮ್ಮ ಚಿಂತನೆಗಳನ್ನು ಸಾಮಾಜಿಕ ನೆಲೆಯಲ್ಲಿ ಹಂಚಿಕೊಳ್ಳಲು ಇವರು ಬರವಣಿಗೆಯನ್ನು ಮಾಧ್ಯಮವಾಗಿಸಿಕೊಂಡರು. ಸ್ತ್ರೀ ಪರ ಕಾಳಜಿಗಳನ್ನು ಕೇಂದ್ರವಾಗಿರಿಸಿಕೊಂಡ ಪತ್ರಿಕೆಗಳನ್ನು ನಡೆಸಿದರು. ಸೃಜನಶೀಲ ನೆಲೆಯಲ್ಲಿ ಕಥೆ-ಕಾದಂಬರಿಗಳನ್ನು ರಚಿಸಿದರು. ಸಮಸ್ಯೆಗಳನ್ನು ಕಥೆ-ಕಾದಂಬರಿಗಳ ಕಾಲ್ಪನಿಕ ವ್ಯಕ್ತಿಗಳು, ಘಟನೆಗಳು, ಸಂದರ್ಭಗಳನ್ನು ಪರಿಶೀಲಿಸಿ ಅದಕ್ಕೊಂದು ಸೂಕ್ತ ಪರಿಹಾರ ಕಂಡು-ಕೊಳ್ಳಲು ಯತ್ನಿಸಿದರೆ ಪತ್ರಿಕೆಗಳ ಮುಖಾಂತರ ನೇರವಾಗಿ ದೃಢವಾಸ್ತವದ ನೆಲೆಯಲ್ಲಿ ಹೆಣ್ಣಿಗೆ ಸಂಬಂಧಿಸಿದ ಹೆಣ್ಣಿನ ಬದುಕಿಗೆ ಮುಖ್ಯವಾಗುವ ಹಲವಾರು ವಿಚಾರಗಳನ್ನು ಕುರಿತಂತೆ ವ್ಯಾಪಕವಾದ ಚರ್ಚೆಗಳನ್ನು ನಡೆಸಿದರು. ಹೀಗೆ ಈ ಕಾಲದ ಹೊಸ ಎಚ್ಚರದ ಮಹಿಳೆಯರು ಪತ್ರಿಕೆಗಳ ಮುಖಾಂತರವಾಗಲಿ ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಥೆ-ಕಾದಂಬರಿಗಳ ಮುಖಾಂತರವಾಗಲಿ ಸತತವಾಗಿ ತಮ್ಮ ನಿಲುವುಗಳನ್ನು ನಿಖರವಾಗಿ ದಾಖಲಿಸಿದುದು ಮಹತ್ವದ ಪ್ರಯತ್ನಗಳೆಂದೇ ಗುರುತಿಸಿಕೊಳ್ಳಬೇಕು.

ಹೆಣ್ಣಿನ ಬಗೆಗೆ ಕಳಕಳಿ ಹೊಂದಿದ ಪುರುಷರಾಗಲಿ ಅಥವಾ ತಮ್ಮ ಬಗೆಗೆ ತಾವೇ ಕಳಕಳಿ ಹೊಂದಿ ಮಹಿಳಾ ಪರ ಸಂವೇದನೆಗಳಿಂದಲೇ ಬರೆದ ಲೇಖಕಿಯರಾಗಲೀ

ಭಾರತೀಯ ಸಂಸ್ಕೃತಿಯ ಚೌಕಟ್ಟಿನ ಒಳಗಡೆಯೇ ಅವಳ ಸ್ಥಿತಿ-ಗತಿಗಳ ಬಗೆಗೆ ಚಿಂತಿಸಿದರು. ಈ ಯುಗದ ಮತ್ತೊಂದು ದ್ವಂದ್ವವೆಂದರೆ ಹೊಸ ವಿದ್ಯಾಭ್ಯಾಸ ಅವಳನ್ನು ಎಲ್ಲಾ ಪರಂಪರಾಗತ ಕೌಟುಂಬಿಕ ಹಾಗೆ ಸಾಮಾಜಿಕ ನಂಬಿಕೆಗಳ ವಿರುದ್ಧ ತಿರುಗಿ ಬಾಳುವಂತೆ ಮಾಡಿಬಿಡುತ್ತದೋ ಎಂಬ ನಿಗೂಢವಾದ ಭೀತಿ. ಇಂತಹ ಸಂದರ್ಭಗಳಲ್ಲಿಯೇ ಅವರು ಮಹಿಳೆಯರನ್ನು ಕಟುವಾಗಿ ಟೀಕಿಸಿದ್ದಾರೆ. ಅವರ ಪ್ರಗತಿಪರ ಆಲೋಚನೆಗಳಿಗೆ ಕಡಿವಾಣ ಹಾಕಿದ್ದಾರೆ. 'ಗೃಹವಾದಿನಿ' ಯರ ಮಾದರಿಗೆ ಒತ್ತು ನೀಡಿ ಪ್ರೋತ್ಸಾಹ ನೀಡಿದ್ದಾರೆ.

ಪ್ರಾರಂಭದ ಸ್ತ್ರೀವಾದಿ ಚಿಂತಕರಿಗೆ ಇವತ್ತಿನ ಸಂದರ್ಭದಲ್ಲಿ ಅಷ್ಟೇನೂ ಮಹತ್ವ ಎನ್ನಿಸದ ವಿಚಾರಗಳು ತುಂಬಾ ಮುಖ್ಯವಾಗಿದ್ದವು. ವಿಧವಾ ಸಮಸ್ಯೆ ಬಹಳ ಮುಖ್ಯ ಸಮಸ್ಯೆಗಳಲ್ಲೊಂದಾಗಿ ಎಲ್ಲಾ ಭಾಷೆಯಲ್ಲೂ ಕಾಣಿಸಿಕೊಂಡಿದೆ. ಬಂಕಿಮ ಚಂದ್ರರು ಬರೆದ ಅನೇಕ ಬಂಗಾಳಿ ಕಾದಂಬರಿಗಳ ಕೇಂದ್ರ ಪಾತ್ರ ಹೆಣ್ಣು. ಹಾಗೆ ಮರಾಠಿ ಕೃತಿಗಳಲ್ಲಿ ಹೆಣ್ಣಿಗೆ ಸಂಬಂಧಿಸಿದ ಮೌಲ್ಯಗಳನ್ನು ಕುರಿತು ಚರ್ಚಿಸಲಾಗಿದೆ. ಆದರೆ ಇಲ್ಲಿ ಅವರು ಹೆಚ್ಚು ಒತ್ತುಕೊಡುವುದು ನಾರೀಧರ್ಮ. ಹದಿಬದೆಯ ಧರ್ಮಕ್ಕೆ ಹೆಣ್ಣಿಗೆ ಸತಿತನವಿರಬೇಕು. ಪತಿವ್ರತೆಯಾಗಿರಬೇಕು. ಒಳ್ಳೆಯ ನಡತೆ, ಮಾತೃತ್ವವಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಅವಳು ಒಳ್ಳೆಯ ಹೆಂಡತಿ, ಸೊಸೆ, ತಾಯಿ, ಅಕ್ಕ, ತಂಗಿ ಮಗಳಾಗಿರಬೇಕು ಎಂದು ನಂಬಿದೆ. ಇದರೊಂದಿಗೆ ಸಮಾನ ಮಾಧ್ಯಮ ಚಿಂತನೆಯಲ್ಲಿ ನಿಂತ ಸುಧಾರಣಾವಾದಿಗಳ ತಂಡವೊಂದು ಕಾಣಿಸಿತು. ಅವರು ಭಾರತೀಯ ಪಾರಂಪರಿಕ ಚಿಂತನೆಯ ಚೌಕಟ್ಟನ್ನು ಮೀರದೆಲೆ ಮಾನವೀಯ ನೆಲೆಗಳಲ್ಲಿ ಹೆಣ್ಣನ್ನು ಗುರುತಿಸಿಕೊಳ್ಳುವ ಮಾರ್ಗವನ್ನು ಅನುಸರಿಸಿದರು. ಹೆಣ್ಣಿನ ಬಗೆಗೆ ಕರುಣೆ, ಅನುಕಂಪ, ಔದಾರ್ಯ ಅವರಲ್ಲಿದ್ದರೂ ಅವಳ ವೈಧವ್ಯ ಸಮಸ್ಯೆಗೆ ಸಂಬಂಧಿಸಿದಂತೆಯಾಗಲಿ ಅವಳ ಕೇಶಮುಂಡನಕ್ಕೆ ಸಂಬಂಧಿಸಿದಂತೆ ಆಗಲಿ ಅಥವಾ ಅವಳ ಮರುಮದುವೆಗೆ ಸಂಬಂಧಿಸಿದಂತೆ ಆಗಲಿ ಅವರು ತುಂಬಾ ಸುಲಭವಾಗಿ ಹಳೆಯದನ್ನು ಸಾರಸಗಟಾಗಿ ಬಿಟ್ಟುಬಿಡಲಾಗಿ ಹೊಸ ಚಿಂತನೆಗಳನ್ನು ಸುಲಭವಾಗಿ ಶೀಘ್ರವಾಗಿ, ಯಥಾವತ್ತಾಗಿ ಒಪ್ಪಿಕೊಳ್ಳಲೂ ಇಲ್ಲ.

ಇಂತಹ ಸಂದರ್ಭದಲ್ಲಿ ಪಂಡಿತ ರಮಾಭಾಯಿಯಂತಹವರು ಸಮಾಜ ಸುಧಾರಣೆ, ಅದರಲ್ಲೂ ಮುಖ್ಯವಾಗಿ ಸ್ತ್ರೀ-ಸುಧಾರಣೆಯ ನೆಲೆಯಲ್ಲಿ ಸಾಕಷ್ಟು ಪ್ರಗತಿಪರ

ನಿಲುವುಗಳನ್ನು ತೋರಿದರು. ಅವರ ಚಿಂತನೆಗಳು ಸಮಕಾಲೀನ ಬದುಕಿನ ಸಂದರ್ಭದಲ್ಲಿ ತೀರಾ ಕ್ರಾಂತಿಕಾರೀ ಆಲೋಚನೆಗಳು ಎನಿಸಿದವು. ಬ್ರಾಹ್ಮಣ ಜಾತಿಯಿಂದ ಬಂದ ರಮಾಬಾಯಿಯವರು ಶೂದ್ರಜಾತಿಯ ಬಿಪಿನ್ ಬಿಹಾರಿದಾಸರೊಂದಿಗೆ ವಿವಾಹವಾದರು. ಬಹಳ ಬೇಗನೆ ಪತಿಯನ್ನು ಕಳೆದುಕೊಂಡಾಗ ವೈಧವ್ಯದ ಶಾಖ ಅವರಿಗೆ ತಟ್ಟಿತು. ಬಾಲ ವಿಧವೆಯರಿಗೆಂದು 'ಶಾರದಾ ಸದನ' ಎಂಬ ವಿಧವೆಯರ ವಸತಿ ಗೃಹ ಕಟ್ಟಿದರು.

ಹಿಂದೂ ಧರ್ಮದ ಅಮಾನವೀಯ ಆಚರಣೆಗಳಿಗೆ ಬೇಸತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ಅವರು ವೈಯಕ್ತಿಕ ಬದುಕಿನಲ್ಲಿ ಹೆಣ್ಣಾಗಿ ಅತ್ಯಂತ ದಿಟ್ಟವಾಗಿ ನಡೆದುಕೊಂಡಿದ್ದಷ್ಟೆ. ಅಂಥ ಹೆಣ್ಣಿನ ಸುಧಾರಣೆಗಳಿಗಾಗಿ ಸಾಕಷ್ಟು ಯೋಚನೆಗಳನ್ನು ಕೈಗೊಂಡು ಅದರಲ್ಲಿ ಯಶಸ್ವಿಯೂ ಆದರು. ಪಂಡಿತ ರಮಾಬಾಯಿಯವರು ಮಹಿಳೆಯರ ದೌರ್ಬಲ್ಯಗಳನ್ನು ಗುರುತಿಸುತ್ತಾ ಅವಳಿಗೆ ಶಿಕ್ಷಣ, ಉದ್ಯೋಗದ ಅವಶ್ಯಕತೆ ಇದೆ ಎಂದು ಹೇಳುತ್ತಲೇ ಪಾತಿವ್ರತ್ಯ. ಉದ್ಯೋಗ, ದೈವಭಕ್ತಿ ಇಂತಹ ಮೌಲ್ಯಗಳನ್ನು ಹೆಂಗಸರು ಬಿಟ್ಟುಕೊಡದೆ ಕಾಪಾಡಬೇಕೆಂಬ ಎಚ್ಚರ ನೀಡುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೆಂಗಸರಿಗೆ ಮನರಂಜನೆಯ ಅಗತ್ಯವನ್ನು ಆಕೆ ನಾಟಕ ಇತ್ಯಾದಿಗಳನ್ನು ನೋಡಿದರೆ ಹಾಳಾಗುತ್ತಾಳೆ ಎಂದು ಹೇಳುತ್ತಾರೆ. ಇದೇ ರಮಾಬಾಯಿಯವರು ಇನ್ನೊಂದೆಡೆ ಹೆಣ್ಣಿಗೆ ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಬಾರದು, ಅವಳು ಶಾಲೆಗೆ ಹೋಗಿ ವಿದ್ಯೆ ಕಲಿಯಬೇಕು. ಕನಿಷ್ಠ ಮಟ್ಟದ ಜ್ಞಾನವನ್ನಾದರೂ ಪಡೆಯಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಪಂಡಿತ ರಮಾಬಾಯಿಯವರಿಗೆ ಹೆಣ್ಣಿನ ಉದ್ಧಾರದ ಬಗೆಗೆ ಸಾಕಷ್ಟು ಆಸಕ್ತಿ ಇದ್ದರೂ ನಾವು ಸುವರ್ಣ ಮಧ್ಯ ನೆಲೆಯಲ್ಲಿ ನಿಂತ ಸುಧಾರಣಾವಾದಿ ಮನೋಭಾವದ ತಿಳುವಳಿಕೆ ಗ್ರಹಿಕೆಯಾಗಿ ನಿಲ್ಲುತ್ತದೆ. ಮಹಾರಾಷ್ಟ್ರ ಬಂಗಾಳಗಳಿಗೆ ಹೋಲಿಸಿದರೆ ಕನ್ನಡ ನಾಡಿನಲ್ಲಿ ಮಹಿಳೆಯರ ಬಗೆಗಿನ ಚಿಂತನೆಗಳು ಈ ಮಟ್ಟದ ಪ್ರಖರತೆಯ ಸ್ವರೂಪವನ್ನು ಪಡೆಯಲಿಲ್ಲ.

ಭಾರತೀಯ ಬದುಕಿನ ಪುನರುಜ್ಜೀವನ ಕಾಲದಲ್ಲಿ ಪರಂಪರಾಗತ ನಂಬಿಕೆಗಳಿಗೆ ದೃಢವಾಗಿ ನಂಬಿ ಅದಕ್ಕಂಟಿಕೊಂಡಿದ್ದ ಅದೇ ತಾನು ಬೀಸುತ್ತಿದ್ದ ಹೊಸಗಾಳಿಗೆ,

ಹೊಂದಿಕೊಳ್ಳುವ ಸಂದರ್ಭದಲ್ಲಿ ಅದು ಅನೇಕ ಸಾಂಸ್ಕೃತಿಕ ದ್ವಂದ್ವ, ವೈರುಧ್ಯತೆಗಳಿಗೆ ಮುಖಾಮುಖಿಯಾಯಿತು. ವಸಾಹತುಶಾಹಿ ಅನುಭವಗಳು ಮನುಷ್ಯನ ಬದುಕನ್ನು ಗತದ ಹಳಹಳತೆಯಲ್ಲೇ ಮುಳುಗುತ್ತ ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ವಿಜೃಂಭಿಸುವುದು ಒಂದು ನೆಲೆಯಲ್ಲಾದರೆ ಮತ್ತೊಂದು ನೆಲೆಯಲ್ಲಿ ಆದರ್ಶವಾದ ಉದಾರವಾದ ನವಮಾನವತಾವಾದಗಳನ್ನು ಎತ್ತಿ ಹಿಡಿಯುವ ಪ್ರಯತ್ನಗಳಿದ್ದವು. ಈ ಕಾರಣದಿಂದಲೇ ಈ ಯುಗದ ಬರಗಾರರ ಹೆಣ್ಣಿನ ಚಿತ್ರಣದ ಹಿಂದೆ ಪಾರಂಪಾರಿಕ ಮೌಲ್ಯಗಳನ್ನು ಉಳಿಸಿಕೊಳ್ಳುತ್ತ ಆಧುನಿಕ ಸಂವೇದನೆಯನ್ನು ಪ್ರಕಟಿಸುವ ಪ್ರಯತ್ನಗಳೂ ಇವೆ. ಈ ಕಾಲದ ಬರವಣಿಗೆಯಲ್ಲಿ ಈ ಎರಡು ಅಂಶಗಳು ಒಂದಕ್ಕೊಂದು ಸಂಘರ್ಷಕ್ಕೆ ಒಳಪಡುವುದಿಲ್ಲ.

ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ನವೋದಯದ ಸಂದರ್ಭ ಮಹಿಳಾ ಬರವಣಿಗೆ ಒಂದು ವಿಶಿಷ್ಟವಾದ ಸಂದರ್ಭವಾಗಿದೆ. ಹೆಣ್ಣು ತನ್ನ ಮನೆ, ಕುಟುಂಬ, ಮಕ್ಕಳು ಈ ವಾತಾವರಣದಲ್ಲೇ ಬೆಚ್ಚಗಿದ್ದ ಸಂದರ್ಭದಲ್ಲಿ ನವೋದಯದ ತಾತ್ವಿಕ ನಂಬಿಕೆ, ಮನೋಭಾವ, ಆಲೋಚನೆಗಳು ಅವಳಿಗೆ ಸ್ವಲ್ಪ ಮಟ್ಟಿಗಾದರೂ ಮನೆಯಿಂದ ಹೊರಬರುವ ಅವಕಾಶ ಕಲ್ಪಿಸಿಕೊಟ್ಟಿತು. ಇಲ್ಲಿ ಈ ಪ್ರಯತ್ನಕ್ಕೆ ಅವಳೇ ವಿಶೇಷವಾಗಿ ಪ್ರಯತ್ನಿಸದಿದ್ದರೂ ಅದು ನವೋದಯದ 'ಉದಾರವಾದ'ದ ಫಲವಾಯಿತು. ಈ ಯುಗದಲ್ಲಿ ಅವಳು ಭೌತಿಕವಾಗಿ ಮನೆಯಾಚೆ ಬಂದರೂ ಅವಳ ಮನಸ್ಸು ಮನೆಯಂಗಳದಿಂದ ಹೊರಬರಲಿಲ್ಲ. ಈ ಕಾರಣದಿಂದಲೇ ನವೋದಯ ಯುಗದಲ್ಲಿ ಮಹಿಳೆಯರು ತಮ್ಮ ಬರವಣಿಗೆಯ ಕ್ಷೇತ್ರ ವಸ್ತುವನ್ನು ಕೌಟುಂಬಿಕ ಪರಿವಲಯದಿಂದ ಆಚೆ ಸ್ಥಿತ್ಯಂತರಗೊಳಿಸಲಿಲ್ಲ. ಮಹಿಳೆಯ ಈ ಭೌತಿಕ ಹೊರಬರುವಿಕೆಗೆ ಈಗಾಗಲೇ ಇವರ ಹಿಂದಿನ ತಲೆಮಾರಿನ ಎಂದರೆ ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟದ ಲೇಖಕರಾದ ಗುಲ್ವಾಡಿ ವೆಂಕಟರಾಯರು, ಬೆಂಗಳೂರು ಬಾಬುರಾಯ, ಲಕ್ಷ್ಮಣ ಭೀಮರಾಯ ಗದಗಕರ ಮುಂತಾದ ಲೇಖಕರು ಕಾರಣರಾದರು. ಈ ಲೇಖಕರಿಗೆ ಹೆಣ್ಣಿನ ಸಾಮರ್ಥ್ಯ ಸಾಧ್ಯತೆಗಳನ್ನು ಗೌರವಿಸುವ ಮನಸ್ಸಿದ್ದರೂ ಇದುವರೆಗೆ ಅವಳನ್ನು ಕಂಡರಿಸಿದ ಮಾದರಿಗಳಂತೆ ಭಿನ್ನವಾಗಿ ಕಾಣಲು ಸಾಧ್ಯವಾಗುವುದಿಲ್ಲ. ಸ್ತ್ರೀಯರು ಸಾಂಸ್ಕೃತಿಕ ಇತಿಹಾಸದಲ್ಲಿ ಯುವ ಮೌಲ್ಯಗಳು ತಮ್ಮ ಬಂಧನಕ್ಕೆ ಕಾರಣವಾಯಿತು ಎಂದು ಭಾವಿಸಿದರೋ ಈ ಲೇಖಕರು ಅದೇ ನಮ್ಮ

ದೇಶದ ಹೆಣ್ಣಿನ ಮೌಲ್ಯಗಳು ಎಂದು ಭಾವಿಸಿದರು. ಮುಖ್ಯವಾಗಿ ಇವರ ಕೃತಿಗಳಲ್ಲಿ 'ಸತೀತ್ವ' ಶೀಲ, ಪಾತಿವ್ರತ್ಯ, ತಾಯ್ತನ ಇವು ಮತ್ತೆ ಮತ್ತೆ ಚರ್ಚೆಗೊಳಗಾಗುತ್ತ ಹೆಣ್ಣನ್ನು ಹೆಣ್ಣೆಂದು ಗುರುತಿಸಲು ಇವುಗಳು ಬಹಳ ಅಗತ್ಯ ಎಂದು ಭಾವಿಸಿದರು. ಇವರು ಸ್ತ್ರೀ ಸುಧಾರಣೆಯ ಕಡೆಗೆ ಕಣ್ಣಿರಿಸಿಕೊಂಡರೂ ಅದು ನಮ್ಮ ಸಂಸ್ಕೃತಿಯ ಸಾಂಪ್ರದಾಯಿಕ ನಂಬಿಕೆಗಳಿಗೆ, ಭಾವನೆಗಳಿಗೆ ಪೆಟ್ಟು ಕೊಡದಂತಹ ಸುಧಾರಣೆಯ ನೆಲೆಗಳಾಗಿದ್ದವು. ಸ್ತ್ರೀಯರಿಗೆ ಶಿಕ್ಷಣ ಅಗತ್ಯ ಎಂದುಕೊಂಡರೂ ನಮ್ಮ ಸಾಂಪ್ರದಾಯಿಕ ಹಿಂದೂ ಸಾಹಿತ್ಯದ ಕಲ್ಪನೆಗೆ ಅದು ಪೂರಕವಾಗಬೇಕೇ ವಿನಾ ಅದು ವಿರೋಧದ ಸ್ವರೂಪ ತಳೆಯಬಾರದೆಂಬ ಉದ್ದೇಶ ವ್ಯಕ್ತಪಡಿಸಿದರು. ಹೆಣ್ಣಿನ ಬಾಲ್ಯವಿವಾಹ, ಬಾಲವೈದವ್ಯ, ಕೇಶಮುಂಡನಗಳಿಗೆ ವಿರೋಧ ತೋರಿದರಾದರೂ ಮರುಮದುವೆ ಅವಳ ಈ ಸಮಸ್ಯೆಯ ಪರಿಹಾರಗಳಲ್ಲೊಂದು ಎಂದು ಎಂದಿಗೂ ಚಿಂತಿಸುವುದಿಲ್ಲ.

ಸ್ವಾತಂತ್ರ್ಯಾನಂತರದಲ್ಲಿ ನವೋದಯ ಸಾಹಿತ್ಯಕ್ಕೆ ಪ್ರತಿಯಾಗಿ ಎದ್ದ ಪ್ರಗತಿಶೀಲ ಅಲೆ ಕನ್ನಡ ಸಾಹಿತ್ಯದ ಚಿಂತನ ಕ್ರಮದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತು.ಇದೂ ಕೂಡ ಅವತ್ತಿನ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಉಂಟಾದ ಬದಲಾವಣೆಗಳ ಪ್ರತಿಕ್ರಿಯೆಯಾಯಿತು. ಸ್ವಾತಂತ್ರ್ಯ ಪೂರ್ವದ ಕನಸುಗಳು ಭಗ್ನಗೊಂಡ ವೈರಾಗ್ಯ ಈ ಸಾಹಿತ್ಯ ಸೃಷ್ಠಿಯ ಹಿನ್ನೆಲೆಯಲ್ಲಿದ್ದೇ ಇದೆ. ಈ ಕಾರಣದಿಂದಲೂ ಈ ಸಾಹಿತ್ಯ ತನ್ನ ಮಡಿಲಿನಲ್ಲಿ ಉರಿಯುವ ಸಿಡಿಯುವ ಪ್ರವೃತ್ತಿಗಳನ್ನು ಕಟ್ಟಿಕೊಂಡೇ ಹುಟ್ಟಿತು. ಅದಕ್ಕೆ ಕಾರಣರಾದವರ ವಿರುದ್ಧ ಹೋರಾಡಲು ಟೊಂಕಕಟ್ಟಿ ಸಿದ್ಧವಾಗಿ ನಿಂತಿತು. ಇದು ಮುಖ್ಯವಾಗಿ ಕಾರ್ಮಿಕರ ಸಮಸ್ಯೆ, ದುಡಿಯುವ ವರ್ಗದ ಶ್ರಮಿಕರ ಸಮಸ್ಯೆ, ಬಡತನದ ಫಲವಾಗಿ ತಪ್ಪು ಹಾದಿ ಹಿಡಿದು ವೇಶ್ಯಾವೃತ್ತಿಗಿಳಿದ ವೇಶ್ಯೆಯರ ಸಮಸ್ಯೆಗಳನ್ನು ತಮ್ಮ ಕೃತಿಗಳ ವಸ್ತುವಾಗಿ ಸ್ವೀಕರಿಸಿತು. ಇವರ ಚಿಂತನೆಯ ಹಿನ್ನೆಲೆಯಲ್ಲಿ ರಷ್ಯಾದ ಲೇಖಕರು ಚಿಂತಕರಿದ್ದರು. ಮತ್ತೊರ್ವ ಸಮಾಜವಾದೀ ಸಿದ್ಧಾಂತಗಳು ಇವರಿಗೆ ಬಹಳ ಮೆಚ್ಚುಗೆಯಾಯಿತು.

ನಮ್ಮ ದೇಶದಲ್ಲಿ ಉಂಟಾಗುತ್ತಿದ್ದ ಕೈಗಾರೀಕರಣ, ಹಳ್ಳಿಗಳಲ್ಲೂ ಕೃಷಿಯನ್ನು ನಂಬಿ ಬದುಕುತ್ತಿದ್ದ ರೈತಾಪಿ ವರ್ಗದವರನ್ನು ನಗರಗಳತ್ತ ಆಕರ್ಷಿಸಿತು. ಹಳ್ಳಿಗಳನ್ನು ಬಿಟ್ಟು ನಗರದ ಕಡೆಗೆ ಬಂದ ಹಳ್ಳಿಗರು ನಗರದ ಹೊರವಲಯಗಳಲ್ಲಿ ವಾಸ್ತವ್ಯ ಹೂಡಿ ನಗರದಲ್ಲಿ

ಕೊಳಚೆ ಪ್ರದೇಶಗಳು ತಲೆದೋರಿದವು. ಇಂಥ ಸಂದರ್ಭದಲ್ಲಿ ಗ್ರಾಮಪ್ರಜ್ಞೆಯೊಂದು ನಗರ ಜೀವನದಲ್ಲಿ ಹಲವು ಕ್ಷೇತ್ರಗಳಲ್ಲಿ ತೆರೆದಿದ್ದ ಇಂಥ ಉದ್ಯೋಗಗಳಿಗೆ ಇವರು ಅವಶ್ಯಕರಾದರು. ಇವರ ಮೂಲಕ ನಗರಾದ್ಯಂತ ಒಂದು ಅಸಂಘಟಿತ ಕಾರ್ಮಿಕ ವಲಯ ನಿರ್ಮಾಣವಾಯಿತು. ತಕ್ಕಮಟ್ಟಿಗೆ ವಿದ್ಯಾಭ್ಯಾಸ ಹೊಂದಿದ್ದು ಅತ್ತ ಹಳ್ಳಿಗಳಲ್ಲಿ ಆಸ್ತಿ-ಪಾಸ್ತಿಯೂ ಇಲ್ಲದ ಇತ್ತ ನಗರಗಳಲ್ಲಿ ಉದ್ಯೋಗವೂ ಇಲ್ಲದ ವರ್ಗವೊಂದು ನಗರಗಳಲ್ಲಿ ಸಂಕರ್ಷಕ್ಕೆ ಒಳಗಾಗಿತ್ತು. ಇದರೊಂದಿಗೆ ಬಡತನದಲ್ಲಿ ನರಳುವ ಹೆಣ್ಣುಮಕ್ಕಳು ಉದ್ಯೋಗಾವಕಾಶಗಳಿಗಾಗಿ ನಗರಗಳಿಗೆ ಬಂದು ವಿದ್ಯೆಯೂ ಇಲ್ಲದೆ ಮರ್ಯಾದೆಯಿಂದ ದುಡಿಯುವ ಅವಕಾಶವೂ ಇಲ್ಲದೆ ನಗರಗಳ ಗಿಲೀಟಿನ ಬದುಕಿಗೆ, ಮಧ್ಯವರ್ತಿ ತಲೆಹಿಡುಕರ ಕಾಮ ಪಿಪಾಸೆಗೆ ಬಲಿಯಾಗಿ ವೇಶ್ಯೆಯರಾದ ಹೆಣ್ಣುಗಳನ್ನು ಸಹಾನುಭೂತಿಯಿಂದ ನೋಡುವ ಮನಸ್ಸನ್ನು ಇವರ ಕಥೆ ಕಾದಂಬರಿಗಳ ಲೋಕ ಬಿಚ್ಚಿಡುತ್ತದೆ. ಅ.ನ.ಕೃ , ತ.ರಾ.ಸು. ಬಸವರಾಜ ಕಟ್ಟೀಮನಿ, ನಿರಂಜನ, ಚದುರಂಗ, ವ್ಯಾಸರಾಯ ಬಲ್ಲಾಳ, ರಾಮಚಂದ್ರ ಕೊಟ್ಟಲಗಿ, ಅರ್ಚಕ ವೆಂಕಟೇಶ್, ಕುಮಾರ ವೆಂಕಣ್ಣ. ವೆಂ.ಮು.ಜೋಶಿ - ಮುಂತಾದ ಕೃತಿಗಳು ಇಂತಹ ಚಿತ್ರಣಕ್ಕೆ ಮೊದಲಿಟ್ಟವು.

ಎಚ್.ವಿ. ಸಾವಿತ್ರಮ್ಮ, ಎಂ.ಕೆ. ಇಂದಿರಾ, ತ್ರಿವೇಣಿ, ಡಾ. ಅನುಪಮಾ ನಿರಂಜನ, ಸರಸ್ವತೀಬಾಯಿ, ರಾಜವಾಡೆ, ಸುಶೀಲ ಕೊಪ್ಪದ ಮುಂತಾದ ಲೇಖಕಿಯರು ಮೌಲ್ಯಾಧಾರಿತ ಕುಟುಂಬ ವ್ಯವಸ್ಥೆಯ ಅಸಮತೋಲನಗಳನ್ನು, ಅಸಮಾನತೆಗಳನ್ನು ಪರಿಶೀಲಿಸುವ ಕೆಲಸ ಮಾಡುತ್ತಾರೆ. ಇವರ ಕಥಾ ಜಗತ್ತಿನೊಳಗೆ ಕುಟುಂಬವೇ ಪ್ರಧಾನ ಕ್ಷೇತ್ರ. ಇಲ್ಲಿ ಹೆಣ್ಣು ಎದುರಿಸುವ ವರದಕ್ಷಿಣೆಯ ಸಮಸ್ಯೆ ಗಂಡಿನ ದಬ್ಬಾಳಿಕೆ, ಶೋಷಣೆಗೆ ಈಡಾದ ಅವಳ ಸಂಕಟ, ಅಸಹಾಯಕತೆಗಳು ಇವಕ್ಕೆಲ್ಲ ಪೂರಕತೆಯನ್ನು ಒದಗಿಸುವ ವಾತಾವರಣವನ್ನು ಚಿತ್ರಿಸುತ್ತಾರೆ.

ಪ್ರಗತಿಶೀಲ ಲೇಖಕರು ಸಮಾಜ ಸುಧಾರಣೆ, ಸಾಮಾಜಿಕ ಸಮಸ್ಯೆಗಳು, ಎಡಪಂಥೀಯ ಆಲೋಚನೆಗಳನ್ನು ಕುರಿತು ಅಬ್ಬರದ, ಆವೇಶದ ನೆಲೆಯಲ್ಲಿ ಅಭಿವ್ಯಕ್ತಿಸುತ್ತಿದ್ದಾಗ ಈ ಕಾಲದಲ್ಲಿ ಬರೆದ ಲೇಖಕಿಯರು ಕೌಟುಂಬಿಕ ಆಮೆ ಚಿಪ್ಪಿನೊಳಗೆ ಸೇರಿಕೊಂಡು ತಮಗೆ ತಾವೇ ಮಿತಿಯ ಲೋಕವನ್ನು ಸೃಷ್ಟಿಸಿಕೊಂಡರು.

ನವೋದಯ ಲೇಖಕರು ಶುದ್ಧ ಮಡಿವಂತಿಕೆಯಿಂದ ಭಾರತೀಯ ಪರಂಪರೆ ಹಾಗೂ ಹೊಸದಾಗಿ ಕಾಣಿಸಿಕೊಂಡಿದ್ದ ಪಾಶ್ಚಾತ್ಯ ಸಂವೇದನೆ ಇವೆರಡರ ಮಿಶ್ರ ಭಾವದಲ್ಲಿ ಸಿಲುಕಿದ್ದರಿಂದ ಅವರ ಚಿಂತನೆಯ ಹಿಂದೆ ನವಮಾನವತಾವಾದದ ಪ್ರಜ್ಞೆಯೊಂದು ಕಾಣಿಸಿಕೊಂಡರೂ ನಮ್ಮ ಪರಂಪರೆಯ ಬೇರುಗಳನ್ನು, ನಂಬಿಕೆಗಳನ್ನು ಅಲುಗಾಡಿಸುವಷ್ಟು ಶಕ್ತಿಶಾಲಿಯಾಗಿರಲಿಲ್ಲ. ಅವರ ಪ್ರಯತ್ನಗಳು ಹೆಣ್ಣಿನ ಬದುಕು ಭಾವನೆಗಳನ್ನು ದೃಢವಾಸ್ತವತೆಯ ನೆಲೆಗಳಿಂದ ಗ್ರಹಿಸುವುದಕ್ಕಿಂತ ಹೆಚ್ಚಾಗಿ ಸಿದ್ಧ ಪೌರಾಣಿಕ ಮಾದರಿಗಳ ಮೂಲಕ ಗ್ರಹಿಸುವುದರಲ್ಲಿಯೇ ನಿಂತು ಬಿಡುತ್ತದೆ. ಅವರ ಸ್ತ್ರೀ ಮಾದರಿಗಳು ಕರುಣೆ, ಅನುಕರಣೆಗಳಿಂದ ಹೊರಬರದೆ ಅಲ್ಲೇ ಗಿರಣಿ ಹೊಡೆಯುವ ಮಾದರಿಗಳಾಗುತ್ತವೆ.

ಇದಕ್ಕೆ ಪ್ರತಿಯಾಗಿ ಮೂಡಿದ ಪ್ರಗತಿಶೀಲರ ಬರವಣಿಗೆ ಎಡಪಂಥೀಯ ಆಲೋಚನೆಗಳನ್ನು ಪ್ರಕಟಪಡಿಸಿ ಶೋಷಿತರ, ಶ್ರಮಜೀವಿಗಳ ಪರ ನಿಂತಿತಾದರೂ ಮೇಲು, ಮೇಲಿನ ಪದರದಲ್ಲಷ್ಟೇ ಅನುಭವಗಳ ವಿವರಣೆ ನಡೆಯುತ್ತದೆ. ಅದರಲ್ಲೇ ತೃಪ್ತವಾಗಿ ಬಿಡುತ್ತದೆ. ಇದಕ್ಕೆ ಮುಖ್ಯಕಾರಣವಾದುದು ಅವರ ಆವೇಶ, ಘೋಷಣೆಗಳು, ಕಾವಿನಿಂದ ಕನಲುವ ತಾಳ್ಮೆ ರಹಿತ ಪ್ರವೃತಿಗಳು ಹೆಣ್ಣು ಇವರಲ್ಲಿ ಕ್ಷೇತ್ರಗಳಾಗಿಯೇ ಉಳಿದುಬಿಡುತ್ತಾಳೆ.

ಇದೇ ಕಾಲದಲ್ಲಿ ಬರೆದ ಲೇಖಕಿಯರು ಸಾಮಾಜಿಕ ನೆಲೆಯಿಂದ ತಮ್ಮ ವಸ್ತುಕ್ಷೇತ್ರವನ್ನು ಕೌಟುಂಬಿಕ ವಲಯಕ್ಕೆ ಸ್ಥಳಾಂತರಗೊಳಿಸಿದ್ದು ಕುತೂಹಲಕರವಾದರೂ ನಿಜ. ಎಷ್ಟರಮಟ್ಟಿಗೆ ಇವರು ಸಮಾಜಪರ ಚಿಂತನೆಗಳಿಂದ ದೂರವಾಗುತ್ತಾರೆಂದರೆ ನವೋದಯ ಕವಿಗಳ ಸಮಾಜಪರ ಕಳಕಳಿಗಿಂತಲೂ ಅತ್ತಿತ್ತಲಾಗಿ.

ಕನ್ನಡದಲ್ಲಿ ೧೯೫೦ ರಿಂದ ೧೯೭೫ರ ದಶಕದಲ್ಲಿ ನೂರರ ಸಂಖ್ಯೆಯಲ್ಲಿ ಮಹಿಳೆಯರು ಬರೆಯುತ್ತಾರೆ. ಅವರ ಕಾಳಜಿಯೇನಿದ್ದರೂ ಕುಟುಂಬಕ್ಕೆ ಸಂಬಂಧಿಸಿದ್ದು ಪ್ರಗತಿಶೀಲ ಯುಗದಲ್ಲಿ ಕುಳಿತು ನವೋದಯದ ಸಂವೇದನೆ ತುಂಬಿಕೊಂಡ ಬರಹಗಳು ಅವು ತಮಗೆ ತಾವು ವಸ್ತು, ಅಭಿವ್ಯಕ್ತಿಗಳ ಮಿತಿಗಳನ್ನು ಹಾಕಿಕೊಳ್ಳುತ್ತಾ ತೆರೆದುಕೊಂಡಿದ್ದ, ವಿಸ್ತರಿಸಿಕೊಳ್ಳಬಹುದಾಗಿದ್ದ ಲೋಕದ ಪರಿಧಿಗಳು ಇಲ್ಲಿ ಮೊಟಕುಗೊಂಡು ಬಿಟ್ಟವು.

ಈ ಸಾಂಸ್ಕೃತಿಕ ಸಂದರ್ಭದಲ್ಲಿ ಭಿನ್ನ ಎಚ್ಚರತೋರಿದ ಅನೇಕ ಲೇಖಕಿಯರಲ್ಲಿ ವಾಣಿ, ತ್ರಿವೇಣಿ, ಸುಶೀಲಾ ಕೊಪ್ಪರ, ಡಾ. ಅನುಪಮಾ ನಿರಂಜನ, ಎಂ.ಕೆ. ಇಂದಿರಾ, ಎಚ್.ವಿ. ಸಾವಿತ್ರಮ್ಮ, ಸರಸ್ವತೀಬಾಯಿ, ರಾಜವಾಡೆ, ಜಯದೇವಿ ತಾಯಿ ಲಿಗಾಡೆ, ಶಾಂತಾದೇವಿ ಮಾಳವಾಡಿ- ಮೊದಲಾದ ಲೇಖಕಿಯರು ಮುಖ್ಯರಾಗುತ್ತಾರೆ. ಈ ಲೇಖಕಿಯರು ತಮ್ಮ ಸಮಕಾಲೀನ ಇತರ ಲೇಖಕರು ಹಾಗೂ ಲೇಖಕಿಯರಿಗಿಂತ ಬೇರೆ ರೀತಿಯಲ್ಲಿ ಸ್ಪಂದಿಸಿದರು ಲೇಖಕರು ತಾವು ತುಂಬಾ ಪ್ರಗತಿಪರ ನೆಲೆಯಲ್ಲಿ ನಿಂತವರೆಂದು ಹುಸಿ ಆದರ್ಶಗಳನ್ನು ಎತ್ತಿ ಹಿಡಿಯ ಹೊರಟು ಹೆಣ್ಣಿನ ಸಮಸ್ಯೆಗಳ ತಲಸ್ಪರ್ಶ ಅಧ್ಯಯನ ಮಾಡುವಲ್ಲಿ ಸೋತರು. ಇದೇ ಕಾಲದಲ್ಲಿ ಬರೆದ ಅಸಂಖ್ಯಾತ ಲೇಖಕಿಯರು ಸುಖೀ ಕುಟುಂಬ, ಗಂಡ-ಹೆಣ್ಣಿನ , ಪ್ರೀತಿ-ಪ್ರೇಮಗಳನ್ನು ರಂಜನೀಯವಾಗಿ ಚಿತ್ರಿಸಿದರು. ಹೆಣ್ಣನ್ನು ಕೇಂದ್ರ ಪಾತ್ರವಾಗಿರಿಸಿಕೊಂಡು ವರದಕ್ಷಿಣೆ, ಶಿಕ್ಷಣ, ಉದ್ಯೋಗಸ್ಥ ಮಹಿಳೆ ಈ ಸಮಸ್ಯೆಗಳನ್ನು ತೆಗೆದುಕೊಂಡು ಚಿತ್ರಿಸ ಹೊರಟರು. ಸಮಸ್ಯೆಗಳ ಪರಿಹಾರ, ಸರಳ, ಸುಲಭ, ಕಪ್ಪು-ಬಿಳುಪಿನ ಲೋಕಗಳನ್ನು ನಿರ್ಮಿಸಿ ತುಂಬಾ ಸುಲಭವಾಗಿ ಮನುಷ್ಯ ಸ್ವಭಾವಗಳನ್ನು, ಕೆಟ್ಟವರು, ಒಳ್ಳೆಯವರು' ಎಂಬ ಹಣೆಪಟ್ಟಿ ಕಟ್ಟಿ ಸರಳೀಕರಿಸಿದರು.

ಈ ಕಾಲದಲ್ಲಿ ಬರೆದ ಲೇಖಕಿಯರಿಗೆ ಕಥೆ-ಕಾದಂಬರಿಗಳನ್ನು ಹೇಳುವುದರಲ್ಲೇ ಉತ್ಸಾಹ, ಕಾವ್ಯವನ್ನು ಬರೆದವರಾದರೂ ಕಾವ್ಯದ ಪರಿಕರಗಳನ್ನು ಅಷ್ಟಾಗಿ ಬಳಸಿಕೊಳ್ಳುವುದಿಲ್ಲ. ನಾಟಕಗಳು ಬಂದವಾದರೂ ಅದರಲ್ಲಿ ಈಗ ಪ್ರಯೋಗಕ್ಕೆಬರೆದ ನಾಟಕ ತಂತ್ರಗಳು ಸಂಭಾಷಣೆಗಳಿಗೇ ಒಂದರ ಕೆಳಗೆ ಒಂದು ಜೋಡಿಸಿದರು. ನಾಟಕವಾಗಿ ಬಿಡುತ್ತವೆಂಬ ಭ್ರಮೆಯಿದೆ. ರಂಗಭೂಮಿಯ ವ್ಯಾಪಕ ರಂಗತಂತ್ರಗಳು, ಸಜ್ಜಿಕೆ, ಪರಿಕರಗಳ ಬಗೆಗೆ ಗಮನ ನೀಡುವುದಿಲ್ಲವಾದುದರಿಂದ ಪ್ರಯೋಗಾತ್ಮಕ ನೆಲೆಯಲ್ಲಿ ಲೇಖಕಿಯರ ನಾಟಕಗಳೂ ರಂಗಕ್ಕೇರಲಿಲ್ಲ.

ನವ್ಯ ಸಾಹಿತ್ಯ ಚಳವಳಿ ನಿಜವಾಗಿಯೂ 'ನವ್ಯ'ವಾಗಿದ್ದರೆ ಆಧುನಿಕವಾಗಿದ್ದರೆ ಮಹಿಳೆಯರು ಮತ್ತು ದಲಿತರ ಗದ್ಯ ದನಿ ಅಲ್ಲಿರುತ್ತಿತ್ತು. ಆದರೆ ನವ್ಯ ಸಾಹಿತ್ಯದ ಅಬ್ಬರ ಭರಾಟೆಯನ್ನು ನೋಡಿಯೋ ಹೆಣ್ಣು ಬರೆಯಲು ಅಂಜಿದಂತೆ ಕಾಣುತ್ತದೆ. ಈ ದೃಷ್ಟಿಯಿಂದ ಗಮನಿಸಿದಾಗದ ನವ್ಯ ಸಾಹಿತ್ಯ ಚಳುವಳಿ ಸಂದರ್ಭದಲ್ಲಿ ತಮ ಅನುಭವಗಳನ್ನು ತಾವು

ಕಂಡದ್ದನ್ನು ಬರಹಕ್ಕಿಳಿಸಿದ ಲೇಖಕಿಯರು ಬಹುಕಡಿಮೆ ಗಂಡಸರೇ ಹೆಣ್ಣಿನ ಹೆಸರಲ್ಲಿ ಬರೆದುದು ಒಂದು ವಿಚಿತ್ರ ವ್ಯಂಗ್ಯದಂತೆ ಕಾಣುತ್ತದೆ.

ಆರಂಭದ ನವ್ಯ, ಸಾಹಿತ್ಯದ ಒಂದು ಮಾದರಿಯನ್ನು ಅಭ್ಯಸಿಸಲು ನಾವು ಆಲನಹಳ್ಳಿ ಕೃಷ್ಣನ ಕತೆ-ಕಾದಂಬರಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡಬಹುದು. ಇದು ಒಂದು ಬಗೆಯ ನವ್ಯ ಮನೋಧರ್ಮವನ್ನು, ನವ್ಯರ ಸ್ತ್ರೀ-ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಅರಿಯಲು ನೆರವಾಗಬಹುದು. ಕೃಷ್ಣ-ಚನ್ನಯ್ಯ-ಲಂಕೇಶ ಅನಂತಮೂರ್ತಿಯವರ ಬಹುಪಾಲು ಕವನಗಳಿಗೂ ಕೆಲವು ಕತೆಗಳಿಗೂ ವಸ್ತುವಿನ ಆಯ್ಕೆಯ ದೃಷ್ಟಿಯಲ್ಲಿ ಹೆಣ್ಣನ್ನು ಕಂಡಿರಿಸಿರುವ ಬಗೆಯಲ್ಲಿ ಕೂಡಾ ಸಾಧ್ಯವಿರುವುದರಿಂದ ಈ ಅಭ್ಯಾಸ ಸಹಾಯ ಮಾಡಬಹುದು. ಕೃಷ್ಣನ ಗೀಜಗನ ಗೂಡು, ಅಂಟಿದ ನಂಟಿನ ಕೊನೆ, ಇನ್ನೊಂದು ಪ್ರಣಯ ಪ್ರಸಂಗದ ಮುಂತಾದ ಕಥೆಗಳಲ್ಲಿ ಗೆಂಡೆತಿಮ್ಮ ಕಾದಂಬರಿಗಳಲ್ಲಿ ಅವರ ದೃಷ್ಟಿಯಲ್ಲಿ 'ಆಧುನಿಕ'ಸ್ವತಂತ್ರ ಮನೋವೃತ್ತಿಯವಳು ಎಂದು ಕರೆಯಬಹುದಾದ ಹೆಣ್ಣುಗಳನ್ನು ಕಾಣಬಹುದು.

ನವ್ಯ ಚಳುವಳಿಯ ಭರಾಟೆಯ ದಿನಗಳಲ್ಲಿ ನವ್ಯತೆಯ ಹೊಸಗಾಳಿಗೆ ತಮ್ಮ ಬುದ್ಧಿ, ಮನಸ್ಸುಗಳನ್ನು ಒಡ್ಡಿ ಮಗ್ಗಲು ಕೊಡವಿ ಎದ್ದು ನಿಂತ ರಾಜಲಕ್ಷ್ಮಿ ಎನ್.ರಾವ್ ಹಾಗೂ ವೀಣಾ ಶಾಂತೇಶ್ವರ ಅವರ ಚಿಂತನೆಯ ಶೈಲಿ ಮಹಿಳಾ ಸಾಹಿತ್ಯದ ದಿಕ್ಕನ್ನು ಕೊಂಚ ಮಟ್ಟಿಗೆ ಬದಲಾಯಿಸಿತು. ಬದಲಾವಣೆಗಾಗಿ ಕಾಯುತ್ತ ಕುಳಿತಿದ್ದ ಹೆಣ್ಣಿನ ಚೇತನ ತನ್ನ ಅಂತರಂಗದ ರಿಂಗಣಗಳನ್ನು ದಾಖಲಿಸಲು ಪ್ರಯತ್ನಿಸಿದ್ದು ರಾಜಲಕ್ಷ್ಮಿ ಎನ್.ರಾವ್ ಹಾಗೂ ವೀಣಾಶಾಂತೇಶ್ವರರ ಬರವಣಿಗೆಯಿದಲೇ ಇವರಿಬ್ಬರೂ ಅನಂತಮೂರ್ತಿ, ಚಿತ್ತಾಲ, ರಾಮಚಂದ್ರಶರ್ಮ, ಗೋಪಾಲಕೃಷ್ಣ ಅಡಿಗರ ಬರವಣಿಗೆಯಿಂದ ಪ್ರಭಾವಿತರಾದವರೆ. ಮುಖ್ಯವಾಗಿ ಇವರ ಕಥೆಗಳಲ್ಲಿ ಹೊರಗಿನ ಬಾಹ್ಯ, ವಾಚ್ಯ ವಿವರಣೆಗಳಿಗಿಂತ ಅಂತರಂಗದ ಮನೋವಲಯದಲ್ಲಿ ನಡೆಯುವ ದ್ವಂದ್ವ, ಹೋರಾಟಗಳು, ಘರ್ಷಣೆಗಳು ಪ್ರಕಟಗೊಳ್ಳುತ್ತವೆ. ರಾಜಲಕ್ಷ್ಮಿಯವರು ವಿವಾಹೇತರ ಸಂಬಂಧಗಳು, ಅತೃಪ್ತ ಹೆಣ್ಣಿನ ಲೈಂಗಿಕ ಕಾಮನೆಗಳು, ಬಯಕೆಗಳೂ ಕೈಗೂಡದಾದಾಗ ಹೆಣ್ಣಿನ ಹೃದಯಕ್ಕಾಗುವ ತಲ್ಲಣಗಳು , ಬೇಗುದಿಗಳನ್ನು ಅತ್ಯಂತ ಸೂಕ್ಷ್ಮವಾಗಿ ನಿರೂಪಿಸಿದರು. ಹೆಣ್ಣಿನ

ಅನನ್ಯತೆಯನ್ನು ಮಾನವೀಯ ಸಂಬಂಧಗಳ ಪರಿವಲಯದೊಳಗೇ ಗುರುತಿಸುವ ಸ್ತ್ರೀ - ಸಂವೇದನೆ ಇವರ ಕಥೆಗಳ ಮುಖ್ಯ ಗುಣವಾಗುತ್ತದೆ.

ಹೀಗೆ ಆಧುನಿಕ ಮಹಿಳಾ ಸಾಹಿತ್ಯವು ಹೊಸ ಚೇತೋಹಾರಿ ರೂಪವಾಯಿತು. ಹೆಣ್ಣಿನ ಬದುಕಿನ ಚಿತ್ರಣವನ್ನು ಪ್ರತಿಬಿಂಬಿಸುವ ಹಾಗೂ ಅಭಿವ್ಯಕ್ತಿಸುವ ಮಾಧ್ಯಮವಾಯಿತು. ಇದರಿಂದ ಲೇಖಕಿಯರ ಬರವಣಿಗೆಗಳು ಈ ಕಾಲಘಟ್ಟದಲ್ಲಿ ಹೆಚ್ಚಾದವು. ಮಹಿಳಾ ಸಾಹಿತ್ಯವು ತನ್ನದೇ ಆದ ರೂಪು-ರೇಷೆಯನ್ನು ಪಡೆದುಕೊಂಡಿತು.

ಮಹಿಳಾ ಕಥಾಸಾಹಿತ್ಯ

ಮಹಿಳೆ ಹಾಗೂ ಕಥೆ ಸ ಂಬಂಧ ಇಂದು ನಿನ್ನೆಯದಲ್ಲ. ಭಾರತೀಯ ಪರಂಪರೆಯಲ್ಲಿ ಕತೆಗೆ ನಾಟಕದ್ದಂತೆ ದೈವೀ ನೆಲೆಯನ್ನು ಕಲ್ಪಿಸಲಾಗಿದೆ. ವಸುಭಾಗ ಹೇಳುವಂತೆ ಗುಣಾಢ್ಯನ ಬೃಹತ್ಕತೆಯ ಮೂಲ ಶಿವನಿಂದ ಕತೆ ಕೇಳಬೇಕೆನ್ನುವ ಪಾರ್ವತಿಯ ಇಚ್ಛೆಯಲ್ಲದೆ ''ಅಂತಿರ್ದ ಪರಮೇಶ್ವರಂಗೆ ಗಿರಿರಾಜತನುಜೆ ಕರಕಮಲಂಗಳಂ ಮುಗಿದು - ದೇವಾ ನೀವೆನಗೆಪೂರ್ವಮಪ್ಪ ಕಥೆಯಂ ಪೇಳಲೊಳ್ಪುದನೆ ಹರಾ ಪರಹಸಿತವನಾರವಿಂದನಾ ಪಾರ್ವತಿಗಪೂರ್ವಮಪ್ತ ಕಥೆಗಳಂ ಪೇಳುತ್ತಿರಲು'' ಆ ಕಥೆಗಳನ್ನು ಕೇಳಿದ ಗಣಪ್ರಧಾನ ಪುಷ್ಪದಂತನೆಂಬುವನು ಗುಣಾಢ್ಯವಾಗಿ ಮಾನವ ಲೋಕದಲ್ಲಿ ಹುಟ್ಟಿ ಬೃಹತ್ಕಥೆಗಳನ್ನು ಮಾಡಿದನಂತೆ. ಕಥೆ ಹೇಳುವುದರಲ್ಲಿಯೂ ಮಹಿಳೆಯದೇ ಮೇಲುಗೈಯಾಗದಿತ್ತೆನ್ನುವುದಕ್ಕೆ ಪಂಚತಂತ್ರದ 'ದೇವದತ್ತನೂ ಕುಂಟಣಿಯೂ' ಕತೆಯಲ್ಲಿ ಬರುವ 'ಡಾವರ ಡಾಕಿನಿ'ಸಾಕ್ಷಿಯಾಗಿದ್ದಾಳೆ. 'ನಾನಾ ರೀತಿಯ ಕತೆಗಳನ್ನು ಅತಿಶಯವಾಗಿ ಹೇಳುವ ವಿದ್ಯೆ' ಹೊಂದಿದ ಇವಳು ಕತೆ ಹೇಳುವುದಕ್ಕೆ ಒಂದು ಸಾವಿರ ಗದ್ಯಾಣದ ದಕ್ಷಿಣೆ ಕೇಳುತ್ತಿದ್ದಳಂತೆ. ಇಂದಿನ ವಿನಿಮಯ ದರದಲ್ಲಿ ಇದು ಯಾವ ಕತೆಗಾರ್ತಿಯೂ ಹೆಮ್ಮೆಪಡಬಹುದಾದ ಮೊತ್ತವಾಗಿದೆ.

ಹೀಗಿದ್ದರೂ ಒಂದು ಗಂಭೀರ ಸಾಹಿತ್ಯಪ್ರಕಾರವೆಂದು ಕತೆ ಕನ್ನಡದಲ್ಲಿ ನೆಲೆಗೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ. ಕಥೆ ಲೇಖಕಿಯರ ಪ್ರಿಯವಾದ ಅಭಿವ್ಯಕ್ತಿ ಪ್ರಕಾರವಾಗಿ ಬೆಳೆದುಬಂದಿದೆ. ಕಥನಕಲೆ ಹೆಣ್ಣಿನ

ಜನ್ಮಜಾತ ಗುಣ ಎಂದು ಹೇಳಬಹುದಾದಷ್ಟು ಅದು ಆಕೆಗೆ ಕರಗತ. ಹಾಗೆ ನೋಡಿದರೆ ಕಥೆ ಬರೆದವರು ಮಾತ್ರವಲ್ಲ ಕಥೆ ಬರೆಯದವರೂ ಕಥನಗಾರ್ತಿಯರು. ಜನಪದ ಕಥೆಗಳನ್ನು ಹೇಳುವುದರಲ್ಲಿ ಸ್ತ್ರೀಯರು ಸಿದ್ಧಹಸ್ತರು ಎಂಬುದನ್ನು ಗಮನಿಸಬಹುದು.

ಹೆಣ್ಣಿನ ಅಭಿವ್ಯಕ್ತಿ ಸಾಮಾಜಿಕ ಅಡೆತಡೆಗಳೇ ಆಕೆಯನ್ನು ಕಥೆಗಾರ್ತಿಯಾಗಿ ರೂಪಿಸಿರಬಹುದೇನೋ ಅವಳು ಹೇಳದೇ ವ್ಯಕ್ತಪಡಿಸಿದೇ ನುಂಗಿಕೊಂಡ ಅನುಭವಗಳೆಲ್ಲ ಅವಳ ಮನಸ್ಸಿನಲ್ಲಿ ಕಥೆಗಳಿಗೆ ಹರಳುಗಟ್ಟಿರುತ್ತವೆ. ಆದುದರಿಂದ ಪ್ರತಿಯೊಂದು ಹೆಣ್ಣು ಹೃದಯವೂ ಕಥೆಯ ಆಗರವೆನ್ನಬಹುದು. ಇದೇ ರೀತಿ ಹೊಸಿಲು ದಾಟಿ ಹೊರಬಾರದ ಹೆಣ್ಣುಮಕ್ಕಳ ಮಾತುಕಥೆಯೆಲ್ಲ ಅಡುಗೆ ಮನೆಯೊಳಗೇ ನಡೆಯುವುದರಿಂದ ಅಡುಗೆಮನೆಯೂ ಕೂಡ ಕಥೆಗಳ ಕಣಜ. ಇದೇ ಕಾರಣಕ್ಕಿರಬೇಕು ನಮ್ಮ ಲೇಖಕಿಯರಿಗೆ ಕಥೆ ಹೆಣೆಯುವ ಕಲೆ ಸುಲಭವಾಗಿ ಸಿದ್ಧಿಸಿವೆ.

ನಮ್ಮ ಮನೆಯ ಒಳ ಅಂಗಳ ಎಂದರೆ ಅಮ್ಮನ ಸಾಮ್ರಾಜ್ಯ ಕಥಾನಕಗಳ ಆಗರವದು. ಎಷ್ಟು ಜನ ಬರುತ್ತಿದ್ದರು. ಸುಖ-ದುಃಖ ಕಥನ, ಹಾಡು, ಹಸೆ ಅದೊಂದು ಮನುಷ್ಯ ಲೋಕದ ದೊಡ್ಡ ದರ್ಶನ ಎಂತಲೇ ಬರೆಯುವ ಹೊರಟ ನನಗೆ ಸಣ್ಣಕಥೆಯೇ ಒಂದು ಸಾಧನವಾಗಿ ಸಿಕ್ಕಿತೇನೋ ಎಂದು ವೈದೇಹಿಯವರು ಹೇಳುವ ಮಾತುಗಳಲ್ಲಿ ಇದೇ ಅರ್ಥ ಧ್ವನಿಸಿದೆ. ತಮ್ಮ ಬಳಿ ಚಿಕಿತ್ಸೆಗಾಗಿ ಬರುತ್ತಿದ್ದ ಹೆಣ್ಣುಮಕ್ಕಳು ಹೇಳಿಕೊಳ್ಳುತ್ತಿದ್ದ ಕಥೆಗಳು ಅನುಪಮಾ ನಿರಂಜನ ಅವರು ಹೆಚ್ಚಿನ ಕಥೆಗಳನ್ನು ಬರೆಯಲು ಕಾರಣವಾಯಿತು ಎಂಬುದನ್ನು ನೆನಪಿಸಿಕೊಳ್ಳಬಹುದು. ಪ್ರತಿಯೊಂದು ಹೆಣ್ಣು ತನ್ನ ಕಥೆಗಳನ್ನು ಮಾತ್ರವಲ್ಲದೆ ಅನೇಕರ ಕಥೆಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುತ್ತಾಳೆ. ದಾರಿ ಕಾಣಲಾಗದೆ ಹೋದ ಇಂಥ ನೂರಾರು ಕಥೆಗಳಿವೆ. ನಮ್ಮ ಲೇಖಕಿ ಈ ಅಂತರಂಗದ ಕಥೆಗಳಿಗೆ ದನಿಕೊಡುವ ಪ್ರಯತ್ನ ಮಾಡಿದ್ದಾಳೆ. ಹೆಂಗಸರಿಗೆ ಕಥೆಯೇ ಯಾಕೆ ಮುಖ್ಯವಾಯಿತು ಎಂಬಷ್ಟೇ ಹೆಂಗಸರು ಕಥೆಯ ವಸ್ತುವಾಗುವುದೂ ಕೂಡ ಕುತೂಹಲಕರ ವಿಷಯ. ಹೆಣ್ಣಿನ ಪ್ರತಿಯೊಬ್ಬ ಹೆಣ್ಣಿನ ಬದುಕು ಒಂದು ಬರೆದಿಡದ ಕಥೆಯಾಗಿರುತ್ತದೆ. ಬದುಕು ಒಂದು ಕಥೆ ಯಾವಾಗ ಆಗುತ್ತದೆಂದರೆ ಅದರಲ್ಲಿ ಅನೇಕ ಅನಿರೀಕ್ಷಿತ ತಿರುವುಗಳು ಇದ್ದಾಗ ಹೆಣ್ಣಿನ ಬದುಕಿನ ಪ್ರತಿಯೊಂದು ಹಂತವೂ ಇಂತಹ ತಿರುವುಗಳಲ್ಲಿ ಪಡೆಯುತ್ತಿರುತ್ತದೆ. ಅವಳು ಯೌವನಕ್ಕೆ

ಕಾಲಿರಿಸುವುದರೊಂದಿಗೆ ಇದು ಆರಂಭ. ನಂತರ ಮದುವೆ, ಗಂಡನ ಮನೆಯೆಂಬ ಪರಕೀಯ ಬದುಕಿಗೆ ಪ್ರವೇಶ, ಗಂಡ ಎಂಬ ಹೊಸ ವ್ಯಕ್ತಿಯೆಂದರೆ ಬದುಕು. ಅನಂತರ ಮಕ್ಕಳಾದರೆ ಒಂದು ರೀತಿ, ಆಗದಿದ್ದರೆ ಇನ್ನೊಂದು ರೀತಿ, ಗಂಡ ಅನ್ಯೋನ್ಯವಾಗಿದ್ದರೆ ಒಂದು ರೀತಿ, ಅವನು ಬೇರೊಬ್ಬಹೆಣ್ಣಿಗೆ ಮರುಳಾದರೆ ಇನ್ನೊಂದು ರೀತಿ, ಗಂಡ ಅನಿರೀಕ್ಷಿತವಾಗಿ ಮೃತನಾದರೆ ಅವಳ ಬದುಕು ಇನ್ನೂ ದೊಡ್ಡ ತಿರುವು ಪಡೆಯುತ್ತದೆ. ಹೀಗೆ ಹೆಣ್ಣೊಬ್ಬಳು ಹೆಂಡತಿಯಾಗುತ್ತಾಳೆ. ತಾಯಿಯಾಗುತ್ತಾಳೆ, ಸೊಸೆಯಾಗುತ್ತಾಳೆ, ವಿಧವೆಯಾಗುತ್ತಾಳೆ. ಪರಿತ್ಯಕ್ತಳಾಗುತ್ತಾಳೆ... ಈ ಒಂದೊಂದು ಘಟನೆಯೂ ಅವಳ ಬದುಕಿನಲ್ಲಿ ಬಹುದೊಡ್ಡ ಪಲ್ಲಟವನ್ನು ಉಂಟುಮಾಡುವಂಥದು . ಹೀಗಾಗಿ ಹೆಣ್ಣಿನ ಕಥೆ ಮುಗಿಯುವುದೇ ಇಲ್ಲ. ಆಗಾಗ ಹೊಸ ತಿರುವುಗಳನ್ನು ಪಡೆಯುತ್ತ ಮುಂದುವರೆಯುತ್ತಲೇ ಇರುತ್ತದೆ. ಅದು ಸದಾ ಆತಂಕ ನಿರೀಕ್ಷೆಗಳಿಂದ ತಲ್ಲಣಿಸುತ್ತಿರುವಂಥ ಬದುಕು. ನನ್ನ ಬದುಕನ್ನು ತಾನು ನಿರ್ಧರಿಸಿದಂತೆ ರೂಪಿಸಿಕೊಳ್ಳುವ ಅವಕಾಶ. ಅಧಿಕಾರ ಅವಳಿಗಿಲ್ಲದಿರುವುದೇ ಈ ಅತಂತ್ರ ಸ್ಥಿತಿಗೆ ಕಾರಣವಿರಬಹುದು. ಇದಕ್ಕೆ ಪ್ರತಿಯಾಗಿ ಇಂತಹ ಅವಕಾಶ ಅಧಿಕಾರಗಳನ್ನು ಹೊಂದಿರುವ ಪುರುಷನ ಬದುಕಿನಲ್ಲಿ ಬದುಕಿನಲ್ಲಿ ಹೆಚ್ಚಿನ ತಿರುವುಗಳಲ್ಲ. ಅವನ ಪಾತ್ರಗಳು ಹೆಚ್ಚು ಬದಲಾಗುವುದಿಲ್ಲ. ಹೆಣ್ಣು ಮಾತ್ರ ತನಗೆ ಬೇಕಿರಲಿ ಬೇಡದಿರಲಿ ವಿವಿಧ ಪಾತ್ರಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇದರಿಂದ ಪ್ರತಿಯೊಂದು ಹೆಣ್ಣಿಗೂ ತನ್ನದೇ ಆದ ಕಥೆ ರೂಪುಗೊಂಡು ಅವಳ ಕಥೆಯೇ ಕಥೆಗೆ ವಸ್ತುವೂ ಆಗಿಬಿಡುತ್ತದೆ.

ಮಹಿಳಾ ಕಥಾಸಾಹಿತ್ಯಕ್ಕೆ ನಿಜವಾಗಿಯೂ ಒಂದು ಹೊಸ ತಿರುವು ಬಂದಿದ್ದು ಈ ಕಾಲದಲ್ಲಿ ಉಗಮಿಸಿದ ಹೊಸ ಲೇಖಕಿಯರಿಂದಲೇ ಇಂದು ಬರೆಯುತ್ತಿರುವ ಹೆಚ್ಚಿನ ಲೇಖಕಿಯರು. ಹೆಣ್ಣಿನ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವು ಹೊಂದಿರುವಂಥವರು. ಕಥೆ ಹೇಳುವ ತುಡಿತಕ್ಕಿಂತ ಅದರ ಮೂಲಕ ಪ್ರತಿಪಾದಿಸಬೇಕೆಂದಿರುವ ಧೋರಣೆಯೇ ಇವರಿಗೆ ಮುಖ್ಯ. ಶೋಷಣೆಯ ಮೂಲವನ್ನು ಅರಿಯುವ ಪ್ರಯತ್ನ ಇವರ ಬರವಣಿಗೆಯಲ್ಲಿದೆ. ಹಿಂದಿನ ಲೇಖಕಿಯರು ಇವರು ಪ್ರತಿಯೊಂದು ಸಮಸ್ಯೆಗೂ ಸುಲಭ ಪರಿಹಾರಗಳನ್ನೂ ಸೂಚಿಸುವ ತಪ್ಪನ್ನು ಮಾಡುವುದಿಲ್ಲ. ಅಂದರೆ ಹಿಂದಿನವರಲ್ಲಿದ್ದ ರಮ್ಯ ಮನೋಭಾವದಿಂದ ಇವರು

ದೂರವಾಗಿದ್ದಾರೆ. ಸಾಹಿತ್ಯದ ವಸ್ತು ಹಾಗೂ ಅಭಿವ್ಯಕ್ತಿ ಎರಡರ ಬಗ್ಗೆಯೂ ಗಂಭೀರ ದೃಷ್ಟಿಕೋನವಿರುವುದನ್ನು ಇಲ್ಲಿ ಕಾಣಬಹುದು.

ಕಥೆಗೆ ತೊಡಗುವ ಇಂದಿನವರ ಎಚ್ಚರ ಕಾಳಜಿ ಮತ್ತು ಬರವಣಿಗೆಯ ಸ್ವರೂಪ ಕುರಿತಾದ ಚಿಂತನೆ ಎಂಬುದನ್ನು ನೇಮಿಚಂದ್ರ ಅವರ ಈ ಮಾತುಗಳು ಸ್ಪಷ್ಟಪಡಿಸುತ್ತವೆ... ಹೆಣ್ತನಕ್ಕೆ ಅಂಟಿಸಿದ ಆತಂಕಗಳು ಬಹುಶಃ ನಮ್ಮ ಲೇಖಕಿಯರನ್ನು ಕಾಡಿಸಿರಲಿಕ್ಕಿಲ್ಲ. ಇದೇ ಕಾರಣಕ್ಕಿರಬೇಕು ನಾವು ಸ್ತ್ರೀಯರು ನಮ್ಮ ಅನುಭವಗಳನ್ನು ತೆರೆದುಕೊಂಡಿದದ್ದು ತೀರಾ ಕಡಿಮೆ. ಆಳಕ್ಕಿಳಿದು ನಮ್ಮ ನಿಜವಾದ ಅನಿಸಿಕೆಗಳನ್ನು ಮುಟ್ಟಲು ಬಿಟ್ಟಿದ್ದೇವೆ. ಸೀತೆ, ಸಾವಿತ್ರಿಯರಿಗೂ ಹೀಗನ್ನಿಸಿರಬಾರದೇಕೆ ಎಂದು ಪ್ರಶ್ನಿಸಿದ್ದು ಎಚ್.ವಿ. ಸಾವಿತ್ರಮ್ಮನವರಿಂದ ಅಲ್ಲೊಬ್ಬ ಇಲ್ಲೊಬ್ಬ ಲೇಖಕಿಯರು ಮಾತ್ರ. ನಮ್ಮ ಅನುಭವಗಳನ್ನು ಮುಟ್ಟಿದಾಗಲೂ ಮೆಟ್ಟಿ ಬಿದ್ದಿದ್ದೇವೆ. ತೆರೆದಿಡಲು ಹಿಂಜರಿದ್ದೇವೆ. ಯಾರಾದರೂ ಇದು ನಿಮ್ಮದೇ ಅನುಭವವಾ ಎಂದು ಕೇಳಿಬಿಟ್ಟರೆ ಎಂಬ ಭಯ. ಇಂಥಾ ಸಂಕೋಚ ಮುಜುಗರಗಳಲ್ಲಿ ಸರ್ವಕಾಲಕ್ಕೂ ಹೇಳಿಕೊಂಡು ಬಂದಿದ್ದನ್ನೇ ಅನಿಸದಿದ್ದರೂ ಅನಿಸಬೇಕೆಂದದ್ದನೇ ಜನ ನಿರೀಕ್ಷಿಸಿದ್ದನೋ ಸಮಾಜ ಅಂಗೀಕರಿಸಿದ್ದನ್ನು ಹೇಳುತ್ತಾ ಬಂದೆವು. ನಾವು ಗಂಡು ಮೌಲ್ಯಗಳಿಗೆ , ಗಂಡು ಮಾದರಿಗಳಿಗೆ ಗಂಡು ನಿರೀಕ್ಷೆಗಳಿಗೆ ತಕ್ಕಂತೆ ಬರೆದವ್ರ, ಹೆಣ್ಣಾಗಿ ಬರೆದದ್ದು ಗಟ್ಟಿನಿಂತ ಕೆಲವು ಲೇಖಕಿಯರು ಮಾತ್ರ.

ಅಧ್ಯಾಯ - ೨

ಸ್ತ್ರೀ - ಅಸ್ಮಿತೆಯ ಪರಿಕಲ್ಪನೆ

'ಕಥಾವಸ್ತುವು ಕಥೆಯಾಗಿ ಮೈತಳೆಯುವಾಗ ಕಥೆಯು ವಸ್ತುವನ್ನು ಒಳಮೈಯಲ್ಲಿ ಧರಿಸಿಕೊಂಡು ತನ್ನದೇ ನಿಯಮಗಳನ್ನು ರಚಿಸಿಕೊಳ್ಳುತ್ತಾ ಆ ನಿಯಮಗಳಿಗೆ ಅನುಸಾರವಾಗಿ ತನ್ನ ಬಾಹ್ಯ ಸ್ವರೂಪದ ಭಂಗಿ ವಿನ್ಯಾಸಗಳನ್ನು ತಿದ್ದಿ ತೀಡಿಕೊಳ್ಳುತ್ತಾ ಬೆಳೆಯುತ್ತದೆ' ಎನ್ನುವ ಎಸ್.ಎಲ್. ಭೈರಪ್ಪನವರ ಅಭಿಪ್ರಾಯವನ್ನು ಮಹಿಳಾ ಕಥಾ ಸಾಹಿತ್ಯದ ಬೆಳವಣಿಗೆಯ ಹಿನ್ನೆಲೆಯಲ್ಲಿ ಸ್ವೀಕರಿಸಬಹುದಾಗಿದೆ. ಏಕೆಂದರೆ ಒಂದು ಸಮಾಜದ ಕಾಲಘಟ್ಟಗಳಿಗೆ ಅನುಗುಣವಾಗಿ ಆಯಾಯ ಜನಾಂಗದ ಮನೋಭಾವಕ್ಕೆ ತಕ್ಕಂತೆ ಸಾಹಿತಿಗಳ ಮನೋಧರ್ಮವು ಬದಲಾಗುತ್ತಿರುತ್ತದೆ. ಇದರ ಪರಿಣಾಮವಾಗಿ ಸಾಹಿತ್ಯದ ವಸ್ತು, ಭಾಷೆ, ಶೈಲಿ ತಂತ್ರಗಳು ಬದಲಾಗುತ್ತಿರುತ್ತವೆ. ಇದು ಅನಿವಾರ್ಯವೂ ಹೌದು. ಅಂದರ ಹೊಸ ರೂಪದೊಂದಿಗೆ ಬದಲಾವಣೆಗೆ ಒಳಗಾದ ಸಾಹಿತ್ಯ ಸ್ವರೂಪ ಸಂಪ್ರದಾಯವಾಗಿ ಜಡವಾದಾಗ ತನ್ನ ಸಾಮರ್ಥ್ಯವನ್ನು ಬಿಟ್ಟುಕೊಟ್ಟು ನೀರಸವಾಗುತ್ತದೆ. ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಾಹಿತ್ಯ ಕಾವು ಕಳೆದುಕೊಂಡು ಹೊಸದಕ್ಕೆ ದಾರಿ ಮಾಡಿಕೊಡುತ್ತದೆ. ಈ ಅಂಶವನ್ನು ಮಹಿಳಾ ಕಥಾ ಸಾಹಿತ್ಯ ಪರಂಪರೆಯಲ್ಲಿಯೂ ಗುರುತಿಸಬಹುದಾಗಿದೆ.

ಮಹಿಳಾ ಕಥಾ ಪ್ರಪಂಚದಲ್ಲಿ ತ್ರಿವೇಣಿ, ಎಂ.ಕೆ. ಇಂದಿರಾ ಹಾಗೂ ಡಾ. ಅನುಪಮಾ ನಿರಂಜನರು ಮುಖ್ಯರಾಗುತ್ತಾರೆ. ತ್ರಿವೇಣಿಯವರ ಹೆಣ್ಣು ಬೌದ್ಧಿಕತೆಯಿಂದಾಗಿ ಪಡೆದ ಅರಿವಿನಿಂದಾಗಿ ತನ್ನದೇ ಆದ ಆಲೋಚನೆಗಳನ್ನು ಮಾಡುತ್ತಾಳೆ. ಅದರಿಂದಾಗಿ ಮಾನಸಿಕವಾದ ಯಾತನೆಗೆ ಗುರಿಯಾಗಿ ಪರಿತಪಿಸುವುದನ್ನು ಮನೋವೈಜ್ಞಾನಿಕ ತಂತ್ರವನ್ನು ಉಪಯೋಗಿಸಿಕೊಂಡು ಬರೆಯುತ್ತಾ.....ಮಧ್ಯಮ ವರ್ಗದ ಮಹಿಳಾ ಲೋಕದ ಬಾಗಿಲನ್ನು ತಟ್ಟಿ ಒಳಹೊಕ್ಕು ತೆರೆದ ಬಾಗಿಲಿನ ಜಗತ್ತನ್ನು ಜನಪ್ರಿಯಗೊಳಿಸಿದ ಲೇಖಕಿ.

ಪ್ರಗತಿಶೀಲ ಕಾಲದ ಇತರ ಲೇಖಕಿಯರಿಗಿಂತ ಭಿನ್ನವಾಗಿ ತನ್ನದೇ ಆದ ಶಿಸ್ತು, ವ್ಯಾಪಕ ಅಧ್ಯಯನಗಳಿಂದ ಪಡೆದುಕೊಂಡ ಬೌದ್ಧಿಕ ನೆಲೆಯ ಹರಿಕಾರಳಾಗಿ ನಿಂತವರು

ಡಾ. ಅನುಪಮಾ ನಿರಂಜನರು ಜೀವನದಲ್ಲಿ ದೊರಕಿಸಿಕೊಡ ಅವಕಾಶಗಳನ್ನು ಬಾಚಿಕೊಂಡು ಬಹುಎತ್ತರಕ್ಕೆ ಏರಿದ ಲೇಖಕಿ 'ಪ್ರಗತಿ' ಎಂಬ ಶಬ್ಧಕ್ಕೆ ನಿಜವಾದ ಅರ್ಥವನ್ನು ಕಂಡುಕೊಂಡ ಲೇಖಕಿ ಎನ್ನಬಹುದು. ಈ ಹಂತ ತಲುಪಲು ಲೇಖಕಿ ಸಾಗಿ ಬಂದ ಕವಲುದಾರಿಗಳು, ಅವುಗಳಲ್ಲಿ ಅವರು ಮಾಡಿದ ಪ್ರಯೋಗಗಳು ಕನ್ನಡ ಕಥನ ಸಾಹಿತ್ಯಕ್ಕೆ ಬಹುಮುಖ್ಯವಾದ ಮಜಲುಗಳು ಎನ್ನಬಹುದು.

ಪ್ರಗತಿ ಪಥದೊಂದಿಗೆ ತಳುಕು ಹಾಕಿಕೊಂಡು ಹೊಸ ಲೋಕವನ್ನು ತೆರೆದಿಟ್ಟ ನವಅಯತೆ ಹೆಣ್ಣಿನ ಅಂತರಂಗದ ಬೆತ್ತಲೆಯನ್ನು ಯಾವುದು ಹಿಂಜರಿಕೆಯು ಇಲ್ಲದೆ ಕಥನ-ಲೋಕಕ್ಕೆ ತೋರಿಸಿಕೊಟ್ಟಿತು ಎನ್ನಬಹುದು. ಇದು ಆಧುನಿಕ ಮಹಿಳಾ ಕನ್ನಡ ಕಥನ ಸಾಹಿತ್ಯದ ಬೆಳವಣಿಗೆಯೂ ಹೌದು ಎಂದು ಗುರುತಿಸಬಹುದಾಗಿದೆ.

ಈ ನವ್ಯ ಸಾಹಿತ್ಯದ ಲಕ್ಷಣಗಳೆಂದರೆ.....ಏನನ್ನೂ ಆಳವಾಗಿ ಪ್ರೀತಿಸಲಾರರು ಮತ್ತು ದ್ವೇಷಿಸಲಾರದ ರೀತಿಯ ಜೀವನ ವಿಧಾನ. ಜೀವನಕ್ಕೆ ಒಂದು ರೀತಿಯಲ್ಲಿ ಹೇಗೆ ತಟಸ್ಥವೋ ಹಾಗೆಯೇ ಇನ್ನೊಂದು ರೀತಿಯಲ್ಲಿ ತಲ್ಲೀನ ಕೂಡಾ ಆಗಿರುವುದನ್ನು ಗುರುತಿಸಬಹುದಾಗಿದೆ. ಸದಾ ಬೇಕು-ಬೇಡಗಳ ದ್ವಂದ್ವಗಳ ಬದುಕು ಇಲ್ಲಿನದು ಎನ್ನಬಹುದು.

ಅ) ಹೆಣ್ಣಿನ ಅಂತರಂಗದ ತುಮುಲ

ಹೆಣ್ಣಿನ ಅಂತರಂಗದಲ್ಲಿ ಗಂಡಸಿನಂತೆ ಆಸೆ-ಆಕಾಂಕ್ಷೆಗಳು ಇಲ್ಲವೇ ? ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸುವ ಛಲ ಇಲ್ಲವೇ ? ಆತ್ಮವಿಶ್ವಾಸವಿಲ್ಲವೇ ? ಈ ಎಲ್ಲಾ ಇಲ್ಲವೇಗಳು 'ಇವೆ' ಎಂದಾದರೂ ಅವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಮಡಿವಂತಿಕೆ ಏಕೆ ? ಕೊನೆ ಪಕ್ಷ ಕಥೆ-ಕಾದಂಬರಿಗಳಲ್ಲಿ ತರುವ ಪ್ರಯತ್ನ ಮಾಡಿ ಅದನ್ನು ಓದುಗರಿಗೆ ಮುಟ್ಟಿಸಬಹುದಲ್ಲವೇ ? ಇಲ್ಲೂ ಕೂಡ ಸೀಮಾ ರೇಖೆಯೇ..ಹೆಣ್ಣಿನ ಬೆತ್ತಲೆಯ ಅಂತರಂಗವನ್ನು ದಾಖಲಿಸುವುದು ಹೆಣ್ತನದ ಲೇಖಕಿಯರಿಗೆ ಅಸಾಧ್ಯವಾಗಿದೆ.

ಈ ಮಹಾಪ್ರಬಂಧದಲ್ಲಿ ಶಿಸ್ತು ಬದ್ಧ ಅಧ್ಯಯನ, ಆಲೋಚನೆ ಬೌದ್ಧಿಕ ವಿಕಾಸಗಳನ್ನು ಹಂತ-ಹಂತವಾಗಿ ಗಳಿಸಿಕೊಳ್ಳುತ್ತಾ ತನ್ನದೇ ಮಾರ್ಗದಲ್ಲಿ ನಡೆದು

ಹೊಸದೊಂದು ಶಾಖೆಯನ್ನೇ ಆರಂಭಿಸಿದ ಡಾ. ಅನುಪಮಾ ನಿರಂಜನರ ಮುಂದಿನ ಹರಿಕಾರರಳಾಗಿ ಮತ್ತಷ್ಟು ನಿರ್ಭೀತಿಯನ್ನು ದಿಟ್ಟತನವನ್ನು ಮೈಗೂಡಿಸಿಕೊಂಡು ಮೇಲೆದ್ದವರು ಡಾ. ವೀಣಾ ಶಾಂತೇಶ್ವರ.

ಮುಳ್ಳುಗಳು ಕಥಾ ಸಂಕಲನದ ಮೊದಲ ಕಥೆ 'ಮುಳ್ಳುಗಳು' ಈ ಕಥೆಯಲ್ಲಿ ಇನ್ನೂ ಲಗ್ನವಾಗದ ಆದರೆ ಲಗ್ನಕ್ಕಾಗಿ ಕಾತರಳಾಗಿ ನಿಂತ ಪ್ರಾಧ್ಯಾಪಕಿ ಶಾಂತಿಯ ಒಂದು ದಿನದ ಮೂಡನ್ನು ರೂಪಿಸುತ್ತದೆ. ಕತೆಯಲ್ಲಿ ಬರುವ ಎಲ್ಲಾ ಸನ್ನಿವೇಶಗಳೂ ಆ ಮನಸ್ಥಿತಿಯನ್ನು ಮೂರ್ತಗೊಳಿಸಲು ಸಹಾಯ ಮಾಡುತ್ತವೆ. ಕತೆಯ ಅರ್ಥವೆಲ್ಲ ಅದರ ಕೇಂದ್ರದಲ್ಲಿದ್ದ ಒಂದು ವ್ಯಂಗ್ಯಾತ್ಮಕವಾದ ಸಂಗತಿಯನ್ನವಲಂಬಿಸಿದೆ ಎಂದು ನಾವು ಗಮನಿಸಬೇಕು. ನಾಯಿಕೆಯು ತನ್ನ ಕಾತರತೆಯನ್ನು ಬಿಟ್ಟು ಮನಸ್ಸಿನಿಂದ ಒಪ್ಪಿಕೊಳ್ಳದೆ ತನಗೆ ಒಳಗೆ ತೊಂದರೆ ಕೊಡುವ 'ಮುಳ್ಳು' ತನ್ನ ಹೊರಗೆ ಇವೆ ಎಂದು ಸಾಧಿಸುತ್ತಾ ತನ್ನ ಮನಸ್ಸಿನ ಸಂದಿಗ್ಧತೆಯಲ್ಲಿಯೂ ತೊಳಲಾಡುವ ಸನ್ನಿವೇಶವೇ ಮೂಲತಃ ವ್ಯಂಗ್ಯಾತ್ಮಕವಾದದ್ದು. ಆದರೆ ಈ ಕೇಂದ್ರ ವ್ಯಂಗ್ಯದ ಅರಿವು ಯಾಕೋ ಏನೋ ನಿರ್ಲಿಪ್ತ ವಸ್ತು ನಿಷ್ಠ ಕಲಾಪ್ರಜ್ಞೆಯ ಪಾತಳಿಯ ಮೇಲೆ ಕೆಲಸ ಮಾಡುವುದಿಲ್ಲವಾದ್ದರಿಂದ ಕತೆ ಪಡೆಯಬೇಕಾದ ಗೌರವತೆಯನ್ನು, ಅರ್ಥಪೂರ್ಣತೆಯನ್ನು ಪಡೆದಿಲ್ಲವೆಂದೆನಿಸುವುದು. ಆದರೆ ಕತೆ ಹೇಳುವ ರೀತಿಯಲ್ಲಿ, ಸನ್ನಿವೇಶಗಳಲ್ಲಿ ಸಾಂಕೇತಿಕವಾಗಿ, ಉದ್ದೇಶಪೂರ್ವಕವಾಗಿ ಉಪಯೋಗಿಸಿಕೊಳ್ಳುವಲ್ಲಿ ಸಾಕಷ್ಟು ಕಲೆಗಾರಿಕೆಯಿದೆ.

'ಅತಿಥಿ' ಕಥಾವಸ್ತುವಿನಲ್ಲಿರುವ ವ್ಯಂಗ್ಯತೆ ತಿಳಿಗಣ್ಣಿನ ವಸ್ತು ನಿಷ್ಠತೆಯ ಬೆಂಬಲ ಸಿಕ್ಕಿದ್ದರಿಂದ 'ಅತಿಥಿ' ತುಂಬಾ ಯಶಸ್ವಿಯಾಗಿದೆ. ತನ್ನ ಮಹತ್ವಾಕಾಂಕ್ಷೆಯಾಗಿ ತಾರುಣ್ಯದಲ್ಲಿ ಪ್ರೇಮವನ್ನು ಧಿಕ್ಕರಿಸಿ, ನಂತರ ವಯಸ್ಸಾದಂತೆ ಜೀವನ ಸಾಫಲ್ಯಕ್ಕೆ ಎರವಾಗಿ Sodirtic ಆಗುತ್ತ ನಡೆದ ಜೀವನಕ್ಕೆ ಅತಿಥಿಯಾದ ಪ್ರೊ. ಲೀಲಾವತಿಯ ಮನಸ್ಥಿತಿಯ ಚಿತ್ರಣ ಈ ಕಥೆಯಲ್ಲಿದೆ. ದೃಷ್ಟಿಕೋನದಲ್ಲಿ ವಿಡಂಬನೆ- ಸಹಾನುಭೂತಿಗಳ ಸಮತೋಲನವನ್ನು ಸಾಧಿಸಲು ಲೇಖಕಿ ಮಾಡಿದ ಪ್ರಯತ್ನ ತುಂಬಾ ಕುತೂಹಲಕಾರಿಯಾಗಿದೆ. ನಾಯಿಕೆಯನ್ನು ಬರೇ ಟೀಕಿಸಲು ಹೊರಟಂತಿದ್ದ ಕತೆ ಮುಂದೆ ಹೋದಂತೆ ಸಹಾನುಭೂತಿಯಿಂದ

ಮಿಡಿಯುವುದನ್ನು ನೋಡಿದರೆ ಕತೆ ಬರೆಯುವುದು ಒಂದು ಸತ್ಯಶೋಧನೆಯ ಸಾಧನವಾಗಬಹುದು ಎಂಬ ಮಾತನ್ನು ಮನಗಾಣಬಹುದು.

'ಪ್ರಶ್ನೆ' ಯಲ್ಲಿ ಕತೆ ತನ್ನ ಜೀವನವನ್ನು ತನ್ನ ದೇಹವನ್ನು ತಾನೇ ಹುಡುಕುತ್ತಾ ನಡೆದಂತೆ ತೋರುತ್ತದೆ. ಕತೆಯ ದೇಹದ ದೃಷ್ಟಿಯಿಂದ ಶಶಿಯ ಮನಸ್ಸಿನ ತೀಕ್ಷ್ಣ ಉದ್ವೇಗ, ಭಾಷೆ, ಲಯಗಳ ಮುಖಾಂತರ ಚೆನ್ನಾಗಿ ಅಭಿವ್ಯಕ್ತಗೊಂಡಿದೆ ಎನ್ನಬಹುದು. ಆದರೆ ಕತೆಯಲ್ಲಿ ಬರುವ ಅನುಭವದ ಮೂಲ 'ಆತ್ಮ' ಮಾತ್ರಪ್ರತ್ಯಕ್ಷ ರೂಪು ತೆಗೆದುಕೊಳ್ಳಲೂ ಹಿಂಜರಿದಂತಿದೆ. ಹೀಗಾಗಿ ಕತೆಯಲ್ಲಿ ಬರುವ ಪ್ರಶ್ನೆಗಳಲ್ಲಿ ಬಹಳಷ್ಟು ಕತೆಯನ್ನು ಹೆಣೆಯಲು ಸಹಾಯಕವಾಗುವ ಯಾಂತ್ರಿಕ ಸಾಧನೆಗಳಾಗಿ ಪರಿಣಮಿಸಿದಂತೆ ಅಲ್ಲಲ್ಲಿ ಅನಿಸಿಬಿಡುವುದು. ಇಲ್ಲಿಯ ವಸ್ತುವಿನಲ್ಲಿ , ತಂತ್ರದಲ್ಲಿ, ಭಾಷೆಯಲ್ಲಿ ಒಂದು ವಿಶಿಷ್ಟ ನವ್ಯದೃಷ್ಟಿ ತನ್ನ ತನ್ನತನವನ್ನೂ ಶೋಧಿಸಲು ಯತ್ನ ಮಾಡುತ್ತಿರುವುದನ್ನು ನೋಡಬಹುದು.

'ನೆನಪು ....ಬರೀ ನೆನಪು' ಈ ಸಂಕಲನದಲ್ಲಿಯ ಅತ್ಯಂತ ಯಶಸ್ವಿಯಾದ ಕತೆ ಸಣ್ಣಕತೆಯಲ್ಲಿರಬೇಕಾದ ಎಲ್ಲಾ ಗುಣಗಳೂ ಇಲ್ಲಿ ಒಂದು ಹೊಂದಾಣಿಕೆಯನ್ನು ಪಡೆದಿವೆ. ಇಷ್ಟರಲ್ಲಿಯೇ ಲಗ್ನವಾಗಲಿರುವ ನಾಯಕಿ ತನ್ನ ನೆನಪುಗಳನ್ನು ತನ್ನ ಬೆಳೆದ ಮನಸ್ಸಿನ ಮುಖಾಂತರ ಅರಗಿಸಿಕೊಂಡು ಒಂದು ಹೊಸ ಸಂಕೀರ್ಣವಾದ, ಸ್ಥಿಮಿತವಾದ ಸ್ಥೈರ್ಯವನ್ನು ಸಾಧಿಸುವ ಚಮತ್ಕಾರ ಈ ಕತೆಯ ವಸ್ತು. ಇಲ್ಲಿ ಅನುಭವದ ಸಂಕೀರ್ಣತೆಯನ್ನು, ಸಂದಿಗ್ದತೆಯನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ದೃಷ್ಟಿಕೋನವಿದೆ.

'ನೀನೇ ತಂತಿ' ಪ್ರಾಮುಖ್ಯವಾಗಿ ರೊಮ್ಯಾಂಟಿಕ್ ಕತೆ. ಅಲ್ಲಿ ಬರುವ ಸರಯೂ ಅವಳ ಮುಂಜಿನ ಪ್ಲೇಟೋನಿಕ್ ಪ್ರೇಮಿ. ಅವಳ ಗಂಡ ಹರೀಶ. ಅವಳ ವೈವಾಹಿಕ ಜೀವನಕ್ಕೆ ಅಡ್ಡಿ ಮಾಡುವ ಹಳೆಯ ಪ್ರಿಯಕರನ ನೆನಪು... ಇವು ಹಳೆಯ ತ್ರಿಕೋಣಾಕೃತಿಯನ್ನು ಸೂಚಿಸುತ್ತವೆ. ಕತೆಯಲ್ಲಿ ಬರುವ ಪಂಜರದ ಗಿಳಿ ಆ ಗಿಳಿಯನ್ನು ಸರಯೂ ಬಿಟ್ಟುಬಿಡುವ ಸನ್ನಿವೇಶ. ವೀಣೆಯ ತಂತಿ ಆ ಹಾಡು. ಈ ಎಲ್ಲಾ ಬಹಳ ಪಾರದರ್ಶಕವಾದ ಸಂಕೇತಗಳಾಗಿ ಬರುವುದೂ ರೊಮ್ಯಾಂಟಿಕ್ ರೀತಿಯ ಕಲಾತ್ಮಕತೆಯನ್ನು ಸೂಚಿಸುತ್ತದೆ.

'ಕವಲು' ಕಥಾ ಸಂಕಲನದಲ್ಲಿನ ಒಂದು ರ ವಿವಾರ ಕಥೆಯಲ್ಲಿನ ರೇಖಾ ವೃತ್ತಿಯಲ್ಲಿ ಟೈಪಿಸ್ಟ್, ಶಾಂತಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ, ಗಿರಿಜಾ ಪಿಹೆಚ್.ಡಿ. ಮಾಡುವಾಕೆ. ಈ ಮೂವರ ಸಂಸಾರ ಒಂದು ರೂಮಿನಲ್ಲಿ. ಜೊತೆಗೆ ಈ ಮೂವರ ಸ್ವಭಾವದ ಚಿತ್ರಣ ಇದರಲ್ಲಿದೆ.

ರೇಖಾ ಎಲ್ಲರ ಜೊತೆ ಸುತ್ತಾಡುತ್ತೇನೆ ಎನ್ನುತ್ತಿರುತ್ತಾಳೆ. ಶಾಂತ ಚಿನ್ಮಯನಂದಾಜೀಯ ಭಾಷಣ ಕೇಳಲು ಹೋಗುವಾಕೆ ಎನ್ನುವಳು, ಇನ್ನು ಗಿರಿಜಾ ಇವರಿಬ್ಬರ ಬಗ್ಗೆ ಮಡಿವಂತಿಕೆಯ ಟೀಕೆ, ಟಿಪ್ಪಣಿ ಮಾಡುವಾಕೆ. ಆದರೆ ಕಥೆ ಸಾಗಿದಂತೆ ಪಾತ್ರಧಾರಿಗಳ ಬಿಚ್ಚು ಅಂತರಂಗದ ಪರಿಚಯವಾಗಿ ಕಥೆಯ ಓಟವೇ ಬೇರೆಯಾಗಿ ಬಿಡುತ್ತದೆ. ಗಿರಿಜಾಳ ಮದುವೆಯ ತುಡಿತ, ರೇಖಾಳ ಸುತ್ತಾಟ, ಕೇವಲ ಮಕ್ಕಳಿಗೆ ಮನೆ ಪಾಠ ಹೇಳಲು ಶಾಂತಾಳ ಸಂಯಮದ ಸ್ವಭಾವದ ಹಿಂದೆ ಗೆಳೆಯರ ಜೊತೆ ಫ್ರೀ ಸುತ್ತಾಟ.

ಹೀಗೆ ಈ ಮೂವರು ಹೆಣ್ಣುಗಳು ಒಬ್ಬರನೊಬ್ಬರ ವ್ಯಕ್ತಿತ್ವವನ್ನು ಹೇಳುವುದರ ಮೂಲಕ ತಮ್ಮ ಮನಸ್ಸಿನ ಭಾವನೆಗಳು ಹೇಗೆ ವ್ಯಕ್ತವಾಗುತ್ತವೆ. ಅದು ಮೂರ್ತ ರೂಪದಲ್ಲಾದರೂ ಎಂಬುದನ್ನು ಈ ಕಥೆಯು ಸಾಬೀತುಪಡಿಸುತ್ತದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಕಾಲು ಶತಮಾನ ಕಳೆದು ಹೋದರೂ ನಮ್ಮ ಹೆಂಗಸರು ಮಾತ್ರ ಇನ್ನೂ ಗುಲಾಮಗಿರಿಯಲ್ಲೇ ಇದ್ದಾರೆ. ಇದಕ್ಕೆ ಕಾರಣ ಶೇ. ೨೫ರಷ್ಟು ಸಂಪ್ರದಾಯ. ಇದು ಅಂತರಾಷ್ಟ್ರೀಯ ಮಹಿಳಾ ವರ್ಷ. ಮಹಿಳೆಯರಿಗೆ ಸತ್ವದ ಬಗ್ಗೆ ಜಾಗೃತಿಯನ್ನುಂಟು ಮಾಡಿಕೊಡುವ ವರ್ಷ ನಾವಿನ್ನೂ ಎಚ್ಚೆತ್ತುಕೊಳ್ಳಬೇಕು. ದಾಸ್ಯದ ಸಂಕೋಲೆಯನ್ನು ಹರಿದೊಗೆಯಬೇಕು. ನಮಗಾಗುತ್ತಿರುವ ಅನ್ಯಾಯವನ್ನು ಎಲ್ಲಾ ವಿಧದಲ್ಲೂ ಪ್ರತಿಭಟಿಸಬೇಕು. ಯಾವ ಕಾರಣಕ್ಕಾಗಿಯೂ ಯಾರೆದುರಿಗೂ ಬಗ್ಗಬಾರದು. ಅಂದಾಗ ಮಾತ್ರ ಎಂದು ಭಾಷಣ ಬಿಗಿಯುತ್ತಾ ಗಿಟ್ಟಿಸಿದ ವಿಮಲಾಳ ಸ್ವಾತಂತ್ರ್ಯ ಕೇವಲ ಭಾಷಣದಲ್ಲಿ ಉಳಿದು ಬಿಟ್ಟಿರುವುದು ಅವಳ ವೈಯಕ್ತಿಕ ಸೋಲು. ಇದೇನು ಗದ್ದಲ ವಿಮಲ ? ಈ ಹುಡುಗರ ದಾಂದಲೇ ರಸ್ತೇಗೇ ಕೇಳುತ್ತಿತ್ತು. ಹೆಂಡತಿ ಗ್ರ್ಯಾಜ್ಯುಯೇಟ್ ಇದ್ದರೆ ಮಕ್ಕಳನ್ನು ಛಲೋದಾಗಿ ಬೆಳಸ್ತಾಳಂತ ಕಡಿಮೆ ವರದಕ್ಷಿಣೆ ತಂಗೊಂಡು ನಿನ್ನ ಲಗ್ನಾದೆ

ನೀ.... ಹುಡುಗರಿಗೆ ಸ್ವಲ್ಪ Discipline ಕಲಿಸಿಲ್ಲ ನೋಡು'' ಎನ್ನುವ ಗಂಡನ ಮಾತಿಗೆ ಎದುರು ಜವಾಬು ಕೊಡದಷ್ಟು ಸ್ವಾತಂತ್ರ್ಯ ಅವಳ ಪಾಲಿಗೆ.

ಇಂಥ ಪರಿಸ್ಥಿತಿಯಲ್ಲಿ ಅವಳ ಮನಸ್ಥಿತಿಗೆ ಉತ್ತರ ಕೊಡುವವರಾರು ? ಎಂಬ ಪ್ರಶ್ನೆ ಅವಳನ್ನೇ ಕಾಡುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯ ಅವಳ ಅಂತರಂಗದ ಕದವನ್ನು ತಟ್ಟುವಲ್ಲಿ ಚಡಪಡಿಸುತ್ತದೆ. ಆದರೂ ತನ್ನ ಮನಸ್ಸಿನೊಂದಿಗೆ ಹೊಂದಿಕೊಳ್ಳುವ ಪ್ರಯತ್ನವನ್ನು ನಡೆಸುತ್ತಾಳೆ.

ಜೀವಂತವಾಗಿದ್ದ ಅವಳ ಕಲಾಸಾಹಿತ್ಯ ಪ್ರತಿಭೆ.....ಮದುವೆಯ ನಂತರ........ಕ್ರಿಯಾಶೀಲತೆಯ ಜೀವ. ಹೆಣವಾಗುತ್ತದೆ. ಈಗ ಕವಿತೆ ಬರೆಯಲು ಕುಳಿತರೂ ಒಂದು ಸಾಲು ಬರೆಯಲಾಗದಷ್ಟು ನಿಶ್ಕ್ರಿಯೆಯಾಗಿದೆ. ಅದೇ 'ಹೆಣ'ವಾಗಿ ಅವಳನ್ನು ಕಾಡುತ್ತದೆ. ತನಗೆ ಜೀವ ತುಂಬುವಂತೆ ಕವಿತಾ ಬರೀಲಿಕ್ಕೆ ಆರಾಮ ಇರಬಾರದು ನೋಡು ಕಲ್ಲ್ಯಾಗ ಮುಳ್ಳಾಗದ ಆಡ್ಯಾಡಬೇಕು. ಗುಡ್ಡ ಹತ್ತಬೇಕು, ನದಿ ದಾಟಬೇಕು, ಬೆಂಕಿಯೊಳಗೆ ಬೇಯಬೇಕು, ಸ್ವಲ್ಪ ಸ್ವಲ್ಪ ಸಾಯಬೇಕು , ಸತ್‌ಸತ್ತು ಬದುಕಬೇಕು, ಅಂದರ ಬರತದ ಅದು ಎನಿಸುತ್ತದೆ. ಕ್ರಿಯಾಶೀಲತೆಯನ್ನು ಕಳೆದುಕೊಂಡ ಹೆಣ, ಆ ಕಲ್ಲು ಮುಳ್ಳಿನ ಗುಡ್ಡ-ಬೆಟ್ಟಗಳ, ಹಳ್ಳ-ತಿಟ್ಟುಗಳ ಆ ಜೀವಂತ ಸಾವಿನ ನೆನಪು ಈಗೇಕೆ ಎಲ್ಲಾ ಮುಗಿದು ಇಷ್ಟು ವರ್ಷಗಳಾದ ನಂತರ ಕಳೆದ ಜನ್ಮದ ಕಥೆ ನೆನೆದು ಕತ್ತಲಲ್ಲಿ ಕೂತು ಅಳುವವರ ಪೈಕಿ ಅಲ್ಲಿ ನಾನು ಆ ಎಲ್ಲಾ ನೆನಪನ್ನು ಆಗಿನ ಕನಸುಗಳನ್ನು ಕೊಂದು ಹಾಕಿ ಹೊಸ ಜೀವನ ಸುರುಮಾಡಿಯೂ ಹಳೆಯ ಕಾಲವಾಯಿತು ಎಂದು ಕ್ರಿಯಾವಂತಿಕೆಯ ಹೆಣಕ್ಕೆ ಉತ್ತರ ಕೊಡುತ್ತಾ ಆರಾಮ ಬದುಕಿನ ಆಯ್ಕೆ ಮಾಡಿಕೊಳ್ಳುವಂತೆ 'ಹೆಣ' ದ ಕಥಾನಾಯಕಿ.

ಎನ್ನುವ ಪುರುಷ ಪ್ರೀತಿಗೆ ಸಿಲುಕಿದ ಮೀನಾಕ್ಷಿ - ಹಾಗೆಯೇ ಯಾವುದರ ಕಾರಣದ ಸ ಲುವಾಗಿ ಮಾಡಿದರೆ ಅದು ಬರೀ ಪ್ರೀತಿ ಹ್ಯಾಂಗಾದೀತು ? ಪ್ರೀತಿ ಅಂದರೆ ...ಅದಕ್ಕೆ ಕಾರಣ- ಪರಿಣಾಮದ ಸಂಬಂಧವಿಲ್ಲ ಎನ್ನುವ ಧೋರಣೆಯುಳ್ಳ ವ್ಯಕ್ತಿ ವಿವಾಹದ ೨೦ ವರ್ಷಗಳ ನಂತರ ಹೆಂಡತಿ ಸತ್ತಳೆಂದು ಮೀನಾಕ್ಷಿಯನ್ನು ವಿವಾಹವಾಗಲು ಬಯಸುತ್ತಾನೆ.

ಈ ಮುನ್ನ ಮೀನಾಕ್ಷಿ ತನಗೆ ಕಠಿಣವಾಗಿ ತೋರಿದ ದಾರಿಯಲ್ಲಿ ದಾರಿಗುಂಟ ಸಾಗಿದ್ದುಂಟು. ಈಗಲೂ ಹಾಗೆಯೇ ಮಾಡಿಬಿಟ್ಟರೆ ಎಲ್ಲಾ ಸರಳಿತವಾಗುವುದರಲ್ಲಿ ಸಂಶಯವಿಲ್ಲ ಎಂದು ಗಟ್ಟಿ ನಿರ್ಧಾರಕ್ಕೆ ಬಂದು ಕೆನಡಾಕ್ಕೆ ಹೋಗುತ್ತಾಳೆ. ಬದಲಾದ ಮನೋಭಾವದ 'ಕವಲು' ದಾರಿಯನ್ನು ಆಯ್ಕೆ ಮಾಡಿಕೊಂಡು ಕೊನೆಗೆ ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳುತ್ತಾಳೆ.

ಮಲೆನಾಡಿನ ಮೂಲೆಯೊಂದರಿಂದ ನೌಕರಿಗಾಗಿ ಮುಂಬೈ ಸೇರಿದ ಆಕೆ ಒಂಟಿ. ಡೆಲ್ಲಿಯಿಂದ ಬಂದು ಇಲ್ಲಿ ಸೇರಿದ್ದ ಆತ ಇವರಿಬ್ಬರ ಪರಸ್ಪರ ಪರಿಚಯ ಒಂದೇ ಸೂರಿನಡಿ ಬದುಕಲು ಕಲಿಸಿತು. ಇವರಿಬ್ಬರ ಪ್ರಪಂಚದಲ್ಲಿ ಯಾವುದೇ ರೀತಿಯ ಬೇಡಿಕೆಯೂ ಇರಲಿಲ್ಲ. ನಿರಾಕರಣೆಯೂ ಇರಲಿಲ್ಲ. ಅವಶ್ಯಕತೆಯೂ ಇರಲಿಲ್ಲ. ಕೊರತೆಯೂ ಇರಲಿಲ್ಲ. ನಿರೀಕ್ಷೆಯೂ ಇರಲಿಲ್ಲ. ನಿರಾಶೆಯೂ ಇರಲಿಲ್ಲ. ಪರಸ್ಪರ ಸಹವಾಸದಲ್ಲಿ ಸಂಪೂರ್ಣ ಸಂತೃಪ್ತಿ, ಸಮಾಧಾನ ಹೊಂದಿದ್ದ ಅವರಿಬ್ಬರಿಗೂ ಬಂಧನವಿಲ್ಲದ ಈ ಮುಕ್ತ ಜೀವನ ತುಂಬಾ ಒಗ್ಗಿ ಬಿಟ್ಟಿತು. ಸಹಜವಾಗಿಯೇ ಜನ ಮಾತನಾಡಿದರು. ಆದರೆ ಎಷ್ಟು ದಿನ ಮಾತಾಡುತ್ತಾರೆ. ಕೊನೆಗೆ ಸುಮ್ಮನಾಗಿ ಬಿಟ್ಟರು. ಜನರ ಮಾತುಗಳನ್ನು ಅವರಿಬ್ಬರೂ ಎಂದೂ ತಲೆಯಲ್ಲಿ ಹಾಕಿಕೊಂಡವರಲ್ಲ. ಮನಸ್ಸಿನಲ್ಲಿ ಹಂಚಿಕೊಂಡವರಲ್ಲ. ಹೀಗೊಂದು ಬದುಕಿನ ಹತ್ತು ವರ್ಷಗಳು ಕಳೆದಾಗ....ಒಡಲು ಹೊಸ ಜೀವವೊಂದರ ಮಿಸುಕಾಟ ಆರಂಭವಾಯಿತು.

ಬಹುತೇಕ ಅನಾಥಾಶ್ರಮಗಳಲ್ಲಿ ನಡೆಯುವ, ನಡೆಯುತ್ತಿರುವ ವ್ಯವಸ್ಥಿತವಾದ ದಂಧೆಯನ್ನು ಹೇಳುವ ಕಥೆ ಅನಾಥೆ'ಪುಟ್ಟದರಲ್ಲಿ ಬ್ರಹ್ಮಾಂಡ ವಿಷಯವನ್ನು ಹೇಳುತ್ತಾ ನಿಜವಾದ ಅರ್ಥದಲ್ಲೂ ಇಲ್ಲಿನ ಹೆಣ್ಣು ಮಕ್ಕಳು ಅನಾಥರೇ ಆಗಿ ಬಿಡುವ ವ್ಯವಸ್ಥೆಯ ದುರಂತನವನ್ನು ಹೇಳುವಾಗ ಅಧಿಕಾರಸ್ಥ ಹೆಣ್ಣು ಕೂಡ ಇದಕ್ಕೆ ಶಾಮಿಲಾಗುವುದನ್ನು ಯಾವ ಹಿಂಜರಿಕೆಯೂ ಇಲ್ಲದೆ ಹೇಳುತ್ತದೆ. ಕಮಲಮ್ಮನ ನಗು ಗಂಡನ ನಗುವಿನಂತೆ ಕೇಳಿಸಿತು. ಕಮಲಮ್ಮನ ದೇಹದಲ್ಲೂ ಮನಸ್ಸಿನಲ್ಲೂ ಪುರುಷ ಪ್ರಧಾನ ವ್ಯವಸ್ಥೆಯ ಅಟ್ಟಹಾಸ ಸೇರಿ ಹೋಗಿ.... ಅನಾಥೆಯರು ಅನಾಥೆಯಾಗುತ್ತಾ ಹೋಗುತ್ತಾರೆ.... ಅಧಿಕಾರ ವಿಜೃಂಭಿಸುತ್ತದೆ. ಕಾಮಾಗ್ನಿ ವ್ಯಾಪಿಸುತ್ತದೆ.

ಹನುಮಾಪುರದ ಹನುಮದೇವರ ಸೇವೆ ಮಾಡುತ್ತಿದ್ದ ಬ್ರಾಹ್ಮಣ, ಕುಟುಂಬ ಆ ಕುಟುಂಬದವರ ಸೇವೆಯನ್ನು ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುತ್ತಿದ್ದ ರಾಧವ್ವ ಇವರಿಬ್ಬರ ಸುತ್ತ ಹೆಣೆದಿರುವ ಕಥೆ-ರಾಧವ್ವ ಉಳಿದವರಂತೆ ಅವಳೆಂದೂ ಕಷ್ಟ-ಕಾರ್ಪಣ್ಯಗಳ ಬಗೆಗೆ ಬಾಯಿಬಿಟ್ಟ ಆಡುವವಳಲ್ಲಿ -ದೇವರನ್ನು ದೂಷಿಸುವವಳಲ್ಲ. ಯಾರನ್ನು ಬೇಡುವವಳಲ್ಲ ಆ ಬಗೆಯ ಬಾಳಿಗೆ ಎಂದೂ ಬೇಸರಿಸುವವಳಲ್ಲ' - ಪ್ರೇಮಾರಾಧನೆಯನ್ನು ಮೂಡಿಸುವ ವ್ಯಕ್ತಿತ್ವದವಳು.

ತನ್ನ ಅಂತರ್‌ಜಾತಿಯ ವಿವಾಹ, ತಾಯಿಯ ಮರಣ ತಮ್ಮ ಕುಟುಂಬದವರಲ್ಲಿನ ವಿವಾಹ ಇತ್ಯಾದಿಗಳ ನಡುವೆ ಬಂದ ಸುದ್ಧಿ . ರಾಧವ್ವನಿಗೆ ಕ್ಯಾನ್ಸರ್! ತಾನು ಎಲ್ಲರಿಗಿಂತಲೂ ರಾಧವ್ವನನ್ನು ಹೆಚ್ಚು ಪ್ರೀತಿಸುತ್ತೇನೆಂದು ಭ್ರಮಿಸಿದ್ದಾಕೆ. ಯೋಚಿಸುತ್ತಾಳೆ. ಆದರೆ ಸಮಸ್ಯೆಗಳಿದ್ದವು. ನನ್ನ ಮಕ್ಕಳು ಚಿಕ್ಕವು. ವಿಪರೀತ ಜವಾಬ್ದಾರಿಯ ನೌಕರಿ. ನಾನು ರೋಗಿಯ ಸೇವೆಗಾಗಿ ದವಾಖಾನೆಯಲ್ಲುಳಿದರೆ ಸಂಸಾರವನ್ನು ನೋಡುವವರ್‍ಯಾರು . ಅದೂ ಅಲ್ಲದೆ ದವಾಖಾನೆಯಲ್ಲಿರುವ ಒಂದು ಥರಾ ಉಗ್ರ ವಾಸನೆಯಿಂದ ನನಗೆ ಯಾವಾಗಲೂ ತಲೆ ತಿರುಗಿ ವಾಂತಿಯೂ ಒಂದು ಬಿಡುವುದಿಲ್ಲ. ಭ್ರಮೆಗೊಂದು ಪಲಾಯನವಾದ ಇಂಥ ಮತ ಸ್ಥಿತಿಯಲ್ಲಿರುವ ಮಧ್ಯಮವರ್ಗದ ನಾಗರೀಕ ಮಹಿಳೆಯರಿಂದ ರಾಧವ್ವ ಸತ್ತಾಗ ಯಾಕೆ ತಿಳಿಸಲಿಲ್ಲ ಎಂಬ ಆಕ್ಷೇಪವೂ ಕೂಡಾ . ನನ್ನ ನಮ್ಮೆಲ್ಲರ ಅಗಾಧವಾದ ನಿರ್ಲಜ್ಜವಾದ ಸ್ವಾರ್ಥಪರತೆಯ ದರ್ಶನ ಮೂಡಿಸುತ್ತದೆ. ಅದರಿಂದ ದೂರ ಹೋಗಿ ನಿರ್ಮಲವಾದ ಮನಸ್ಸಿನಿಂದ ಶುದ್ಧವಾದ ಪಶ್ಚಾತ್ತಾಪ ಪಡಲಿಕ್ಕೂ ಸಾಧ್ಯವಾಗದಷ್ಟು ಬಿಡುವೇ ಇರದಷ್ಟು ನೂರು ಕೆಲಸ ಕಾರ್ಯಗಳ ಮಧ್ಯೆ ಸಿಕ್ಕಿಕೊಂಡು ಹೋದೆ ಎಂಬ ಹುಸಿ ಸಮಾಧಾನದ ಕೋಟೆಯಲ್ಲಿ ಸಿಕ್ಕಿಬಿಡುತ್ತದೆ.

ಆಂಗ್ಲಸಾಹಿತಿ ಎಚ್.ಇ. ಚೇಟ್ಸ್‌ನ ವಿಚಾರಗಳಿಂದ ಪ್ರೇರಿತವಾಗಿ ಬರೆದ ಕಥೆ ಒಲವೇ ಜೀವನ ಗಂಡು- ಹೆಣ್ಣಿನ ನಡುವೆ ಪ್ರೇಮ-ಪ್ರೀತಿ ಉಂಟಾಗುವುದು ದೈಹಿಕವಾಗಿಯೇ ಅಥವಾ ಮಾನಸಿಕವಾಗಿಯೋ ಎಂಬ ಪ್ರಶ್ನೆಗೆ ಉತ್ತರ ಕೊಡುವಲ್ಲಿ ಈ ಕಥೆ - ಕಥೆ ಹೇಳುತ್ತದೆ. ಹೆಣ್ಣು ಮೂಲತಃ ಮಾನಸಿಕ ಪ್ರೀತಿ, ಪ್ರೇಮಕ್ಕೆ ಒತ್ತುಕೊಟ್ಟರೆ ಗಂಡು ದೈಹಿಕ ಆಕರ್ಷಣೆಗೆ ಒತ್ತುಕೊಟ್ಟರು. ಅದನ್ನು ತಾನು ಪರಿಗಣಿಸಿಯೇ ಇಲ್ಲವೆಂಬಂತೆ

ಯೋಚಿಸುತ್ತಾನೆ. ಅದನ್ನು ಸಮರ್ಥಿಸಿಕೊಳ್ಳುತ್ತಾನೆ. ಆದರೆ ಈ ಕಥೆ ಸಮರ್ಥನೆಯೊಂದಿಗೆ ಮುಗಿಯದೇ ಅದರಾಚೆಗೂ ನಿಲ್ಲುವುದು ಇದರ ವೈಶಿಷ್ಟ್ಯ.

ಕಡ್ಡಿ ದೇಹದ ಕುಸುಮಾ ನಿರಾಕರಣೆಗೆ ಒಳಗಾಗಿ ದೇಹ ಸಂಪತ್ತು ಪಡೆದು ಮರುಗುತ್ತಾಳೆ. ಅವಳ ಅನುಪಸ್ಥಿತಿಯಲ್ಲಿ ಎಡಗೈಯಲ್ಲಿದ್ದ ಶೋಭಾಳ ಅಂತರಂಗಕ್ಕೆ ದಾಳಿಯಿಡುತ್ತಾನೆ. ಕುಸುಮಳ ಮರುಪ್ರವೇಶದಿಂದ ದೇಹ ಮತ್ತು ಮನಸ್ಸುಗಳ ಮಧ್ಯೆ ತೂಗುತ್ತಾನೆ. ಹಿಂದೊಮ್ಮೆ ಕಡ್ಡಿ ದೇಹದ ಕುಸುಮಳ ಪ್ರಶ್ನೆಗೆ ಉತ್ತರಿಸಿದ ರೀತಿಯೇ ಎಡಗೈಯಿಲ್ಲದ ಶೋಭಾ ಪ್ರಶ್ನಿಸಿ ಉತ್ತರಿಸಿದಾಗ ಕಥಾನಾಯಕ ನಿರುತ್ತರನಾಗುತ್ತಾನೆ. ಕೊನೆಗೂ ಆಂತರೀಕ ಶೋಭೆಗೂ ಒಳಗಾಗುತ್ತಾನೆ. ವಿದೇಶಿಯೊಬ್ಬನು ಮನಸ್ಸು ಇಲ್ಲಿನ ಈ ನೆಲದ ಅನಿಸಿಕೆಯನ್ನು ಪಡೆದಿರುವುದು ಸ್ವಾಗತಾರ್ಹ.

'ನುಡಿಯೊಳಗಾಗಿ ನಡೆಯದಿದ್ದರೆ...ಮೆಚ್ಚನಾ ಗಂಡಸು ! ಪಾಪ ಈ ತತ್ವದ ಪಾಠವನ್ನು ಗಂಡನೇ ಕೇಳಲು ಸಿದ್ಧನಿಲ್ಲ. ಹೆಂಡತಿಯ ತತ್ವದ ಲೆಕ್ಚರನಿಂದ ತಪ್ಪಿಸಿಕೊಳ್ಳಲು ನಿದ್ರೆಗುಳಿಗೆ ಸೇವಿಸಿ ಗೊರಕೆ ಹೊಡೆಯುತ್ತಾನೆ. ಕೊನೆಗೊಂದು ದಿನ ಆರೋಪಿಯ ಸ್ಥಾನದಲ್ಲಿ ಕಥೆಯ ಕೇಂದ್ರವಾದ ತಾರಾ ನಿಲ್ಲುತ್ತಾಳೆ. ತಪ್ಪು ಮಾಡಿದ ವ್ಯಕ್ತಿಯನ್ನು ಪಕ್ಷಪಾತವಿಲ್ಲದೇ ಕಟಕಟೆಯಲ್ಲಿ ನಿಲ್ಲಿಸುತ್ತಾರೆ. ಆದರೆ ತಾರಾ ಮ್ಯಾಡಮ್‌ಹೆಣ್ಣಿಗೆ ಸ್ವಾತಂತ್ರ್ಯ ಬೇಕೆಂದು ಘೋಷಿಸುತ್ತಾ ಹೆಣ್ಣನ್ನು ಶೋಷಣೆ ಮಾಡುವುದೇ ಇವಳ ತತ್ವವಾಗಿದೆ. ಇಂಥ ಮನಸ್ಥಿತಿಯು ದೃಢವಾದ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗದೇ ಕೇವಲ ತತ್ವಗಳಿಗೆ ಬದ್ಧಳಾಗುವುದು.

'ಬಿಡುಗಡೆ' ಕಥೆಯು ಗಂಡು-ಹೆಣ್ಣಿನ ಸಂಬಂಧಗಳನ್ನು ಹೇಳುವಾಗ ಹೆಣ್ಣಿನ ಅಂತರಂಗದ ಒಳತೋಟಿಯನ್ನು, ಕನಸು-ವಾಸ್ತವ ಲೋಕಗಳನ್ನು 'ಬಿಡುಗಡೆ' ಸಂಕಲನದ ಮೊದಲ ಕಥೆಯಲ್ಲಿ ಗುರುತಿಸಬಹುದು. ಪರಸ್ಪರ ಸಹಕಾರ, ವಿಶ್ವಾಸ, ಕೆಲಸದ ವಿಕೇಂದ್ರೀಕರಣ ಸಂಸಾರದಲ್ಲಿ ನಡೆದಿದ್ದರೆ ಅದರಿಂದ ದೊರೆಯುವ ಆನಂದವೇ ಬೇರೆ. ಆರಂಭದ ಭಾವ ಮಹಿಳೆಯರನ್ನು ಅಂಥ ಲೋಕವೊಂದಕ್ಕೆ ಕರೆದೊಯ್ಯುತ್ತದೆ ಅಂಥ ಸ್ಥಿತಿಯೊಂದು ನಮ್ಮ ಜೀವನದಲ್ಲೇ ಇರುವುದಾದರೆ ಎಂದು ಮಂಡಿಗೆ ಮೆಲ್ಲುತ್ತಿರುವಾಗಲೂ

ಧುತ್ತೆಂದು ವಾಸ್ತವ ಎದುರಾಗುತ್ತದೆ. ಕನಸುಗಳು ಸಾಯುತ್ತವೆ. ಸಾವಿನ ಘಾಟು ದಟ್ಟವಾಗುತ್ತದೆ. ಘಾಟಿಗೆ ಸಿಕ್ಕಿಕೊಂಡ ಉಸಿರು ಚಡಪಡಿಸುತ್ತದೆ. ಚಡಪಡಿಕೆಯಲ್ಲಿಯೇ ಬದುಕು ಸಾಗುತ್ತಾ ಬರುತ್ತದೆ. ಈಗ ಇಲ್ಲಿ ಗಂಡನ ಶವದ ಮುಂದೆ ಸಿಂಹಾವಲೋಕನ ಮಾಡುವ ಸರೋಜ ತನ್ನ ಇಷ್ಟು ವರ್ಷಗಳ ತುಮಲಕ್ಕೆ ವಿರಾಮ ಚಿಹ್ನೆ ಹಾಕುತ್ತಾಳೆ. ಒಳಗಿನ ಬಾಗಿಲಿನಿಂದ ಒಬ್ಬಳೇ ಅಡುಗೆ ಮನೆಗೆ ಹೋಗಿ ಕಾಯಿಸಿಟ್ಟಿದ್ದ ಹಾಲನ್ನು ಗ್ಲಾಸಿಗೆ ಬಗ್ಗಿಸಿಕೊಂಡು ಸಕ್ಕರೆ ಬೆರೆಸಿ ಗಟಗಟನೆ ಕುಡಿದಳು. ಈ ಕ್ರಿಯೆ ಹೆಣ್ಣು ತನ್ನ ಜೀವಿತದಲ್ಲಿ ಸಂಭವಿಸಬಹುದಾದ ಎಲ್ಲವನ್ನು ನುಂಗಿ ಅರಗಿಸಿಕೊಂಡು ಮತ್ತೆ ಮತ್ತೆ ಮೇಲೇಳುವ ಆ ಶಕ್ತಿಯನ್ನು ಗಳಿಸಿಕೊಳ್ಳುವ ಪರಿಯನ್ನು ಕಾಣಬಹುದು.

ಹೆಣ್ಣುಗಳು ತಮ್ಮ ಸುತ್ತ ಮನಸ್ಸನ್ನು ತೆರೆದಿಟ್ಟು ಬದುಕುವಾಗ ಎಷ್ಟು ಮುಖಗಳಿರಬಹುದೋ ಅಂಥವನ್ನು ಬಯಸುವಲ್ಲಿ ಕಥೆಯು ಮುಖ್ಯವೆನಿಸುತ್ತದೆ. ಗಂಡಸರು ಹೆಣ್ಣನ್ನು ತಮ್ಮ ಬದುಕಿನಲ್ಲಿ ಸೇರಿಸಿಕೊಳ್ಳುವುದು...ಧರ್ಮಪತ್ನಿ, ಧಾರ್ಮಿಕ ಆಚರಣೆಗಾಗಿ ಬೇಕಾದ ಹೆಣ್ಣು, ಇಟ್ಟುಕೊಂಡವಳು , ಕಾಮಪೂರೈಕೆಯ ವಸ್ತು, ದುಡಿಯಲೆಂದೇ ಇರುವವಳು ಆಳು ಇತ್ಯಾದಿ.. ಹೆಣ್ಣಾಗಿ ಅವಳಿಗೂ ತನ್ನದೇ ಆದ ಆಲೋಚನೆಗಳಿವೆಯಲ್ಲವೇ ? ಅವನ್ನು ಹೊರ ಹಾಕಲು ಸಾರಿ ? ಇಲ್ಲದ ದಾರಿಯಲ್ಲಿ ಸಾಗುತ್ತಾಳಷ್ಟೇ. ಹೀಗೆ ಮನಸ್ಸಿನ ಪದರಗಳನ್ನು ಬಿಚ್ಚುವ ಕೆಲಸ ಅಥವಾ ಬಿಡುಗಡೆ ಮಾಡುವ ಕೆಲಸ 'ಬಿಡುಗಡೆ'ಯ ಕಥಾ ಸಂಕಲನದಲ್ಲಿ ಗುರುತಿಸಬಹುದು.

ಹೀಗೆ ಇಷ್ಟೆಲ್ಲಾ ಜಂಜಾಟ, ತುಮುಲಗಳ ನಡುವೆ ದೈಹಿಕ ಮತ್ತು ಮಾನಸಿಕ ಶೋಷಣೆಗದೆ ಒಳಗಾಗುತ್ತಾಳೆ. ಆಕೆಯ ಅಂತರಂಗದ ತಳಮಳ ಸ್ಪಷ್ಟ ರೀತಿಯಲ್ಲಿ ಅರ್ಥವಾಗದೇ ಬದುಕಿನುದ್ದಕ್ಕೂ ಘರ್ಷಣೆಗೊಳಪಡುತ್ತಾಳೆ. ಅದರಲ್ಲೂ ಕ್ಷಣಿಕ ಸುಖ ಕೊಡುವ ನೆನಪುಗಳಿಗೆ ಹೆಚ್ಚು ಮಹತ್ವಕೊಡುವುದರ ಮೂಲಕ ಮನಸ್ಸಿನ ಮುಗ್ಧತೆಗೆ ಸಾಕ್ಷಿಯಾಗುತ್ತಾಳೆ. ಆಕೆ ಅಂತರಂಗದ ಬದುಕನ್ನು ನಡೆಸದಿದ್ದರೂ....ಸಮಾಜದಲ್ಲಿ ಬದುಕು ಸಾಗಿಸಲೇ ಬೇಕಾದ ಪರಿಸ್ಥಿತಿ ಬಂದಾಗ ಆಕೆಯ ಮುಂದಿರುವ ದಾರಿ ಎರಡೇ, ಒಂದು ಪಿತೃ ಪ್ರಧಾನ ವ್ಯವಸ್ಥೆಗೆ ತಲೆಬಾಗಿ ಹೇಳಿದಂತೆ ಕೇಳುವುದು, ಇಲ್ಲವೇ 'ಕವಲು' ದಾರಿಯಲ್ಲಿ

ಸಾಗುವುದು ಪರಂಪರಾಗತವಾದ ಸಂಪ್ರದಾಯ. ಬದ್ಧವಾದ ಹೆಣ್ಣಿನ ವಿಗ್ರಹವನ್ನು ಮಾತ್ರ ಕೆತ್ತದೆ ಅದರ ಒಳಗಿನ ಮನೋಭಾವವನ್ನು ಧೈರ್ಯದಿಂದ ಸಮಾಜಕ್ಕೆ ತೆರೆದಿಡುವ ಕಾರ್ಯವಾಗಿದೆ. ಹಾಗೂ ಮಹಿಳಾ ನಲೆಯ ಬದಲಾವಣೆಯ ಮೂಲಕ ಹೊರಡುವ ಹೆಣ್ಣುಗಳು ತಮ್ಮ ತಮ್ಮ ಬದುಕನ್ನು ನೋಡುವ ಹೊಸ ದೃಷ್ಟಿಕೋನದಿಂದ ಪಡೆದುಕೊಂಡ ಅನುಭವದ ಪರಿಣಾಮವೆಂದರೆ ಜಿಗುಪ್ಸೆ, ಹತಾಶೆ, ಏಕಾಕಿತನ, ಇವುಗಳನ್ನು ಮುಚ್ಚಿಡದೇ ಬಿಚ್ಚಿ ತೋರಿಸುವ ಎದೆಗಾರಿಕೆಯನ್ನು ಈ ಕಥೆಗಳಲ್ಲಿ ಗುರುತಿಸಬಹುದು.

ಆ) ಕನಸು ವಾಸ್ತವಗಳ ಬದುಕಿನ ಚಿತ್ರಣ

ಕಾಲ ಮತ್ತು ಮನುಷ್ಯನ ಸಂಬಂಧ ವಿಶಿಷ್ಟವಾದದ್ದು ಕಾಲದೊಳಗೆ ಮನುಷ್ಯ ಮನುಷ್ಯನೊಳಗೆ ಕಾಲ, ನೆಲೆಯಾಗಲು ನಡೆಸುವ ಪ್ರಯತ್ನಗಳ ಪ್ರಕ್ರಿಯಾ ರೂಪವೇ ಬದುಕು. ' ಈ ಬದುಕಿನೊಳಗೆ ಭೂತ, ವರ್ತಮಾನ, ಭವಿಷ್ಯತ್‌ಗಳು ಅಡಕವಾಗಿರುತ್ತವೆ. ಭೂತದ ಬುತ್ತಿ ಹೊತ್ತು ವರ್ತಮಾನ ಹುಟ್ಟಿ ಬರುತ್ತದೆ. ವರ್ತಮಾನದ ಆಶಯ ಆಶಾವಾದವನ್ನು ಹೊತ್ತು ಭವಿಷ್ಯತ್ ಬದುಕಿನ ಪ್ರತೀಕವಾಗುತ್ತದೆ. ಈ ಕಾಲದೊಳಗೆ ಪ್ರವೇಶಿಸಿ ಮತ್ತೆ ಅಲ್ಲಿಂದ ಹೊರಬರಲು ನಡೆಸುವ ಎಲ್ಲಾ ರೀತಿಯ ಕ್ರಿಯೆ-ಪ್ರಕ್ರಿಯೆಗಳಲ್ಲಿ ಸಂವೇದನೆಯ ನೆಲೆಯೊಂದು ನಿರ್ಮಾಣವಾಗುತ್ತದೆ. ಈ ಸಂವೇದನೆಯಲ್ಲಿ ನೋವು-ನಲಿವು, ಸುಖ-ದುಃಖ, ನೀತಿ-ಅನೀತಿ, ನ್ಯಾಯ-ಅನ್ಯಾಯ, ಮೇಲು-ಕೀಳು-ತಾರತಮ್ಯತೆ ಇನ್ನೂ ಅಸಂಖ್ಯಾತ ವಿವರಗಳ ಗುಚ್ಛ ಈ ಗುಚ್ಛಗಳಲ್ಲಿ ಒಂದಲ್ಲ ಒಂದು ರೀತಿಯ ಮೌಲ್ಯಗಳು ಕಾಣಿಸುತ್ತವೆ. 'ಜೀವನದಲ್ಲಿ ಇಂತಹ ಮೌಲ್ಯಗಳು ಹಲವಿದೆ. ಹಲವಾರು ರೂಪಗಳಲ್ಲಿವೆ. ಇವುಗಳೇ ಸಾಹಿತ್ಯದ ವಸ್ತು. ಇವುಗಳನ್ನು ಸಂವೇದನೆಗೆ ತಂದು ಕೊಡುವುದೇ ಸಾಹಿತ್ಯದ ಗುರಿ.' ಹೀಗೆ ಸಂವೇದನೆಗೆ ತಂದುಕೊಡುವುದು ಸಾಹಿತ್ಯದ ಗುರಿಯಾದರೂ, ಮನುಷ್ಯ ವ್ಯಕ್ತಿಯೊಬ್ಬ ತನ್ನ ಅನುಭವದ ಮಿತಿಯೊಳಗೆ ವಸ್ತುವಿಗೊಂದು ಆಕಾರ ಕೊಡುವುದನ್ನು ಗುರುತಿಸಬಹುದಾಗಿದೆ. ಅಂದರೆ ಅವರವರ ಕಾಣ್ಕೆಗೆ ಅನುಗುಣವಾಗಿ ಮೌಲ್ಯಗಳನ್ನು ಪ್ರತಿಪಾದಿಸುವಾಗ ಆ ಅನುಭವಗಳ ಮೌಲ್ಯಗಳ ಮಿತಿಯೂ ಆಗುವುದನ್ನು ಗುರುತಿಸಬಹುದು. ಆಗದ ಮೌಲ್ಯದ ರೀತಿಗಳು ಬದಲಾಗುತ್ತವೆಯೇ ಹೊರತು ಮೌಲ್ಯಗಳಲ್ಲ ಎಂಬುದನ್ನು ಗಮನಿಸಬಹುದು. ಈ ಮುಖಗಳೇ ಸಾಹಿತ್ಯದ ವ

ಸ್ತುವಾಗಿ ಪರಿಣಮಿಸುತ್ತದೆ. ಹೀಗೆ ಮೌಲ್ಯಗಳು ಸಾಹಿತ್ಯದ ವಸ್ತುಗಳಾದಾಗ ಇವು ಕಥೆಯ ಮೂಲಕ ಹೊರಜಗತ್ತಿನಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತವೆ.

ಕಥೆಯ ಕೇಂದ್ರಬಿಂದು ಹೆಣ್ಣು. ಹೆಣ್ಣಿನ ಅಂತರಂಗದ ಒಳತೋಟಿಯನ್ನು ಚಿತ್ರಿಸುವಲ್ಲಿ ಲೇಖಕಿ ಕನಸು - ವಾಸ್ತವಗಳ ಲೋಕವನ್ನು ತಮ್ಮ ಕಥೆಗಳಲ್ಲಿ ಎಳೆ ಎಳೆಯಾಗಿ ಬಿಚ್ಚಿಡುವ ಪ್ಸಯತ್ನವನ್ನು ಮಾಡಿದ್ದಾರೆ. ಹೆಣ್ಣು ತನ್ನ ವ್ಯಕ್ತಿತ್ವವನ್ನು ಹುಡುಕುವ ಪ್ರಯತ್ನದಲ್ಲಿರುವುದು ಆ ಹುಡುಕಾಟ ಕನಸು - ವಾಸ್ತವ ಲೋಕಗಳನ್ನು ಗೋಚರಿಸುತ್ತದೆ. ಇದು ಬದುಕಿನ ಹಲವು ಮುಖಗಳನ್ನು ಬಿಂಬಿಸುತ್ತದೆ. ಹೆಣ್ಣು ಸದಾ ಗುಪ್ತಗಾಮಿನಿಯ ಹಾಗೆ ಕಾಣುವುದು ಅವಳ ಲೋಕವನ್ನು ಅರಿಯಲು ಕನಸು - ವಾಸ್ತವಗಳ ಬದುಕು ಚಿತ್ರಣಗೊಂಡಿರುವುದನ್ನು ಈ ಕಥೆಗಳನ್ನು ಕಾಣಬಹುದಾಗಿದೆ.

'ಮುಳ್ಳುಗಳು' ಕಥೆಯಲ್ಲಿನ ನಾಯಕಿ ಪ್ರಾಧ್ಯಾಪಕಿ ಶಾಂತಿಯ ಮನಸ್ಸು ಅವಳ ಯೌವ್ವನದ ಬದುಕನ್ನು ತಿಳಿಸುತ್ತದೆ. ಆಕೆ ಕನಸು ಕಾಣುವ ಆಸೆ - ನಿರೀಕ್ಷೆಗಳು ನಿಜಸ್ಥಿತಿಯಲ್ಲಿ ನಗೆಪಾಟಲಾಗುತ್ತದೆ. ಪ್ರೊ. ದೇಸಾಯಿಯೊಂದಿಗಿನ ಅವಳ ಒಡನಾಟ ಆತನು ಆಡುವ ಮಾತುಗಳು ಕನಸು ಕಾಣಲಿಕ್ಕೆ ಪ್ರೇರೇಪಿಸುತ್ತವೆ. ಆದರೆ ಸಮಾಜದ ಬದುಕಿನಲ್ಲಿ ಮಾತುಗಳು ಮುಳ್ಳುಗಳಾಗಿ ಪರಿವರ್ತನೆಯಾಗುತ್ತವೆ. ಇದರಿಂದ ಆಕೆಯ ಮನಸ್ಥಿತಿಯು ತನ್ನನೇ ಪರೀಕ್ಷೆಗೆ ಒಳಪಡಿಸುವ ಸಂದರ್ಭವನ್ನು ಕಾಣಬಹುದು.

ಪ್ರಶ್ನೆಯ ಕಥೆಯಲ್ಲಿ ಜೀವ ಮತ್ತು ದೇಹ ಎರಡುರೂಪಗಳನ್ನು ನೋಡಬಹುದು. ಇಲ್ಲಿ ಜೀವ ಮತ್ತು ದೇಹಗಳು ತನ್ನನ್ನು ತಾನೇ ಹುಡುಕುತ್ತಾ ಹೋಗುವಂತೆ ಗೋಚರಿಸುತ್ತದೆ. ಆದರೆ ಕತೆಯಲ್ಲಿ ದೇಹದ ದೃಷ್ಟಿಯಿಂದ ನೋಡಿದರೆ ಶಶಿಯ ಮಾನಸಿಕ ಸ್ಥಿತಿಯು 'ಆತ್ಮ'ದ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಇಲ್ಲಿ ಆತ್ಮ ಎಂಬುದು ಅನುಭವದ ಮೂಲರೂಪವಾಗಿದೆ. ಈ ಆತ್ಮವು ಹೇಳುವ ಕೇಳುವ ಹಲವಾರು ಪ್ರಶ್ನೆಗಳು ಕಥೆಯನ್ನು ಹೆಣೆಯುವಲ್ಲಿ ಸಾಧ್ಯವಾಗಿದೆ. ಆದರೆ ಇಲ್ಲಿನ ಬಹಳಷ್ಟು ಪ್ರಶ್ನೆಗಳು ಯಾಂತ್ರಿಕೃತ ಸಾಧನವಾಗಿ ಪರಿಣಮಿಸಿದೆ. ಅಂತರಾಳದಲ್ಲಿ ಮೂಡುವ ನೆನಪಿಗೆ ಜೀವವಿರುತ್ತಿತ್ತು. ಆ ಜೀವಕ್ಕೆ ವ್ಯಕ್ತಿಯ ರೂಪುಕೊಟ್ಟು ನಂ.1, ನಂ. 2, ನಂ.3, ನಂ. 4 ಇತ್ಯಾದಿಗಳ ಸಂಖ್ಯೆಗಳ

ಮೂಲಕ 'ಆತ್ಮಶೋಧನೆ' ಮಾಡಿಕೊಳ್ಳುವ ಈಕೆ ಭ್ರಮಾಲೋಕಕ್ಕೆ ಹತ್ತಿರವಾಗುತ್ತಿದ್ದು ಈ ಎಲ್ಲಾ ವ್ಯಕ್ತಿಗಳೊಂದಿಗಿನ ಮಾನಸಿಕ ಚರ್ಚೆ ಇಡೀ ಅವಳ ಬದುಕಿನ ಏರಿಳಿತಗಳನ್ನು ಪ್ರತಿಬಿಂಬಿಸುತ್ತಿತ್ತು. ಆದರೂ ವಾಸ್ತವ ಬದುಕಿಗೆ ಅದನ್ನು ಸ್ವೀಕಾರ ಮಾಡುತ್ತಿದ್ದಳು. ಇದರ ಗುಂಗಿನಲ್ಲೇ ಕ್ರಮೇಣ ಶಾಂತವಾಗಿ - ಸ್ತಬ್ಧವಾಗಿ ಹೋಗುವ ತೆರೆಗಳು...ಕೊನೆಯ ಪ್ರಶ್ನೆ ನಿಜವಾಗಿಯೂ ಶಾಂತವಾಗುವವೆ ? ಶಾಂತಿಯೆಂಬುದಾದರೂ ಅಸ್ತಿತ್ವದಲ್ಲಿದೆಯೇ ? ಎಂಬ ಪ್ರಶ್ನೆಯನ್ನು ಹಾಕುವುದರ, ಹಾಕಿಕೊಳ್ಳುವುದರ ಮೂಲಕ ದ್ವಂದ್ವ ಸ್ಥಿತಿಗೆ ಹೋಗುತ್ತಾಳೆ.

'ನೀನೇ ತಂತಿ' ಇದೊಂದು ರೊಮ್ಯಾಂಟಿಕ್ ಕತೆ ಎನ್ನಬಹುದು. ಇಲ್ಲಿ ಬರುವ ಸರಯೂನ ಗಂಡ ಹರೀಶ, ಮುಂಚಿನ ಭಗ್ನಗೊಂಡ ಪ್ರೇಮಿಯೊಬ್ಬ. ಇವರಿಬ್ಬರ ನಡುವಿನ ಸಂಬಂಧವು ಸರಯೂದಾಗಿದೆ. ಅವಳ ವೈವಾಹಿಕ ಜೀವನಕ್ಕೆ ಅಡ್ಡಿ ಬರುವ ಹಳೆಯ ಪ್ರೇಮಿಯ ನೆನಪು, ವಾಸ್ತವ ಬದುಕಿನ ಸಮಾಜ ಗುರುತಿಸುವ ಗಂಡ, ತ್ರಿಕೋನಾಕೃತಿಯಲ್ಲಿ ಸೂಚಿಸುತ್ತದೆ. ಕತೆಯಲ್ಲಿ ಬರುವಂತಹ ಪಂಜರದ ಗಿಳಿ. ಅದನ್ನು ಸರಯೂ ಬಿಟ್ಟುಬಿಡುವ ಸನ್ನಿವೇಶ, ಆಕೆಯ ಚಂಚಲತೆಯನ್ನು ಸೂಚಿಸುತ್ತದೆ. ಹಿಂದಿನ ಜನ್ಮ, ಋಣಾನುಬಂಧ - ಭಗ್ನಪ್ರೇಮ ಇವೆಲ್ಲಾ ಬರೇ ಹುಚ್ಚು. ಈ ಜನ್ಮದಿನ ಬಹಳ ಸೆಂಟಿಮೆಂಟಲ್. ತನ್ನ ಗಂಡ ಎನ್ನುವುದು ಆಕೆಗೆ ಗೊತ್ತಿದೆ. ಈ ಜನ್ಮಕ್ಕೂ ಹಿಂದಿನ ಜನ್ಮಕ್ಕೂ ನಿಜವಾಗಿಯೂ ಏನಾದರೂ ಸಂಬಂಧವಿದೆಯಾ? ಹಾಗಿದ್ದರೆ ಹಿಂದಿನ ಜನ್ಮದ ಆತ್ಮೀಯರು ಈ ಜನ್ಮದಲ್ಲೂ ಆತ್ಮೀಯರಾಗುತ್ತಾರೆಯೇ ? ಬರೇ ಭ್ರಮೆ. ಕನಸಿನಲ್ಲಿ ಮೈ ಮರೆತಾಗ ಸಮೀಪ ಇದ್ದಾಗ ಹಿಂದಿನ ಜನ್ಮ ಋಣಾನುಬಂಧಗಳನ್ನು ನಂಬಬೇಕೆನಿಸುತ್ತದೆ. ಕನಸು ಒಡೆದಾಗ ದೂರ ಹೋದಾಗ ಇವೆಲ್ಲಾ ಭ್ರಮೆ ಎನಿಸುತ್ತದೆ. ಯಾವುದು ಖರೆ ? ಯಾವುದು ಸುಳ್ಳು ? ...ಹೀಗೆ ಇಂಥಹ ಪರಿಸ್ಥಿತಿಯನ್ನು ಬದುಕಿನುದ್ದಕ್ಕೂ ಎದುರಿಸುವ ಸರಯೂ ಸಂಧರ್ಭವನ್ನು ದೂಷಿಸುತ್ತಾಳೆ. ಹಾಗಾಗಿ ಈ ಕತೆಯ ಪ್ರಾಯೋಗಿಕ ಅನಿರ್ದಿಷ್ಟ ಮನೋಭೂಮಿಕೆಯನ್ನು ಸಾರಿ ಹೇಳುವಂತಿದೆ. ಹಳೆ -ಹೊಸ ಕಲ್ಪಕತೆ- ವಾಸ್ತವಿಕತೆ, ಸಂಕೀರ್ಣತೆಯ ಅರಿವು ಸುಲಭೀಕರಣ ಮಾಡಹಚ್ಚುವ ಕಲೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಜೀವಂತವಾಗಿದ್ದ ಅವಳ ಕಲಾ ಸಾಹಿತ್ಯ ಪ್ರತಿಭೆ...ಮದುವೆಯ ನಂತರ ಕ್ರಿಯಾಶೀಲತೆಯ ಜೀವ ಹೆಣವಾಗುತ್ತದೆ. ಈಗ ಕವಿತೆಯನು ಬರೆಯಲು ಕುಳಿತರು ಒಂದು

ಸಾಲು ಬರೆಯಲಾರದಷ್ಟು ನಿಶ್ಕ್ರಿಯೆಯಾಗಿದೆ. ಅದೇ 'ಹೆಣ'ವಾಗಿ ಅವಳನ್ನು ಕಾಡುತ್ತದೆ. ಪ್ರತಿದಿನವೂ ಕನಸಿನ ರೂಪದಲ್ಲಿ ಬರುವ ಹೆಣವಾಗಿ ಗೋಚರಿಸುವ ಅವಳ ಸುಪ್ತ ಪ್ರಜ್ಞೆಯಾಗಿರುತ್ತದೆ. ಅದನ್ನು ಅವಳು ಭ್ರಮೆಯೆಂದು ತಿಳಿದರೂ ಮರೆಯಲು ಆಗುವುದಿಲ್ಲ. ಹೆಸರು ಕೇಳಿದರೆ ಹೆಣ ಎಂದೇ ಹೇಳುತ್ತದೆ. ಹಾಗೂ ಕವನ ಬರೆಯುವ ಅವಳ ಪ್ರತಿಭೆಯನ್ನು ಹೊಗಳುತ್ತದೆ. ಅವರ ಜೊತೆಯಲ್ಲಿಯೂ ಪ್ರಶ್ನಿಸುತ್ತದೆ. ಆಕೆ ಅದನ್ನು ತ್ಯಜಿಸಿದರೂ ಸಹ ಕೆಲವೊಮ್ಮೆ ಚಿಂತಿಸುತ್ತಾಳೆ. ನೆನಪುಗಳು ಮರುಕಳಿಸುತ್ತವೆ. ಆದರೆ ಅರ್ಥವಾಗುವುದಿಲ್ಲ. ಕನಸಿನಲ್ಲಿ ಹೇಳುವ ಅಗೋಚರ ರೂಪ, ವಾಸ್ತವದಲ್ಲಿ ಹೇಳುವ ತನ್ನ ಗಂಡನ ಮಾತುಗಳು ಇವರಿಬ್ಬರ ಅಭಿಪ್ರಾಯಗಳು ಒಂದೇ ಎನಿಸುತ್ತವೆ. ಹೆಣವು ಆಕೆಯ ಸಾಮಾನ್ಯರ ಬಗೆಗೆ ಸವಾಲನ್ನು ಹಾಕುತ್ತದೆ. ಸವಾಲನ್ನು ಸ್ವೀಕರಿಸುವ ಆಕೆ ದೃಢ ನಿರ್ಧಾರದಿಂದ ಕವನವನ್ನು ಬರೆಯಲಿಕ್ಕೆ ಮನಸ್ಸು ಮಾಡುತ್ತಾಳೆ. ಆದರೆ ಕೊನೆಗೂ ಸಾಧ್ಯವಾಗದ ಸೋಲುತ್ತಾಳೆ. ಇದ್ದಕ್ಕಿದ್ದಂತೆ ಉದ್ವೇಗದಿಂದ ಮಾತನಾಡಿತು ಹೆಣ. ನನ್ನನ್ನು ಬದುಕಿಸು. ನೀನು ಮತ್ತೆ ಟನ್‌ಗಟ್ಟಲೆ ಕವನ ಬರೆಯುವಂತೆ ಮಾಡುವೆ. ಮತ್ತೆ ನಾವು ಈ ಗುಡ್ಡಾ ಹತ್ತೋಣ. ಕುಣಿದಾಡೋಣ. ಹಕ್ಕೀ ಹಾಂಗ ಹಾರಾಡೋಣ, ಮೀನಿನ್ಹಾಂಗ ಈಸಾಡೋಣ, ಬದುಕೋಣ.....

ಸತೆಸತ್ತು ಬದುಕೋಣ ? ಊಹ್ಞೂಂ ನಾ ಒಲ್ಲೆ. ನನಗೆ ಬ್ಯಾಡ, ನಾ ಈಗ ಆರಾಮಿದ್ದೀನಿ. ನಿನ ಕುಣಿದಾಡೋದು, ಹಾರೋಡೋದು, ಹತ್ತೋದು, ಇಳಿಯೋದು, ಏಳೋದು, ಬೀಳೋದು, ಸಾಯೋದು ಎಲ್ಲಾ ನಿನಗ ಇರ್ಲಿ.

ಮತ್ತ ಕವನ ?

ದೇವರಾಣೆ ನಾ ಇನ್ನ ಕವನಾ ಬರಿಯೋ ಹುಚ್ಚುತನಾ ಮಾಡೋದಿಲ್ಲ. ನನಗ ಯಾವುದೂ ಬ್ಯಾಡ, ನಾ ಹೊರಟೆ.

ಹೀಗೆ 'ಹೆಣ'ವು ಹೇಳುವುದರ ಆಕೆ ತನ್ನನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಇದರ ಅರಿವು ಕವಿತೆಯನ್ನು ಆಕೆ ಬರೆಯಲು ಅಸಾಧ್ಯವಾದಾಗ ಸಾಬೀತಾಗುತ್ತದೆ. ಗಂಡ ಮುಂಜಾನೆ ಕೇಳುವ ಪ್ರಶ್ನೆಗೆ ಉತ್ತರಿಸಲು ಸಾಧ್ಯವಾಗದಿದ್ದಾಗ

ಅವಳ ಸೋಲು ಭ್ರಮಾಲೋಕದಲ್ಲೋ, ವಾಸ್ತವ ಬದುಕಿನಲ್ಲೋ ಎಂಬುದು ಮುಖ್ಯವಾಗುತ್ತದೆ.

'ಮಳೆ ಬಂದಾಗ' ಕತೆಯು 'ಮಾರ್ಡನ್ ಆರ್ಟಿಸ್ಟ್'ನ ಕತೆಯಾಗಿದೆ. 'ಸಹನಾ'ಗೆ ಪೆಂಟಿಂಗ್ ಮಾಡುವ ಕಲೆ ಇರುತ್ತದೆ. ಆಕೆಯ ಗೆಳತಿ ಸರೋಜ ವಿವಾಹಿತೆ ಹಾಗೂ ಮುಗ್ಧತೆಯ ಸಂಕೇತ' - ಈಕೆ ಜೀವನವನ್ನು ಕೇವಲ ಕುಟುಂಬಕ್ಕೆ ಸೀಮಿತಗೊಂಡಿರಿಸಿಕೊಳ್ಳುತ್ತಾಳೆ. ಜೀವನದ ಅನುಭವ ಕಡಿಮೆ. ಆದರೆ ಸಹನಾ ಸೂಕ್ಷ್ಮತೆಗಳ ಗ್ರಹಿಕೆಯಲ್ಲಿ ಆಳವಾದ ಜೀವನದ ಮಹತ್ವತೆಯನ್ನು ತಿಳಿದಿರುವಾಕೆ. ಆಕೆಯಲ್ಲಿನ ಈ ಅರಿವೆ ಅವಳ ಕಲಾಭಿವ್ಯಕ್ತಿಯಾಗಿದೆ. ಇಂತಹ ಕೌಶಲ್ಯತೆ ಪೂರಕವೆಂಬಂತೆ ಸರೋಜಳ ಗಂಡ ವಿಮರ್ಶಕನಾಗುವ ಪರಿ ಈ ಮೂವರ ಸಂಭಾಷಣೆಯ ಮೂಲಕ ಕಥೆ ತೆರೆದುಕೊಳ್ಳುತ್ತದೆ. ಪ್ರಕೃತಿಯ ಮಡಿಲಲ್ಲಿ ಚಿತ್ರ ಬಿಡಿಸಲಿಕ್ಕೆ ಸಜ್ಜಾಗುವ ಸಹನಾಗೆ ತಿಂಡಿ ಕಾಫಿಗಳನ್ನು ಸರಿಯಾದ ಸಮಯಕ್ಕೆ ಒದಗಿಸಿ ಕೊಡುವ ಅಪ್ಪಟ ಗೃಹಿಣಿಯಾಗಿ ಸರೋಜಳ ಗುಣವಾಗಿರುತ್ತದೆ. ಸಹನಾಳ ಮನಸ್ಸಿನ ಕಲ್ಪನೆಯ ಕಲೆಗೆ ಬಣ್ಣ ಹಚ್ಚುವ ಪ್ರಯತ್ನ ಚಿತ್ರಕಲೆಯ ಉದ್ದೇಶವಾಗಿರುತ್ತದೆ. ಸರೋಜ ತನ್ನ ಗೆಳತಿಯ ಯೋಗಕ್ಷೇಮ ವಿಚಾರಿಸುವುದರ ಮೂಲಕ ಕಥೆಗೆ ಮುನ್ನುಡಿಯಾಗುತ್ತಾಳೆ. ಸಹನಾ ತನ್ನ ಮನಸ್ಸಿನ ಚಿತ್ರಣ ಹೊರಬರುವಷ್ಟರಲ್ಲೇ ಅದರ ರೂಪಕಳೆದುಹೋಗುತ್ತದೆ. ತನ್ನ ಶ್ರಮವೆಲ್ಲಾ ವ್ಯರ್ಥವಾಯಿತೆಂದು ಮನಸ್ಸಲ್ಲೇ ವ್ಯಥೆ ಪಡುತ್ತಾಳೆ. ಕೊನೆಗೆ ಏನು ಅರ್ಥವಾಗದ ಸ್ಥಿತಿಗೆ ಸರೋಜ ನಿಲ್ಲುತ್ತಾಳೆ. ಅರ್ಥವಾದರೂ ಅರ್ಥೈಸಿಕೊಂಡ ಅರಗಿಸಿಕೊಳ್ಳಲಾರದ ಸ್ಥಿತಿಗೆ ಸಹನಾ ನಿಲ್ಲುತ್ತಾಳೆ. ಇವಳು ಕಂಡ ಕನಸಿನ ತುಂತುರು ಹನಿವಾಸ್ತವ ಬದುಕಿನಲ್ಲಿ ಮಳೆ ಬಂದು ಎಲ್ಲವನ್ನು ತೋಯಿಸಿತ್ತು. ಕೊನೆಗೆ ಅವಳ ಮುಖದ ಮೇಲೆ ಹರಿಯುತ್ತಿದ್ದ ನೀರಿನಲ್ಲಿ ಅವಳ ಕಂಬನಿ ಬೆರೆತಿದೆಯೋ ಎಂದು ತಿಳಿದುಕೊಳ್ಳಲು ಮತ್ತೆ ಮತ್ತೆ ವ್ಯರ್ಥ ಪ್ರಯತ್ನ ಮಾಡುತ್ತಿದ್ದಳು ಸರೋಜ.

ಮಳೆ ಸುರಿಯುತ್ತಲೇ ಇತ್ತು.

'ನೆರಳು'ಕತೆಯೂ ಸೂಕ್ಷ್ಮವಾದ ಅರ್ಥವಂತಿಕೆಯನ್ನು ತಿಳಿಸುವ ಪ್ರಯತ್ನದ ಮಾದರಿಯಾಗಿದೆ. ವಿದ್ಯಾವಂತೆ, ಗೃಹಿಣಿಯಾದ 'ಮಾಲತಿ'ಯು ತನ್ನ ಬದುಕನ್ನು ನಿರ್ವಹಿಸುವ ಬಗೆಯು ಕೌಶಲ್ಯದಾಯಕವಾದುದು. ಈಕೆ ಎಲ್ಲರ ಮನಸ್ಥಿತಿಗೂ ತಕ್ಕಂತೆ

ಹೊಂದಿಕೊಳ್ಳುವ ಸ್ವಭಾವದವಳು. ತನ್ನ ತಾಯಿಯನ್ನು ತನ್ನ ಮಗುವಂತೆ ನೋಡಿಕೊಳ್ಳುವವಳು. ಈಕೆ ಗಂಡ ಎಂಜಿನಿಯರ್. ಮಗ-ಮಗಳು ಸಂಸಾರ ಹೊಂದಿದ ಮಧ್ಯಮವರ್ಗ ಕುಟುಂಬ. ಆದರೆ ಈ ಕತೆಯಲ್ಲಿ ಮುಖ್ಯವಾಗಿ ಮಾಲತಿ ತಾಯಿಯ ಕತೆಯನ್ನು ತಿಳಿಯಬೇಕು. ಅವಳ ಜೀವನದಲ್ಲಿ ನಡೆದ ಸಂಗತಿಗಳೆಲ್ಲ ಮಾಲತಿಗೆ ತಿಳಿದಿರುತ್ತದೆ. ಮಾಲತಿಯ ಅವಳನ್ನು ಅವರ ಸೋದರ ಮಾವನಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ. ಆತನೇ ಮಾಲತಿಯ ತಂದೆ ಆದರೆ ಮಾಲತಿಯ ತಾಯಿ ಬೇರೊಬ್ಬ ಸದಾಶಿವ ಎನ್ನುವವನ್ನು ಪ್ರೀತಿಸುತ್ತಿರುತ್ತಾಳೆ. ಇದು ಅವಳೆಲ್ಲಾ ಜೀವನವನ್ನು ಮುಗಿಸಿ ವೃದ್ಧಾಪ್ಯದ ಹಂತದಲ್ಲಿ ಕಾಡುವ ನೆನಪಾಗುತ್ತದೆ. ಹಿಂದಿನ ನೆನಪು, ಮುಂದಿನ ಅರಿವಿನ ಮಧ್ಯೆ ಮಾಲತಿ ಕಾಣಿಸಿಕೊಳ್ಳುತ್ತಾಳೆ. ಇದು ಅವ್ವನ ಚಡಪಡಿಕೆ. ಮಗಳು ಬೀನಾ ಚಂದು ಎಂಬ ಹುಡುಗನನ್ನು ಪ್ರೇಮಿಸುತ್ತಿರುವುದರ ವಿರೋಧ ಅಪ್ಪನಿಗಿರುತ್ತದೆ. ಆದರೆ ತನ್ನ ಹಳೆಯ ಭಗ್ನಪ್ರೇಮಿ ಸದಾಶಿವನ ಮೇಲಿನ ಒಲವಿನ ಬಗ್ಗೆ ಅವ್ವನಿಗೆ ಎಳ್ಳಷ್ಟು ತಪ್ಪಾಗಿ ಕಾಣುವುದಿಲ್ಲ. ಹಾಗಾಗಿ ಇಲ್ಲಿ ಅವ್ವನಿಗೆ ನೆನಪುಗಳೇ ನೆರಳಾಗಿ ಕಾಡಿಸಿ ವಾಸ್ತವ ಬದುಕಿನ ಘಟನೆಗಳೆಲ್ಲಾ ಅವಳಿಗೆ ಕಿರಿಕಿರಿ ಎನಿಸುತ್ತಿರುತ್ತವೆ. ಅವ್ವನ ಸಾವಿನ ಕಡೆಯ ದಿನಗಳಲ್ಲಿ ಡೈರಿಯನ್ನು ಬರೆಯುವುದರ ಮೂಲಕ ಅವಳ ಅಭಿವ್ಯಕ್ತಿ ಸಾಧ್ಯವಾಗುತ್ತದೆ. ಮಾಲತಿಗೆ ಇವರೆಲ್ಲದರ ಅರಿವು ಗೋಚರಿಸಿದರೂ ಸಂದರ್ಭಗಳು ಆಕೆಯನ್ನು ಮೂಕಳಾಗಿ ಮಾಡುತ್ತವೆ. ಕೇವಲ ಭ್ರಮಾಲೋಕವೇ ಹಿತವೆನಿಸಿ ನಿಜ ಬದುಕಿನ ಸತ್ಯವನ್ನು ಅರಿಯದೇ ತನ್ನ ನೆರಳಾಗಿ ಬರುವ ಹಳೆಯ ಪ್ರೇಮಿಯ ಮೊರೆ ಹೋಗುತ್ತಾಳೆ ಅವ್ವ. ಆದರೆ ಕನಸಿನ ಅರಿವಿಗೂ ಹೋಗದೇ ವಾಸ್ತವತೆಯ ಸತ್ಯಕ್ಕೆ ಹೊಂದಿಕೊಳ್ಳಲು ಭಾವನೆಗಳನ್ನು ಅದುಮಿಡುವ ಪ್ರಯತ್ನ ಮಾಡುತ್ತಾಳೆ ಮಾಲತಿ. ಹೀಗೆ ಇವರಿಬ್ಬರ ಮನಸ್ಸಿನ ವೈರುಧ್ಯಗಳು ಕಥೆಯ ಕ್ರಿಯೆಯನ್ನು ಇಮ್ಮಡಿಸುತ್ತವೆ.

ಅತ್ತ ದೇವತೆಯೂ ಅಲ್ಲ. ಇತ್ತ ದಾನವಿಯೂ ಅಲ್ಲ. ಇವೆರಡರ ನಡುವಿನ ಒಂದು ಜೀವಿ ಹೆಣ್ಣು. ಅವಳಿಗೂ ಅವಳದೇ ಆದ ಅನಿಸಿಕೆಗಳ ರಾಗ, ಭಾವ, ದ್ವೇಷಗಳಿವೆ. ಇವುಗಳನ್ನು ಹೇಳುವಲ್ಲಿ ಲೇಖಕಿ ಆರಂಭದ ಕಥೆ ಕಾದಂಬರಿಗಳಲ್ಲಿ ಆಯ್ಕೆ ಮಾಡಿಕೊಂಡ ದಾರಿ.... ಪಿತೃಪ್ರಧಾನ ವ್ಯವಸ್ಥೆಗೆ ಒಪ್ಪಿಕೊಳ್ಳುವುದು. ಇಲ್ಲವೇ ಕವಲುದಾರಿಯಲ್ಲಿ

ಸಾಗುವುದು ಈ ಕವಲುದಾರಿಯು ಮುಖ್ಯ ದಾರಿಯಾಗುತ್ತಿರುವ ಲಕ್ಷಣಗಳನ್ನು ಇವರ ಇತ್ತೀಚಿನ ಸಣ್ಣಕಥೆಗಳ ಸಂಗ್ರಹ ಬಿಡುಗಡೆಯಲ್ಲಿ ಕಾಣಬಹುದು.

ಈ ಕಥೆಯಲ್ಲಿ ಹೆಣ್ಣಿನ ಆಸೆ-ಆಕಾಂಕ್ಷೆಗಳನ್ನು ನಿರೀಕ್ಷೆಗಳು ಕೇವಲ ಅನಿಸಿಕೆಗಳಾಗಿ ಸೀಮಿತವಾಗಿರುತ್ತದೆ. ಆಕೆ ಹೊಂದಾಣಿಕೆ ಮಾಡಿಕೊಳ್ಳಬೇಕು ಅಥವಾ ತನ್ನ ತತ್ವಗಳಿಗಾಗಿ ನೋವು ಅನುಭವಿಸುತ್ತಾ ಬದುಕಿರಬೇಕು. ಹೋರಾಡಿ ಜಯಗಳಿಸಿದರೂ ಸುಖವಾಗಿರುವ ಭಾಗ್ಯ. ತೀರಾ ಕಡಿಮೆ. ಉಳಿದವರನ್ನು ಈ ಸಮಾಜ ಒತ್ತಾಯದಿಂದ ಹೊಂದಾಣಿಕೆ ಮಾಡಿಕೊಳ್ಳಲು ಪ್ರೇರೇಪಿಸುತ್ತದೆ.

ಗಂಡನ ಹೆಣವನ್ನಿಟ್ಟುಕೊಂಡು ಹೆಣ್ಣು ತನ್ನ ಹಿಂದಿನ ಜೀವನವನ್ನು ಮೆಲುಕು ಹಾಕುವ ಹಿಂಬೆಳಕು ತಂತ್ರವನ್ನು ಉಪಯೋಗಿಸಿಕೊಂಡು ಲೇಖಕಿ ಉತ್ತಮ ದಾಂಪತ್ಯದ ಎಳೆಗಳನ್ನು ಬಿಚ್ಚಿಡುತ್ತಾರೆ. ಈ ಕಥೆಯಲ್ಲಿ 'ಸರೋಜ' ಕಥಾನಾಯಕಿಯಾಗಿದ್ದಾಳೆ. ಇವಳ ಬದುಕು ಕನಸಿನ ಗಂಡ ಹಾಗೂ ವಾಸ್ತವ ಬದುಕಿನ ಗಂಡನ ಜೊತೆ ಮಿಲನವಾಗಿರುತ್ತದೆ. ಆದರೆ ಇವರಿಬ್ಬರ ಗಂಡಂದಿರ ಮನಸ್ಸುಗಳು ಅಜ-ಗಜಾಂತರ ವ್ಯತ್ಯಾಸದಿಂದ ಕೂಡಿರುತ್ತದೆ. ಇವೆರಡರ ಅರಿವು ಇವಳ ಪಜ್ಞೆಗೆ ನಿಲುಕಿರುತ್ತದೆ. ಕನಸಿನಲ್ಲಿರುವ ಬರುವ ಗಂಡ ಈಕೆಯನ್ನು ಬಹಳ ಅಕ್ಕರೆಯಿಂದ, ತುಂಬಾಪ್ರೀತಿಯಿಂದ ನೋಡಿಕೊಳ್ಳುತ್ತಾನೆ. ಹಾಲು ಕಾಯಿಸುತ್ತಿದ್ದಾನೆ....ರವೆ ಹುರಿಯುತ್ತಿದ್ದಾನೆ... ಉಪ್ಪಿಟ್ಟಿಗೆ ಒಗ್ಗರಣೆ ಹಾಕುತ್ತಿದ್ದಾನೆ....ಚಹಾಕ್ಕೆ ಎಸರು ಇಡುತ್ತಿದ್ದಾನೆ....ಡಬ್ಬಿಗಳನ್ನು ತಡಕಾಡುತ್ತಿದ್ದಾನೆ. ಬಹುಶಃ ಸಕ್ಕರೆ ಸಿಕ್ಕಿಲ್ಲ. ತೆಗೆದಿರಿಸಿದ್ದು ಮುಗಿದಿರಬೇಕು... ದೊಡ್ಡ ಡಬ್ಬಿಯೊಂದು ಕಪಾಟಿನಲ್ಲಿದೆ. ಸರೂ ಸಕ್ಕರಿ ಎಲ್ಲಿದೆ ? ಅಂತ ಬಹುಶಃ ಕೂಗುತ್ತಾನೆ..ಇಲ್ಲಿ ಹುಡುಕಾಟ ಮುಂದುವರಿಸಿದ್ದಾನೆ.. ಮಲಗಿರುವ ಹೆಂಡತಿಗೆ ಡಿಸ್ಟರ್ಬ್ ಮಾಡಬಾರದೆಂದು ತಾನೇ ಹುಡುಕುತ್ತಿದ್ದಾನೆ...ಇವೆಲ್ಲವನ್ನು ಬೆಳಗಿನ ಜಾವ ಮಂಪರು ನಿದ್ದೆಯಲ್ಲಿ ಸರೂ...ತನ್ನ ಮನಸ್ಸಿನಲ್ಲಿಯೇ ಅಂದುಕೊಳ್ಳುವುದು.

'ಸರೂ, ನೀ ತಿಂಡಿ ರೆಡೀ ಮಾಡುದ್ರಾಗ ನಾನು ರಾಜೂಗೆ ಸ್ನಾನ ಮಾಡಿಸಿ ಡ್ರೆಸ್ ಹಾಕಿ ಸ್ಕೂಲ್‌ಬ್ಯಾಗ್ ತಯಾರು ಮಾಡಿರ್ತೀನಿ. ಅಥವಾ ನೀ ಅವನನ್ನು ತಯಾರು ಮಾಡುತ್ತಿದ್ದರೆ ಮಾಡು. ನಾ ಅವನ ಟಿಫಿನ್ ರೆಡಿ ಮಾಡ್ತೀನಿ.

'ಸರೂ, ನನ್ನ ಜೀವನದಾಗ ನನಗ ಎಲ್ಲಾ ರೀತಿಯ ಸುಖಾ ಸಂಪತ್ತು ಕೀರ್ತಿ-ಅಂತಸ್ತು, ಮಾನ-ಮರ್ಯಾದೆ ಏನೇನು ಬೇಕೋ ಎಲ್ಲಾ ವೈಭವಾನೂ ಸಿಕ್ಕಿತು. ಆದರೆ ಈ ಎಲ್ಲಕ್ಕಿಂತಾ ನನಗ ನೀನು ಬಹಳ ಅಮೂಲ್ಯವಾದ ಆಸ್ತಿ ನೋಡು. ನನ್ನ ಜೀವನಕ್ಕ ಅರ್ಥಾಕೊಟ್ಟಾಕಿ ನೀನು. ನಿನ್ನಂಥಾ ಹೆಂಡತಿ ಸಿಕ್ಕಿದ್ದು ನನ್ನ ಪುಣ್ಯದ ಫಲ. ಯಾಕೆಂದರೆ ನೀ ನನಗೆ ಈ ಬದುಕಿನ ಸುಖದ ಸಾರಾಮೃತವನ್ನು ಕಂಡಿಸೀದಿ.''

ಗಂಡನಿಂದ ಈ ಬಗೆಯ ಕೃತಜ್ಞತೆಯ ಸಂತೃಪ್ತಿಯ ವಿಶ್ವಾಸದ ಮಾತು ಕೇಳುವ ಅವಕಾಶ ಅದೆಷ್ಟು ಹೆಂಡಿರಿಗೆ ಒದಗಿ ಬಂದೀತು ?

ಈ ತನ್ನೆಲ್ಲಾ ಭಾವನೆಗಳಿಗೆ ಸ್ಪಂದಿಸುವ ಗಂಡ ಈ ರೀತಿಯನಾದರೆ ಏ ಸರೋಜಾ....ಇಲ್ಲೇ ಬಾ...ಏನು ಕರೆದ ಕೂಡಲೇ ಬರ್ಲಿಕ್ಕೆ ಆಗೂದಿಲ್ಲ ನಿನಗ ? ಗ್ಯಾಸ್ ಮ್ಯಾಲ ಹಾಲು ಇಟ್ಟಿದ್ರೇನಾತು ? ನಾ ಬಾ ಅಂದ ಕೂಡ್ಲೆ ಗ್ಯಾಸ್ ಬಂದ್ ಮಾಡಿ ಬರಬೇಕು ತಿಳೀತಾ ? ಪಗಾರ ಬಂತಲ್ಲ ನಿನ್ನೆ? ಪಗಾರ ಬಂದ ಕೂಡ್ಲೆ ರೊಕ್ಕಾ ತಂದು ನನ್ನ ಕೈಯಾಗ ಕೊಡು ಅಂತ ಹೇಳಿಲ್ಲ.. ನಿನಗ ?...ಹೌದು ನಾ ಕುಡೀತೀನಿ. ಜೂಜು ಆಡ್ತೀನಿ ಬೇಕಾದ್ದು ಮಾಡ್ತೀನಿ. ನೀ ಯಾರು ಕೇಳಾಕಿ ? ನನ್ನ ವ್ಯವಹಾರಾದಾಗ ನೀ ಕೈ ಹಾಕಬ್ಯಾಡ ರೊಕ್ಕಾ ತಂದು ನನ್ನ ಕೈಯಗಿಟ್ಟು ಬಾಯಿ ಮುಚಕೊಂಡು ಸುಮ್ನಿರು.''

''ಏನು ರಾಜೂನ್ ಫೀಜಿಗೆ ರೊಕ್ಕ ಬೇಕಾ ? ನಿನ್ನ ಪಗಾರ ಬತ್ತದಲ್ಲ ಅದರಾಗಿಂದ ಕೊಡು. ಮಕ್ಕಳ ಸ್ಕೂಲಿನ ಫೀಜು ಪುಸ್ತಕ ಡ್ರೆಸ್ಸು ಅಂತ ನನ್ನ ತಲೀ ತಿನ್ನಬ್ಯಾಡ. ಅದನ್ನೆಲ್ಲಾ ನೀನೇ ಮ್ಯಾನೇಜ್ ಮಾಡ್ಬೇಕು. ಏನು ಈ ತಿಂಗಳು ಗೆಸ್ಟ್ ಬಂದರಂತ ಹಾಲಿನ ಬಿಲ್ಲು ಜಾಸ್ತಿ ಆತ್ಯ ? ಯಾರು ಬಂದ್ರೇನು ನೀ ಯಾಕ ಹಾಲು ಹೆಚ್ಚಿಗಿ ಹಾಕಿಸಿಕೋ ಬೇಕು '' ಇನ್ನ ಮ್ಯಾಲ ಹಾಲಿನ ಖರ್ಚು ಅರ್ಧಾ ಮಾಡಿ ಬಿಡು. ನನಗ ಪೂರ್ತಿ ಒಂದು ಲೋಟ ಕುಡೀಲಿಕ್ಕೆ ಆದರ ಸಾಕು. ಬೇಕಾರ ರಾಜೂಗ ಅರ್ಧಾ ಲೋಟಾ ಕೊಡು. ಮಗಳಿಗೆ ಹಾಲು ಕೊಡೋ ಜರೂರಿಲ್ಲ. ದಪ್ಪ ಆಗಿ ಕೂತರ ಲಗ್ನಾ ಯಾರು ಮಾಡಿಕೊಳ್ತವ್ರು'' ನೀ ಅಂತೂ ಹಾಲು ಕುಡೀಲೇಬಾರದು. ಮೂವತ್ತು ವರ್ಷ ದಾಟಿದ ಮ್ಯಾಲೆ ಹೆಂಗಸ್ರು ಹಾಲು ಕುಡಿದರ ಡಯಾಬಿಟೀಸ್ ಬರತದ ತಿಳಿತೇನು ?

ವಾಸ್ತವ ಬದುಕಿನ ಗಂಡನ ಮನಸ್ಥಿತಿಯ ಚಿತ್ರಣ ಈ ಮೇಲಿನದಾಗಿದೆ. ಈ ಎರಡು ಲೋಕಗಳ ನಡುವೆಯೂ ಜೀವಿಸುವ ಸರೋಜ ಇಬ್ಬರಿಗೂ ಹೊಂದಿಕೊಳ್ಳುತ್ತಾಳೆ. ಆದರೆ ಕನಸಿನ ಲೋಕದ ಗಂಡನಿಂದ ಸಿಗುವ ಸುಖ, ತೃಪ್ತಿ ವಾಸ್ತವಲೋಕದ ಸಮಾಜದಿಂದ ಗುರುತಿಸಲ್ಪಟ್ಟಿರುವ ಗಂಡನಿಂದ ದೊರೆಯಲಿಲ್ಲ. ಆತನಿಂದ ನೋವು, ಹಿಂಸೆ, ಕ್ರೌರ್ಯ ಮಾನಸಿಕ ಒತ್ತಡಗಳಷ್ಟೇ. ಇವೆಲ್ಲದರ ಅರಿವು ತನ್ನ ನಿಜವಾದ ಗಂಡ ಸತ್ತಾಗ ಮೂಡುತ್ತದೆ. ಎಲ್ಲೋ ಒಂದು ಕಡೆ ಆಕೆಮಯ ಮನಸ್ಥಿತಿಯು ಬಿಡುಗಡೆಯ ಹಂತವನ್ನು ತಲುಪುತ್ತದೆ. ಇಡೀ ಸಮಾಜ ತನ್ನ ಗಂಡ ಸತ್ತಿದ್ದಾನೆ ದುಃಖ ಹುಮ್ಮಳಿಸಿ ಬರುತ್ತಿರಬೇಕು ಅಳು ಎಂದು ಹೇಳುತ್ತದೆ. ಆದರೆ ಅವಳಿಗೆ ಬಿಡುಗಡೆ ಹೊಂದಿದ್ದೀನಲ್ಲ ಎಂಬ ತೃಪ್ತಿಗೆ ಸಂತೋಷವಾಗುತ್ತದೆ. ಇದಕ್ಕೆ ಸಾಕ್ಷಿಯೆಂಬಂತೆ ಅಡಿಗೆ ಮನೆಗೆ ಹೋಗಿ ಸಕ್ಕರೆ ಬೆರೆಸಿ ಒಂದು ಲೋಟ ಹಾಲನ್ನು ಗಟಗಟನೆ ಕುಡಿಯುತ್ತಾಳೆ. ಈ ಕ್ರಿಯೆ ತನಗೆ ಮುಕ್ತಿ ದೊರೆತೆಂಬ ಸಾರ್ಥಕತೆ ಮೂಡಿಸುತ್ತದೆ.

''ಅದೇ ಗಂಡ, ಅದೇ ಮಕ್ಕಳು' ಅದೇ ಮನೆ, ಅದೇ ಕೆಲಸ, ದಿನಾ ಅದೇ ಅದೇ ಕೆಲಸ, ತಿರುಗಾಟ, ಗಂಡ-ಮಕ್ಕಳ ಜಗತ್ತು ಮಲಗುವುದು, ಮಲಗಿ ಮತ್ತೆ ಏಳುವುದು ಮತ್ತೇ.....ಇದನ್ನು ಬಿಟ್ಟು ಒಮ್ಮೆ ಹೋಗಬೇಕು. ರೆಕ್ಕೆ ಬಿಚ್ಚಿಕೊಂಡು ಈ ಎಲ್ಲಾ ಗೋಡೆದಾಟಿ ಆಚೆಯ ಕಡೆ ಏನಿದೆ ಎಂದು ನೋಡಬೇಕು. ಎಂಬ ಕನಸಿನಲೋಕವನ್ನು ತನ್ನಲ್ಲೇ ಕಟ್ಟಿಕೊಳ್ಳುತ್ತಾಳೆ. ಹಾಗೆಯೋ ಹೊರ ಸಮಾಜ ಬದುಕನ್ನು ಹಾತೊರೆಯುತ್ತಾಳೆ. ಒಂದು ಸಲವಾದರೂ ಹೀಗೆ ಮಾಡಿದರೆ ಹೇಗೆ ಹಾಗೆ ಮಾಡಿದರೆ ಹೇಗೆ ಅಂತ ವಿಚಾರಿಸದೆ ಮನಸ್ಸಿಗೆ ಬಂದದ್ದು ಮಾಡಬೇಕೇ ಸಿಕ್ಕಿತೂ ತನಗೂ ಒಂದು ಫೇರಿಲ್ಯಾಂಡ್ ಆದೀತು ಕುದುರೆಯೊಂದಿಗಿನ ರಾಜಕುಮಾರನ ಭೆಟ್ಟಿ - ಹೀಗೆ ಆಲೋಚಿಸುವ ಹೆಣ್ಣು ಪ್ರಪಂಚ ಮಾತ್ರವೇ ಆಗುವುದಿಲ್ಲ. ಸಾಮಾನ್ಯವಾಗಿ ಎಲ್ಲರಲ್ಲಿ ಈ ಆಲೋಚನಾ ತರಂಗಗಳು ಇರುತ್ತವೆ. ಆದರೆ ಅವುಗಳನ್ನು ಮುಕ್ತವಾಗಿ ಹೇಳಿಕೊಳ್ಳಲಾರರು.

ಈ ಸಂದರ್ಭದಲ್ಲಿ ಜಮದಗ್ನಿ ರೇಣುಕೆಯ ಪ್ರಸಂಗ ನೆನಪಾಗುತ್ತದೆ. ವಿಹರಿಸುತ್ತಿದ್ದ ಗಂಧರ್ವರನ್ನು ನೀರು ತುಂಬಲು ತಡವಾಯಿತೆಂದು ಮುನಿದ ಜಮದಗ್ನಿ. ತಂದೆ ಮಾತಿನಂತೆ

ತಾಯಿಯ ತಲೆ ಕಡಿದ ಪರಶುರಾಮ. ಈ ಕಥೆಯ ಹಿಂದೆ ಇರುವ ಸತ್ಯದರ್ಶನವೇ ಮೂಡಿದೆಂಬುದು ಗಮನಾರ್ಹವಾಗುತ್ತದೆ.

ಒಟ್ಟಾರೆಯಾಗಿ ಕಥೆಗಳ ಕೇಂದ್ರ ಚಿತ್ರವು ಹೆಣ್ಣು. ಈಕೆ ತನ್ನ ಅಂತರಂಗದ ಹುಡುಕಾಟದಲ್ಲಿ ತನ್ನತನವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾಳೆ. ಅದರ ಪರಿಕಲ್ಪನೆಯನ್ನು 'ಕನಸು , -ವಾಸ್ತವ' ಇವೆರಡು ಬದುಕಿನ ನೆಲೆಯಲ್ಲಿ ಚಿತ್ರಿತಗೊಂಡಿರುವ ರೀತಿಯನ್ನು ನಿರೂಪಿಸಲಾಗಿದೆ.

ಅಧ್ಯಾಯ - ೩

ಸ್ತ್ರೀ-ಪುರುಷ : ವ್ಯಕ್ತಿತ್ವಗಳ ಚಿತ್ರಣ

ಗಂಡು-ಹೆಣ್ಣಿನ ಸಂಬಂಧಗಳು ಎಲ್ಲಾ ತಲೆಮಾರುಗಳ ಲೇಖಕಿಯ ಕತೆಗಳಿಗೆ ವಸ್ತು ಒದಗಿಸಿವೆ. ದಿನ ಕಳೆದಂತೆ ಈ ಸಂಬಂಧಗಳು ಜಟಿಲವಾಗುತ್ತವೆಯೋ ಹೊರತು ಸರಳಗೊಂಡಿಲ್ಲ ಎನ್ನುವುದಕ್ಕೆ ನವ್ಯ ಕಾಲಘಟ್ಟದಲ್ಲಿ ಬರೆಯತೊಡಗಿದ ಲೇಖಕಿ ವೀಣಾ ಶಾಂತೇಶ್ವರ ಪ್ರಮುಖರಾಗಿದ್ದಾರೆ. ಇವರ ಕತೆಗಳಲ್ಲಿ ನಾವು ನೋಡುವ ಅಂತರ್ಮುಖತೆ, ಆತ್ಮಪ್ರಜ್ಞೆ, ದ್ವಂದ್ವಗಳ ಅರಿವು ನವ್ಯ ಮನೋಧರ್ಮದ ಆವಿಷ್ಕಾರಗಳು ಕತೆಯನ್ನು ಕೇವಲ ಮನೋರಂಜನೆಗಾಗಲೀ, ಸಾಮಾಜಿಕ ಜಾಗೃತಿಗಾಗಲಿ ಬಳಸದೆ ಇವರು ಅದನ್ನು ಸತ್ಯದ ಶೋಧದಂಥ ಗಂಭೀರ ಪ್ರಯತ್ನಗಳಲ್ಲಿ ತೊಡಗಿಸಿದರು. ಇವರ ಕಥೆಗಳಲ್ಲಿ ಸ್ತ್ರೀ-ಪುರುಷರ ಆಕರ್ಷಣೆ - ದ್ವಿಸ್ತರ ಮೌಲ್ಯಗಳ ಕಾರಣದಿಂದ ವ್ಯಕ್ತ ವಿಶಿಷ್ಟ ಸಮಸ್ಯೆಗಳಿಂದ ಹುಟ್ಟಿಕೊಳ್ಳುವ ಸಂಘರ್ಷಗಳು ಇವುಗಳನ್ನು ಧೈರ್ಯದಿಂದ ಎದುರಿಸುವ ಸ್ತ್ರೀಯರು ಹೀಗೆ ವೈವಿಧ್ಯಮಯ ವಸ್ತುಗಳಿವೆ. ಗಂಡು-ಹೆಣ್ಣಿನ ಬದುಕನ ಹಲವು ಮುಖಗಳನ್ನು ವೀಣಾ ಅವರ ಕಥೆಗಳು ಸಮಾಜದ ತರತಮ ವ್ಯವಸ್ಥೆಯನ್ನು ನಿಷ್ಠುರವಾಗಿ ನೋಡುತ್ತವೆ. ಮಾನವೀಯ ಗುಣಕ್ಕೆ ಒತ್ತುಕೊಟ್ಟ ಅರ್ಥಹೀನ ಸಂಪ್ರದಾಯದ ಸಂಕೋಲೆಯನ್ನು ಮುರಿಯುವ ಮೂಲಕ ಒಂದು ಬಗೆಯ ವಿಗ್ರಹಭಂಜಕ ಕೆಲಸವನ್ನು ಮಾಡುತ್ತಾರೆ. ಸಮಾಜದ ಸ್ವಾಸ್ಥ ಕಾಪಾಡುವ ಹೊಣೆ ಬರೀ ಹೆಣ್ಣಿನದಾಗಿದ್ದರೆ ಸಾಲದು. ಅದು ಗಂಡಿನದೂ ಜವಾಬ್ದಾರಿ ಎಂಬ ಆಶಯವನ್ನು ಹೊಂದಿದೆ. ತನ್ನ ಬದುಕನ್ನೇ ಮರೆತು ತನಗೆ ವ್ಯಕ್ತಿತ್ವ, ಆಸೆಗಳು ಇಲ್ಲವೇ ಇಲ್ಲವೆನ್ನುವಂತೆ ಬದುಕುವ ಭಾರತೀಯ ಸ್ತ್ರೀ ಮಾದರಿಗಳ ಪ್ರಸ್ತುತತೆಯನ್ನು ವೀಣಾ ಪ್ರಶ್ನಿಸುತ್ತಾರೆ.

ಗಂಡಿಗೊಂದು ಹೆಣ್ಣಿಗೊಂದು ಮೌಲ್ಯಗಳನ್ನು ಮಾಡಿ, ತಪ್ಪಾದಾಗಲೆಲ್ಲ ಅವಳನ್ನೇ ದೂಷಿಸುವ ಆತ್ಮವಂಚಕ ಸಮಾಜದತ್ತ ಈ ಕಥನ ಪ್ರಜ್ಞೆ ಬೆಳಕು ಬೀರುತ್ತದೆ. ಸಂಪ್ರದಾಯ ಬೌದ್ಧಿಕತೆ, ಧರ್ಮ ಎಲ್ಲದರ ಹೆಸರಿನಲ್ಲಿಯೂ ಮನುಷ್ಯನು ಚಲಾಯಿಸುವ ಅಧಿಕಾರದ ಬಗ್ಗೆ ಈ ಪ್ರಕ್ರಿಯೆಯಲ್ಲಿ ಕೆಲಸ ಮಾಡುವ ಢೋಂಗಿತನದ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸುತ್ತದೆ.

ಗಂಡು-ಹೆಣ್ಣಿನ ಸಂಬಂಧ ಇಂದು ನಿನ್ನೆಯದಲ್ಲ. ಅದು ಶಶ-ಶತಮಾನಗಳಿಂದಲೂ ರೂಢಿತವಾದ ಅವಿನಾಭಾವ ಸಂಬಂಧ ಇವುಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವುಗಳು ಹಲವು ಮಜಲುಗಳನ್ನು ಒಳಗೊಂಡಿದೆ. ಸ್ತ್ರೀ-ಪುರುಷ ವ್ಯಕ್ತಿತ್ವಗಳು ಸಮಾಜದ ನೆಲೆಯಲ್ಲಿ ಅಂತರ್ಮುಖತೆಯ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಬಗೆಯನ್ನು ಚಿತ್ರಿಸಲಾಗಿದೆ. ಹಾಗಾಗಿ ಕಥೆಯಲ್ಲಿ ಬರುವ ಪ್ರಧಾನ ಅಂಶವೇ ಸ್ತ್ರೀ ಪುರುಷ ಪಾತ್ರಗಳು. ಇವುಗಳು ವಿಭಿನ್ನ ನೆಲೆಯನ್ನು ಸೂಚಿಸುತ್ತವೆ. ಇದರ ಸುತ್ತಲು ಕಥೆ ಹೆಣೆದಿರುವುದನ್ನು ಕಾಣಬಹುದು. ಹಾಗೆಯೇ ಎಣಿಕೆಯಿಂದ ಬಿಚ್ಚಿಕೊಳ್ಳುವ ಪ್ರಯತ್ನವನ್ನು ಕಾಣಬಹುದು. ಹೀಗೆ ಈ ಪಾತ್ರಗಳ ಸುತ್ತಲು ಗಿರಕಿ ಹೊಡೆಯುವ ವಸ್ತುವು ಮುಖ್ಯವೆನಿಸುತ್ತವೆ. ಇದರಿಂದ ಈ ಎರಡು ವ್ಯಕ್ತಿತ್ವಗಳ ಚಿತ್ರಣ ಕಥೆಗಳ ತಳಪಾಯವಾಗಿ ಗುರುತಿಸಲ್ಪಡುತ್ತವೆ.

ಅ) ಸ್ತ್ರೀ-ಪಾತ್ರಗಳು ಚಿತ್ರಿತವಾಗಿರುವ ಕ್ರಮ

ವೀಣಾ ಅವರ ಕಥೆಗಳೆಲ್ಲವೂ 'ಸ್ತ್ರೀ' ಕೇಂದ್ರಿತ ನೆಲೆಯಾಗಿದ್ದು, ಈಕೆಯೂ ಪ್ರಧಾನವಾಗಿದ್ದಾಳೆ. ಇವರ ಕಥೆಗಳಲ್ಲಿನ ಸ್ತ್ರೀಯರು ನಾಯಕಿಯರು ಆಗಿದ್ದು ಅವರ ವ್ಯಕ್ತಿತ್ವಗಳು ರೂಪುಗೊಂಡ ನೆಲೆಯನ್ನು ಆಯಾಯ ಕಥೆಗಳಲ್ಲಿಯೇ ಗುರುತಿಸಬಹುದು.

1. ಸ್ವತಂತ್ರ ಮನಸ್ಸಿನ ಹೆಣ್ಣು

ಇಲ್ಲಿನ ಸ್ತ್ರೀ ಪಾತ್ರಗಳು ಪುರುಷ ಮೌಲ್ಯಗಳ ಸಿದ್ಧಚೌಕಟ್ಟುಗಳಿಗೆ ತಮ್ಮ ತಾವು ಬಂಧಿಸಿಕೊಳ್ಳಲು ಸಿದ್ಧರಿಲ್ಲ. ಇಲ್ಲಿನ ಹೆಚ್ಚಿನ ನಾಯಕಿಯರು ಓದಿ ವಿದ್ಯಾವಂತರಾಗಿ ಸ್ವತಂತ್ರರಾಗಿ ಜೀವಿಸುತ್ತಿರುವವರು ಇವರು ಪ್ರಪಂಚದ ಢೋಂಗಿತನ ಮೋಸಗಳನ್ನು ಸುಲಭವಾಗಿ ಬಯಲಿಗೆಳೆಯಬಲ್ಲರು. ಇಷ್ಟೇ ಅಲ್ಲದೆ ತಮ್ಮ ಲೈಂಗಿಕತೆಯ ಬಗ್ಗೆ ಯಾವ ಬೂಟಾಟಿಕೆಯನ್ನು ತೋರದೆ ಅಭಿವೃತ್ತಿಯಲ್ಲಿ ಬೆಚ್ಚಿ ಬೀಳಿಸುವಷ್ಟು ಪ್ರಾಮಾಣಿಕರಾಗಿರುವವರು.

ಮುಳ್ಳುಗಳು ಕತೆಯ ಶಾಂತಿ ವಿವಾಹವಾಗದ ಪ್ರಾಧ್ಯಾಪಕಿ. ಈಕೆ ತನ್ನ ಯೌವ್ವನ ತುಂಬಿದ ವಯಸ್ಸಿನಲ್ಲಿ ಮೂಡುವ ಭಾವನೆಗಳನ್ನು, ಬಯಕೆಗಳನ್ನು ಯಾವುದೇ

ಮುಲಾಜಿಲ್ಲದೆ ಯೋಚಿಸಬಲ್ಲಳು. ಹಾಗೆಯೇ ತನ್ನ ಮನಸ್ಸಿನಲ್ಲಿರುವ ಚಡಪಡಿಕೆಯ ಬಗ್ಗೆ ತನ್ನನ್ನು ತಾನು ವಿಮರ್ಶೆ ಮಾಡಿಕೊಳ್ಳುವ ಸ್ವತಂತ್ರ ಮನಸ್ಕಳು. 'ಅತಿಥಿ' ಕಥೆಯ ನಾಯಕಿ ಪ್ರೊ. ಲೀಲಾವತಿ ಈಕೆ ತನ್ನ ವೃತ್ತಿಜೀವನದಲ್ಲಿ ಸಾಧನೆ ಮಾಡಬೇಕೆಂಬ ಹಂಬಲ ಹೊತ್ತು ಬಂದವಳು. ವೈಯಕ್ತಿಕ ಆಸೆಗಳನ್ನು ಬಲಿಕೊಟ್ಟವಳು ಆದರೆ ವಯಸ್ಸು ಮೀರಿದ ಸಂದರ್ಭದಲ್ಲಿ ಅವಳ ಯೌವನದ ಸ್ಥಿತಿಯ ಅರಿವಿನ ಬಗ್ಗೆ ದುಃಖಿಸುತ್ತಾಳೆ. ಆಕೆ ವಿದ್ಯಾವಂತೆಯಾಗಿ, ಪ್ರಾಧ್ಯಾಪಕಿಯಾಗಿ ಈಗ ಹಾಸ್ಟೆಲ್ ವಾರ್ಡನ್ ಆಗಿದ್ದರೂ ಸಹ ಅವಿವಾಹಿತೆ ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳುತ್ತೇನೆ ಎಂಬ ಸ್ವತಂತ್ರ ಮನಸ್ಸನ್ನ ಹೊಂದಿದವಳು. ಆದರೆ ಪರಿಸ್ಥಿತಿ ಎಲ್ಲಾ ಸಮಯಕ್ಕೂ ಸರಿಸಾಟಿಯಾಗದಿರುವುದು.

'ನೆನಪು...ಬರೀ ನೆನಪು'ಕತೆಯಲ್ಲಿ ಲಗ್ನವಾಗಲಿರುವ ನಾಯಕಿ ತನ್ನ ಮನಸ್ಸಿನ ಮುಖಾಂತರ ಮೂಡುವ ನೆನಪನ್ನು ಅರಗಿಸಿಕೊಳ್ಳುತ್ತಾಳೆ. ಇಲ್ಲಿ ಅವಳ ಸಹಜವಾದ ವ್ಯಕ್ತಿತ್ವದಂತೆ ಕಾಣುವ ನಡುವಳಿಕೆ ಚಮತ್ಕಾರವೆನಿಸುತ್ತದೆ. ಕಟ್ಟುಪಾಡುಗಳ ನಡುವೆಯೂ ಸ್ವತಂತ್ರವನ್ನು ಬಯಸುವ ಹಂಬಲದಲ್ಲಿರುತ್ತಾಳೆ. ನೀನೇ ತಂತಿ ಕತೆಯ ನಾಯಕಿ ಸರಯೂ ಅವಳ ಭಗ್ನಪ್ರೇಮಿ ಹಾಗೂ ಈಗಿನ ಗಂಡ ಹರೀಶ. ಇವರಿಬ್ಬರ ನಡುವಿನ ಅವಳ ಏಕಾತನೆತ ರೂಪುಗೊಳ್ಳುತ್ತದೆ. ಗಂಡನು ಆಡುವ ಪ್ರೀತಿಯ ಮಾತುಗಳು ಅವಳಿಗೆ ನಾಟಕೀಯವೆನಿಸುತ್ತವೆ. ತನ್ನ ಹಳೆ ಪ್ರೇಮಿಯ ನೆನಪು ಮಧುರವೆನಿಸುತ್ತವೆ. ಹಾಗಾಗಿ ಕಥೆಯು ಮೂರು ದೃಷ್ಟಿಕೋನವನ್ನು ಸೂಚಿಸುತ್ತವೆ. ಕತೆಯಲ್ಲಿ ಬರುವ ಪಂಜರದ ಗಿಳಿ ಆಕೆಯ ಬದುಕಿನ ಸಾಂಕೇತಿಕ ಬಿಂದುವೂ ಆಗಿದೆ. ಆ ಗಿಳಿಯನ್ನು ಬಿಡುಗಡೆಗೊಳಿಸುವ ಮನಸ್ಥಿತಿ ಸರಯೂ ದು. ಇಲ್ಲಿ ಅವಳ ಆತ್ಮವಿಮರ್ಶೆ ನಡೆಯುತ್ತವೆ. ಗಿಳಿಯನ್ನು ತನ್ನೊಂದಿಗೆ ಹೋಲಿಸಿಕೊಂಡು ಸ್ವತಂತ್ರತೆಯನ್ನು ಬಯಸುವ ಹಂಬಲವನ್ನು ಇಲ್ಲಿ ಕಾಣುತ್ತಾಳೆ.

'ಕವಲು'ಕಥಾ ಸಂಕಲನದಲ್ಲಿ ಒಂದು ರವಿವಾರ ಕಥೆಯಲ್ಲಿ ರೇಖಾ, ಶಾಂತಾ, ಗಿರಿಜಾ ಮೂವರು ನಾಯಕಿಯರು ಇವರು ವಿದ್ಯಾರ್ಥಿನಿಯರು ಹಾಗೂ ಉದ್ಯೋಗಸ್ಥೆಯರು ಈ ಮೂವರು ನಾಯಕಿಯರು ಒಂದೇ ರೂಮಿನಲ್ಲಿ ವಾಸ. ರೇಖಾಳು ವೃತ್ತಿಯಲ್ಲಿ ಟೈಪಿಸ್ಟ್, ಶಾಂತಾ, ಗಿರಿಜಾ ವಿದ್ಯಾರ್ಥಿನಿಯರು ಈ ನಾಯಕಿಯರು ಮನೆಯಿಂದ ಹೊರಬಂದು

ಸ್ವತಂತ್ರರಾಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಬಂದವರು. ಒಬ್ಬರನೊಬ್ಬರು ಪ್ರಶ್ನೆ ಮಾಡುವುದರ ಮೂಲಕ ಜಾಗೃತಿಯನ್ನು ಮೂಡಿಸಬಲ್ಲವರು ತಮ್ಮ ಸ್ವತಂತ್ರತೆಯನ್ನು ಸರಿಯಾದ ಮಾರ್ಗದಲ್ಲಿ ಬಳಸಿಕೊಳ್ಳಬಲ್ಲವರು. ರೇಖಾ ಆಧುನಿಕತೆಯನ್ನು ಒಪ್ಪಿಕೊಂಡವಳಾದರೆ ಶಾಂತಾ-ಸಂಪ್ರದಾಯತೆಯನ್ನು ಅನುಸರಿಸುವವಳು. ಇನ್ನೂ ಇವರಿಬ್ಬರ ಮಡಿವಂತಿಕೆಯನ್ನು ವಿಮರ್ಶಿಸುವವಳು ಗಿರಿಜಾ - ಹೀಗೆ ಇವುಗಳ ಮೂಲಕ ಕಥೆಯು ಸಾಗುತ್ತದೆ. ಈ ಚಿತ್ರಗಳ ಬಿಚ್ಚು ಅಂತರಂಗದ ಪರಿಚಯವಾಗಿ ಕಥೆಯ ರೂಪವೇ ಬದಲಾಗುತ್ತದೆ.

'ನೆರಳು' ಕತೆಯ ವಯಸ್ಸಾದ ಮುದುಕ 'ಅಪ್ಪ'ತನ್ನ ಕೊನೆಗಾಲದಲ್ಲಿ ತನ್ನ ಮನಸ್ಸಿನಲ್ಲಿಯೂ ಉಳಿದಿದ್ದ ಹಳೆಯ ಪ್ರೇಮಿಯೊಬ್ಬನ ಬಗೆಗೆ ಕೊರಗುತ್ತಾ ತನ್ನ ದಿನಚರಿಯಲ್ಲಿ ಬರೆಯುತ್ತಿರುತ್ತಾಳೆ. ಈಕೆಯ ಮಗಳಾದ 'ಮಾಲತಿ' ಅಪ್ಪಟ ಗೃಹಿಣಿಯಾಗಿ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಅವ್ವ'ನ ಸ್ವಾತಂತ್ರ್ಯವು ತನ್ನೆಲ್ಲಾ ಅನಿಸಿಕೆಗಳನ್ನು ತೆರೆದಿಡುವಲ್ಲಿ ಸಫಲವಾದರೆ, ಮಗಳು ಮಾಲತಿಯ ಸ್ವಾತಂತ್ರ್ಯವು ಕುಟುಂಬದ ಕಟ್ಟುಪಾಡುಗಳ ನೆಲೆಯಲ್ಲಿ ಬಂದಿತವಾಗಿದೆ. ತನ್ನ ಸಂಸಾರಕ್ಕೆ ಹೊಂದಿಕೊಳ್ಳದ ಅವ್ವ ಮನಸ್ಥಿತಿ ಮಾಲತಿಯು ಹೊಂದಿಕೊಳ್ಳುವುದು. ತನ್ನ ಸಂಸಾರದ ನಿವಾರಣೆಯನ್ನು ಪ್ರಾಮಾಣಿಕವಾಗಿ ಪಾಲಿಸುವುದು. ರೂಢಿಗತ ಮೌಲ್ಯಗಳನ್ನು ಪ್ರಶ್ನಿಸುವ ಅಧಿಕಾರವನ್ನು ಹೊಂದಿದೆ.

ಹೊರಟುಹೋದವನು' ಕತೆಯ ನಾಯಕಿ ತನ್ನ ಗ ಂಡ ಮತ್ತು ಅವನ ಸ್ನೇಹಿತನಾಗಿದ್ದ ಡಾಕ್ಟರರನ್ನು ಹಿಂಸೆಗೊಳಪಡಿಸಬೇಕೆಂದು ತಾನು ಗರ್ಭ ಧರಿಸಿದಾಗ ಪರಂಗಿಹಣ್ಣು ತಿಂದು ಗರ್ಭಪಾತವಾಗುವಂತೆ ಮಾಡಿಕೊಳ್ಳುತ್ತಾಳೆ. ಮುಳ್ಳುಗಳು ಕತೆಯ ಶಾಂತಿ, ರಾತ್ರಿ ತನ್ನ ಸಹೋದ್ಯೋಗಿಯೊಡನೆ ಹಾಸ್ಟೆಲಿಗೆ ಹಿಂತಿರುಗುವಾಗ 'ಏನಾದರೂ ಮಜಾ ನಡೆಯಲಿ' ಎಂದು ಹಂಬಲಿಸುತ್ತಾಳೆ.

ಬಿಡುಗಡೆ ಕಥೆಯ ನಾಯಕಿ ಸರೋಜ ಹೆಣ್ಣು ತಾನು ಗೃಹಿಣಿಯಾಗಿ ಜೀವನ ನಡೆಸುವ ಹಂಬಲವಾಗಿ ಕಾಣುತ್ತಾಳೆ. ಹಾಗಾಗಿ ಇಲ್ಲಿ ತನ್ನ ವಾಸ್ತವ ಬದುಕಿನ ಸಮಾಜ ಗುರುತಿಸಲ್ಪಟ್ಟ ಗಂಡನಿಂದ ಆಕೆ ಮಾನಸಿಕ ದೈಹಿಕ ಹಿಂಸೆಗೆ ಒಳಗಾಗಿರುತ್ತಾಳೆ. ಆತ

ಸತ್ತನಂತರ ಬಿಡುಗಡೆ ಹೊಂದಿದೆ ಎಂಬ ಆಸೆಗೆ ಹಾಲು ಕುಡಿಯುವುದನ್ನು ನೋಡಬಹುದು. ಹೆಣ್ಣು ಸ್ವತಂತ್ರ್ಯವನ್ನು ಬಯಸುವುದು ಯಾವ ದೃಷ್ಟಿಕೋನದಿಂದ ಎಂಬುದನ್ನು ಈ ಕಥೆಯಲ್ಲಿ ತಿಳಿಯಬಹುದು.

2. ನಿರಂತರ ಕಾಡುವ ಪ್ರಶ್ನೆಗಳಿಂದ ತೊಳಲುವ ಸ್ತ್ರೀ ಪಾತ್ರಗಳು

ಈ ಕಥೆಗಳಲ್ಲಿನ ನಾಯಕಿಯರು ಎಷ್ಟು ದಿಟ್ಟ ವ್ಯಕ್ತಿತ್ವದವರೋ ಅಷ್ಟೇ ಸೂಕ್ಷ್ಮ ಜೀವಿಗಳೂ ಹೌದು. ಮದುವೆಯ ಬಗೆಗೆ, ಪ್ರೀತಿ-ಪ್ರೇಮದ ಬಗೆಗೆ, ಗಂಡಸರ ಬಗೆಗೆ ಅವರು ರುದ್ರ ಪ್ರಾಮಾಣಿಕತೆಯಿಂದ ಯೋಚಿಸುತ್ತಾರೆ. ಅದಕ್ಕೆ ಅವರನ್ನು ಪ್ರಶ್ನೆಗಳು ಕಾಡಿ ಅಸ್ತಿತ್ವವನ್ನೇ ಅಲ್ಲಾಡಿಸುತ್ತಿರುತ್ತವೆ. ಪ್ರೊ. ಲೀಲಾವತಿ ಎಷ್ಟೇ ಜೋರು, ಜಬರದಸ್ತು ಮಾಡಿದರೂ ''ಕೊನೆಗೆ ತಾನು ಜೀವನಕ್ಕೆ ಅತಿಥಿಯಾಗಿಬಿಟ್ಟೇನೆ'' ಎಂಬ ಪ್ರಶ್ನೆಯಿಂದ ತೊಳಲಾಡುತ್ತಾಳೆ.

ಪ್ರಶ್ನೆಯ ಕತೆಯಲ್ಲಿ ತನ್ನ ಪ್ರೇಮಿಗಳಿಗೆ ಶಶಿಯು ನಂಬರನ್ನು ಸೂಚಿಸುವ ಮೂಲಕ ಗುರುತಿಸುತ್ತಾಳೆ. ಈ ಕಥೆಯಲ್ಲಿ ಶಶಿಯು ತನ್ನ ಮನಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾಳೆ.ಹಾಗೆಯೇ ತನ್ನ ಪ್ರೇಮಿಗಳ ಜೊತೆಗಿನ ಸಂಬಂಧಕ್ಕೆ ತನಗೆ ತಾನೇ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾಳೆ. ಅವಳ ನಾಲ್ಕನೆಯ ಪ್ರೇಮಿ ಹೇಳುತ್ತಾನೆ.

> ''ಮದುವೆಯೊಂದು ನಿನ್ನ ಪ್ರಶ್ನೆಗೆ ರಾಮಬಾಣವೆಂದು ತಿಳಿದಿದ್ದರೆ ಅದು ತಪ್ಪು ಶಶಿ ಪ್ರಶ್ನೆ ಜೀವನದ ಸ ಂಗಾತಿ. ಅದರಿಂದ ನಿನಗೆ ಬಿಡುಗಡೆ ದೊರೆಯಲಾರದು''

ಇಂಥ ಪ್ರಶ್ನೆಗಳನ್ನು ಶಶಿಯನ್ನು ಬೆಂಬಿಡದೆ ಕಾಡಿ ಆ ಕತೆಯ ಹೆಸರೇ ಪ್ರಶ್ನೆಯಾಗಿದೆ.

ಒಲವೇ ಜೀವನ' ಕತೆಯು ಗಂಡು-ಹೆಣ್ಣಿನ ಪ್ರೇಮವನ್ನು ಒಳಗೊಂಡಿದೆ. ಅದರಲ್ಲಿ ನಿಜವಾಗಿಯೂ ಪ್ರೀತಿಯುಂಟಾಗಿದೆ ಎಂಬ ಪ್ರಶ್ನೆಗೆ ಉತ್ತರ ಕೊಡುವಲ್ಲಿ ಕಥೆಯು ರೂಪುಗೊಂಡಿದೆ. ಹೆಣ್ಣು ಮಾನಸಿಕವಾದ ಪ್ರೀತಿಗೆ ಹೆಚ್ಚು ಒತ್ತುಕೊಟ್ಟರೆ ಗಂಡು ದೈಹಿಕ ಪ್ರೀತಿಗೆ ಹೆಚ್ಚು ಒತ್ತುಕೊಡುತ್ತಾನೆ ಎಂಬುದು ಮುಖ್ಯವೆನಿಸುತ್ತದೆ. ಆದರೆ ಅದನ್ನು ಇಲ್ಲಿ

ಪರಿಗಣಿಸಿಯೇ ಇಲ್ಲ ಎಂಬಂತೆ ಯೋಚಿಸುತ್ತದೆ. ಅದನ್ನು ಸಮರ್ಥಿಸಿಕೊಳ್ಳುತ್ತಾನೆ. ಇದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳದೇ ಉಳಿಯುವುದೇ ಗೊಂದಲವಾಗುತ್ತದೆ.

ತಾರಾ ಮ್ಯಾಡಮ್ ತತ್ವಗಳು' ಸಮಾಜದ ದೃಷ್ಟಿಯಿಂದ 'ತಾರಾ' ಮ್ಯಾಡಂನ ತತ್ವಗಳು ಲೆಕ್ಚರ್ ಕೊಡುವುದಾಗಿದ್ದರೂ, ಮನೆಯಲ್ಲಿ ತನ್ನ ಗಂಡನೇ ಕೇಳಲು ಸಿದ್ಧನಿಲ್ಲ. ಹಾಗಾಗಿ ಆಕೆಯ ಲೆಕ್ಚರ್ ಕೇವಲ ಹೊರ ಜಗತ್ತಿಗೆ ಮಾತ್ರ ಸೀಮಿತ. ಹೆಣ್ಣಿಗೆ ಸ್ವಾತಂತ್ರ್ಯ ಬೇಕು. ಆಕೆ ಜೀವನದುದ್ದಕ್ಕೂ ಶೋಷಣೆಗೆ ಒಳಗಾಗುತ್ತಿದ್ದಾಳೆ ಎಂದು ಘೋಷಿಸುವುದು ಇವಳ ತತ್ವವಾಗಿದೆ. ಇಂತಹ ತತ್ವಗಳಿಂದ ದೃಢ ನಿರ್ಧಾರಗಳನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳಲು ಸಾಧ್ಯವಾಗದೇ ಇರುವುದು ಇಂತಹ ತತ್ವಗಳಿಂದಲೇ ಆದರೆ ಇಂತಹ ತತ್ವಗಳೇ ಕೊನೆಗೊಂದು ದಿನ ಆರೋಪಿಯ ಸ್ಥಾನದಲ್ಲಿ ತಾರಾ ನಿಲ್ಲುತ್ತಾಳೆ. ತಪ್ಪು ಮಾಡಿದ ವ್ಯಕ್ತಿಯು ಕಟಕಟೆಯಲ್ಲಿ ನಿಲ್ಲಬೇಕೆಂದು ಹೇಳುತ್ತಾಳೆ. ಹೀಗೆ ಕೊನೆಗೂ ತನ್ನ ತತ್ವಗಳು ತನಗೆ ಪ್ರಶ್ನೆಯಾಗುವ ಪರಿಸ್ಥಿತಿಯನ್ನು ತಂದೊಡ್ಡುತ್ತವೆ.

'ರಾಧವ್ವ' ಹನುಮಂತಪುರದ ಹನುಮದೇವರ ಸೇವೆ ಮಾಡುತ್ತಿದ್ದ ಬ್ರಾಹ್ಮಣ ಕುಟುಂಬದವರ ಸೇವೆಯನ್ನು ಮಾಡುತ್ತಿದ್ದಳು. ಆ ಸೇವೆಯಲ್ಲಿ ಯಾವುದು ಪ್ರತಿಫಲಾಪೇಕ್ಷೆ ಇರಲಿಲ್ಲ. ಆಕೆಯ ಕಷ್ಟ-ಕಾರ್ಪಣ್ಯಗಳನ್ನು ಎಂದಿಗೂ ಹೇಳಿದವಳಲ್ಲ. ದೇವರನ್ನು ದೂಷಿಸುವವಳಲ್ಲ. ಯಾರನ್ನು ಬೇಡುವವಳಲ್ಲ, ಇಂತಹ ವ್ಯಕ್ತಿತ್ವದ ರಾಧವ್ವನಿಗೆ ಕ್ಯಾನ್ಸರ್ ಬಂದಿರುವ ವಿಷಯ ತಿಳಿದು ಆಕೆ ಹೆಚ್ಚು ಪ್ರೀತಿಸುತ್ತೇನೆಂದು ಭ್ರಮಿಸಿದ್ದಾಕೆ ಯೋಚಿಸುತ್ತಾಳೆ. ಗಂಡ, ಮನೆ ಮಕ್ಕಳು ನೌಕರಿ ಇವೆಲ್ಲವುಗಳ ಬಂಧನದಲ್ಲಿ ಸಿಲುಕಿದ್ದಾಕೆ - ಆಕೆಯ ಸೇವೆಯನ್ನು ಮಾಡಲು ಇಚ್ಛೆಯಿದ್ದರೂ ಅವಕಾಶ ಇಲ್ಲ. ಇದರಿಂದ ಅವಳ ಸ್ವಾತಂತ್ರ್ಯವೆನ್ನುವುದು ಇದೆಯೇ ಎಂಬ ಪ್ರಶ್ನೆ ಮೂಡುತ್ತದೆ.

ಹೀಗೆ ಹೆಣ್ಣುಗಳು ತಮ್ಮ ಸುಪ್ತ ಮನಸ್ಸನ್ನು ತೆರೆದಿಟ್ಟಾಗ ಸ್ವತಂತ್ರತೆಯ ಅರಿವಾಗುತ್ತದೆ. ಸ್ವಾತಂತ್ರ್ಯ ಎಂಬುದು ಹೆಣ್ಣಿಗೆ ಲಭಿಸಿದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಹೀಗೆ ಕಥೆಗಳಲ್ಲಿರುವ ನಾಯಕಿಯರ ಮನಸ್ಥಿತಿಗಳು ಸದಾ ಗೊಂದಲ-ದ್ವಂದ್ವಗಳ ನೆಲೆಯಲ್ಲಿಯೇ ಕಾಡುತ್ತಿರುತ್ತದೆ. ಇದರಿಂದ ಅವರ ವ್ಯಕ್ತಿತ್ವಗಳು ಗುರುತಿಸಿಕೊಳ್ಳುತ್ತವೆ.

3. ಗಂಡು -ಹೆಣ್ಣಿನ ಸಂಬಂಧ

ಸಾಮಾನ್ಯವಾಗಿ ಪುರುಷ ದೃಷ್ಟಿಕೋನದ ಸ್ಟೀರಿಯೋಟೈಪ್ ಕವನಗಳಲ್ಲಿ ಗಂಡನ್ನು ಕ್ರಿಯಾಶಾಲಿ ಎಂದು ಹೆಣ್ಣನ್ನು ಕ್ರಿಯಾರಹಿತ ಎಂದೂ ತೋರಿಸುತ್ತಾರೆ. ಆದರೆ ವೀಣಾ ಅವರ ಕಥನದಲ್ಲಿ ಗಂಡು-ಹೆಣ್ಣಿನ ಸಂಬಂಧದಲ್ಲಿ ಹೆಣ್ಣು ಕೂಡ ನಿರ್ಧಾರಕ ಪಾತ್ರವನ್ನು ವಹಿಸಲು ಇಚ್ಛಿಸುತ್ತಾಳೆ. ಮತ್ತು ವಹಿಸುತ್ತಾಳೆ ಕೂಡಾ. ಗಂಡು-ಹೆಣ್ಣಿನ ನಡುವೆ ಇರುವ ಸಂಬಂಧದಲ್ಲಿ ಪ್ರೀತಿ, ಪ್ರೇಮ ಆದರೆ ಮೃದುತ್ವ ಇರುವಂತೆ ಸ್ವಾರ್ಥ ಬೇಜವಾಬ್ದಾರಿತನ ಆತ್ಮ ವಂಚಕತೆ ಕೂಡಾ ಇರುವುದನ್ನು ಗಮನಿಸಬಹುದು.

ಮುಳ್ಳುಗಳು' ಕಥೆಯಲ್ಲಿ ಶಾಂತಿಯ ದೃಷ್ಟಿಕೋನವು ಗಂಡಿನ ಸ್ವಭಾವವನ್ನು ಕುರಿತು ಹೇಳುತ್ತಾಳೆ. ಅವಳ ಮನಸ್ಸಿನ ಭಾವನೆಗಳಿಗೆ ಗಂಡಿನ ನೋಟವು ಮುಳ್ಳುಗಳಾಗುವುದು ಸಹೋದ್ಯೋಗಿ ಪ್ರೊ. ದೇಸಾಯಿ ಆಡುವ ಮಾತುಗಳು ಆಕೆಯನ್ನು ಪ್ರಚೋದಿಸುತ್ತವೆ. ಅವಳ ಒಂದು ದಿನದ ಮೂಡನ್ನು ತರಿಸುತ್ತವೆ. ಆಕೆಯು ಗಂಡನ ಮಾತನ್ನು ನೋಟವನ್ನು ಮುಳ್ಳುಗಳಾಗಿ ನೋಡುವ ದೃಷ್ಠಿ ಹುಡುಗರ ಕಣ್ಣಲ್ಲೂ ಅದೇ ಮಾದನ ಕಣ್ಣಲ್ಲೂ ಅದೇ. ಹಾಸ್ಟೆಲ್ಲಿನ ಮುಂದೆ ಸದಾ ಬಾಲ ಅಲ್ಲಾಡಿಸುತ್ತ ಬಿದ್ದಿರುವ ಆ ಗಂಡುನಾಯಿಯ ಕಣ್ಣಲ್ಲೂ ಅದೇ. ನಾಯಿಯಾದರೇನು ಗಂಡಲ್ಲವೇ? ಹೀಗೆ ಆತನನ್ನೇ ಧಿಕ್ಕರಿಸುತ್ತಿದ್ದೇನೆ ಎಂಬ ಭ್ರಮೆಯಲ್ಲಿರುತ್ತಾಳೆ. ಶಾಂತಿ ನನ್ನ ಹೃದಯದಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ ಎಂದು ಅಂದು ಹಿಂದೆಂದೂ ಅಂದಿದ್ದ ಅವನು ಮೂರ್ತಿ ಸಹಿತವಾಗಿ ಹೃದಯವನ್ನು ಕಿತ್ತು ಬಿಸಾಡಿಬಿಟ್ಟ. ನಂತರ ಆ ಅಯೋಗ್ಯನ ಕಣ್ಣಲ್ಲೂ ಮುಳ್ಳಿದ್ದವೇ ? ಹೀಗೆ ಪ್ರತಿಯೊಂದು ಹಂತದಲ್ಲೂ ಹೆಣ್ಣಿಗೆ ಆಗುವ ಎಲ್ಲಾ ರೀತಿಯ ತುಮುಲಗಳು ಶಾಂತಿಗೂ ಆಗುತ್ತವೆ. ಆಕೆ ಗಂಡಿನ ಸಂಬಂಧವನ್ನು ಧಿಕ್ಕರಿಸುವ ಹಾಗೆ ಘೋಷಿಸಿ, ಮೌನವಾಗಿ ಒಪ್ಪಿಕೊಳ್ಳುವುದನ್ನು ಕಾಣಬಹುದು.

'ಪ್ರಶ್ನೆ' ಕಥೆಯ ನಾಯಕಿ ಶಶಿ. ತನ್ನ ಮನಸ್ಸಿನ ಸೂಕ್ಷ್ಮ ಲಯಗಳನ್ನು ಬಚ್ಚಿಟ್ಟಿದ್ದಾಳೆ. ಈಕೆ ದೇಹಕ್ಕೂ ಜೀವಕ್ಕೂ ನಡುವಿನ ಸಂಬಂಧದ ಬಗ್ಗೆ ಅರಿಯುವುದು ಅವಳ ಅನುಭವದ ಮೂಲರೂಪವಾಗಿ ಆತ್ಮ ಕಂಡು ಬರುತ್ತದೆ. ಹೀಗಾಗಿ ಕತೆಯಲ್ಲಿಯೂ ಇನ್ನಷ್ಟು ಕತೆಯನ್ನು

ಹೆಣೆಯುವ ಪ್ರಯತ್ನ ನಡೆದಿದೆ. ನಾಯಕಿ ಶಶಿ ನಂಬರುಗಳನ್ನು ಕೊಡುವುದರ ಮೂಲಕ ಗಂಡು ನಿರ್ಮಾಣವಾಗುತ್ತಾನೆ. ಇದು ಅವಳ ಮನಸ್ಥಿತಿಯ ವಿಭಾಗಗಳು ಒಂದೊಂದು ಗಂಡಿನ ರೂಪವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಯತ್ನ ನಡೆದಿದೆ. ಹೀಗೆ ಪ್ರೀತಿ, ಪ್ರಾಮಾಣಿಕತೆ, ಅಗಲುವಿಕೆ, ನಿರ್ಧಾರ ಕೈಗೊಳ್ಳುವುದು - ಇವಳ ದಿಟ್ಟತನದ ಪ್ರತೀಕವಾಗಿದೆ.

'ನೀನೇ ತಂತಿ' ಎಂಬ ಕತೆಯಲ್ಲಿ ಗಂಡು ಎರಡು ನೆಲೆಯಲ್ಲಿ ಕಥಾ ನಾಯಕಿ, ಸರಯೂಗೆ ಕಾಣುತ್ತಾನೆ. ಒಬ್ಬ ಗಂಡ, ಮತ್ತೊಬ್ಬ ಪ್ರೇಮಿ - ಇವರ ಸಂಬಂಧ ಅವಳ ಮಾನಸಿಕ, ದೈಹಿಕ ದೃಷ್ಟಿಕೋನಕ್ಕೆ ಒಳಪಟ್ಟಿರುತ್ತದೆ. ಭಗ್ನ ಪ್ರೇಮಿಯನ್ನು ಮನಸ್ಸಲ್ಲೇ ನೆನೆದು, ತನ್ನ ಗಂಡ ಹರೀಶನ ಪ್ರೀತಿಯನ್ನು ಪರೀಕ್ಷಿಸುವುದು. ತನ್ನ ಗಂಡ ಪ್ರೀತಿಯ ಸಂಕೋಲೆಯಲ್ಲಿ ನನ್ನನ್ನು ಬಂಧಿಸಿಟ್ಟಿದ್ದಾನೆ ಅಂದುಕೊಳ್ಳುವುದು ಗಿಳಿಯನ್ನು ಪಂಜರದಲ್ಲಿ ನೋಡಿ ನಾನು ಸಮಾಜದ ಕಟ್ಟುಪಾಡುಗಳಿಗೆ ಬಂಧಿ ಅಂದುಕೊಳ್ಳುವುದು ನನಗೂ ರೆಕ್ಕೆ ಬಿಚ್ಚಿ ಹಾರುವ ಆಸೆ ಇದೆ. ಆದರೆ ನನಗೂ ರೆಕ್ಕೆಗಳಿವೆಯೋ ಎಂದು ಪ್ರಶ್ನಿಸಿಕೊಳ್ಳುವುದು ಪಿತೃಪ್ರಧಾನ ಕುಟುಂಬವು ಇದಕ್ಕೆ ಒಪ್ಪುತ್ತವೆಯೇ ? ಎಂದು ಅನುಮಾನಿಸುವುದು-ಇವೆಲ್ಲವೂ ಅವಳು ಕೈಗೊಂಡ ನಿಲುವುಗಳು. ಈ ಕತೆಯು 'ರೊಮ್ಯಾಂಟಿಕ್ ಮಾದರಿಯ ಕತೆ ಎನಿಸಿದರೂ ಸನ್ನಿವೇಶಗಳೂ ಪಾರದರ್ಶಕದ ಗುರುತಾಗಿ ಚಿತ್ರಿಸುವುದು ಕಲಾತ್ಮಕತೆಯನ್ನು ಸೂಚಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರೂ ನಮ್ಮ ಹೆಂಗಸರು ಇಂದಿಗೂ ಗುಲಾಮಗಿರಿಯಲ್ಲೇ ಬದುಕಬೇಕಾಗಿದೆ. ಇದಕ್ಕೆ ಕಾರಣ ಪುರುಷ ಪ್ರಧಾನ ಸಮಾಜ. ಪಿತೃಪ್ರಧಾನ ವ್ಯವಸ್ಥೆ ಇದು ಅಂತರರಾಷ್ಟ್ರೀಯ ಮಹಿಳಾ ವರ್ಷ'ಮಹಿಳೆಯರು ತಮ್ಮಲ್ಲಿ ಜಾಗೃತಿ ಮೂಡಿಸಿಕೊಂಡು ಎಚ್ಚೆತ್ತುಕೊಳ್ಳಬೇಕು. ಗುಲಾಮಗಿರಿತನವನ್ನು ತ್ಯಜಿಸಬೇಕು. ನಮಗಾಗುತ್ತಿರುವ ಅನ್ಯಾಯವನ್ನು ಎಲ್ಲಾ ವಿಧದಲ್ಲೂ ಪ್ರತಿಭಟಿಸಬೇಕು ಎಂದು ವೇದಿಕೆಯ ಮೇಲೆ ಗಟ್ಟಿಯಾಗಿ ದಿಟ್ಟದಿಂದ ಭಾಷಣ ಬಿಗಿಯುವ ವಿಮಲಾಳ ಸ್ವಾತಂತ್ರ್ಯ -ಕೇವಲ ಭಾಷಣಕ್ಕೆ ಮೀಸಲು - ಈಕೆ ವಿವಾಹಿತೆ, ವಿದ್ಯಾವಂತೆ, ಸುಸಂಸ್ಕೃತೆ, ನಾಗರೀಕತೆಯುಳ್ಳವಳು, ಇಷ್ಟೆಲ್ಲಾ ಬಿರುದುಗಳನ್ನು ಹೊಂದಿರುವ ವಿಮಲಾಳ ಸ್ವಾತಂತ್ರ್ಯ ಅವಳ ಮೇಲಿರಿಸಿರುವ ಜವಾಬ್ದಾರಿ ಆತನ ಅನಿವಾರ್ಯತೆಯಾಗಿದೆ. ಗಂಡ-ಮಕ್ಕಳ ಲಾಲನೆ -ಪಾಲನೆಯಲ್ಲಿ ಯಾವ ದೋಷವು

ಕಾಣದ ಹಾಗೇ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಾಳೆ. ಆದರೂ ಕೊಂಕು ಮಾತುಗಳನ್ನಾಡುವ ಗಂಡನ ವರ್ತನೆಗೆ ಎದುರು ಮಾತನಾಡುವ ಧೈರ್ಯವಿಲ್ಲ. ಇಂತಹ ಸ್ವಾತಂತ್ರ್ಯ ಅವಳ ಪಾಲಿಗೆ.

ಪುರುಷ ಪ್ರೀತಿಗೆ ಸಿಲುಕಿದ ಕಲಾ ಚಂದೂಲಾಲನನ್ನು ಪ್ರೇಮಿಸುತ್ತಿದ್ದಳು. ಆದರೆ ಅವಳ ಭವಿಷ್ಯವಾಣಿ ಅತಿಶಯೋಕ್ತಿ ಎಂಬಂತೆ ಕನರೊಡೆಯಿತು. ಇದರಿಂದ ಕರಾಳ ಶಂಕರಮಾಮ ಅವರನ್ನು ದೂರಮಾಡಲು ಯತ್ನಿಸುತ್ತಾನೆ. ಸಮಾಜಕ್ಕೆ ವ್ಯವಸ್ಥೆಗೆ ತಲೆಬಾಗುತ್ತಾಳೆ. ಆತನ ನಡವಳಿಕೆ ಸರಿಯಿಲ್ಲವೆಂದು ದೂಷಿಸುತ್ತಾಳೆ. ಅವಳ ಪ್ರೀತಿ ಅವನೆಲ್ಲಾ ಮರೆಸುತ್ತವೆ. ಆದರೂ ವಾಸ್ತವ ಸಮಾಜಕ್ಕೆ ತಲೆಬಾಗಬೇಕು. ಕೊನೆಗೂ ಗಂಡು ತನ್ನನ್ನು ದೂಷಿಸಿತು. ದ್ವೇಷಿಸಿತು ಎಂಬ ಭಾವನೆಗೆ ಒಳಗಾಗುತ್ತಾನೆ. ಕಲಾಳ ಜೀವನ ಅಂತ್ಯ ಕಾಣುತ್ತದೆ. ಸಮಾಜವು ಹೆಣ್ಣನ್ನು ಆಟಿಕೆಯ ರೂಪದಲ್ಲಿ ಸ್ವೀಕರಿಸುತ್ತಿದೆ. ಅವಳಿಗೆ ಅಸ್ತಿತ್ವವೆಂಬುದೇ ಇಲ್ಲ. ಇಂತಹ ಜೀವನದಿಂದ ಆಕೆ ಅಂತ್ಯವಾಡಬೇಕಿದೆ ಎಂಬುದನ್ನು ಮುಕ್ತಿ ಕತೆಯಲ್ಲಿ ತಿಳಿಯಬಹುದಾಗಿದೆ.

ಹೀಗೊಂದು ಕತೆ ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ಮಿಥ್ಯಾಚರಣೆಯನ್ನು ಬಯಲಿಗೆಳೆಯುವ ಒಂದು ಕಥೆ. ಈ ಕತೆಯ ನಾಯಕಿ ಸಾಮಾಜಿಕವಾದ, ಕೌಟುಂಬಿಕವಾದ ಯಾವುದೇ ಕಟ್ಟುಪಾಡುಗಳಿಗೆ ಒಳಗಾಗದೇ ತನ್ನ ಗೆಳೆಯನ ಜೊತೆ ಹತ್ತು ವರುಷಗಳ ಸಹವಾಸ ಮಾಡಿ ನಂತರ ಗರ್ಭಿಣಿಯಾಗುತ್ತಾಳೆ. ತಮ್ಮ ಈ ಸಂಬಂಧಕ್ಕೆ ಸಮಾಜ ಒಪ್ಪಿತವಾದ ವಿವಾಹದ ಮುದ್ರೆ ಇಲ್ಲ ಎನ್ನುವ ಕಾರಣಕ್ಕಾಗಿಯೇ ಆ ಗರ್ಭವನ್ನು ತೆಗೆಸಲು ಇಚ್ಛಿಸದೆ ಹುಟ್ಟುವ ಮಗುವಿನ ಬಗ್ಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುತ್ತಾಳೆ. ಆದರೆ ಆತ ಇದುವರೆಗೂ ಸಮಾಜದ ಯಾವುದೇ ರೀತಿ - ರಿವಾಜುಗಳಿಗೆ ತಲೆಗೆಡಿಸಿಕೊಳ್ಳದೆ ಆಕೆಯೊಂದಿಗೆ ವಿವಾಹ ಬಂಧನವಿಲ್ಲದೆಯೂ ಹತ್ತುವರ್ಷಗಳ ಕಾಲ ಬದುಕಿದ್ದವ. ಈಗ ಮಗುವಿನ ವಿಷಯದಲ್ಲಿ ಗೊಂದಲಕ್ಕೀಡಾಗುತ್ತಾನೆ. ವಾಸ್ತವ ಮತ್ತು ಸಮಾಜದ ಪ್ರತಿಕ್ರಿಯೆಗಳ ಮಧ್ಯೆ ತಾಕಲಾಡುವ ಅವನ ನಿಲುವು ಮಗುವಿಗೆ ಸಮಾಜದಲ್ಲಿ ಒಂದು ಸ್ಥಾನ ಕೊಡಬೇಕಾಗುತ್ತದೆಂದು ಇದನ್ನು ಸಮಾಜ ಒಪ್ಪುವುದಿಲ್ಲವೆಂದು. ಆ ಮಗುವನ್ನು

ನಿರಾಕರಿಸುತ್ತಾನಲ್ಲದೆ ಭ್ರೂಣವಸ್ಥೆಯ ಆ ಮಗುವನ್ನು ಕಳೆದುಕೊಳ್ಳಲು ಇಚ್ಛಿಸಿದ ಆಕೆಗೆ ಇದು ನಾನು ನಿನ್ನನ್ನು ಮದುವೆಯಾಗಬೇಕೆಂದು ಒತ್ತಾಯಿಸುವ ರೀತಿಯೋ ಎಂದು ಹೇಳುತ್ತಾನೆ. ಆದರೆ ಹತ್ತು ವರ್ಷ ಜೊತೆಯಲ್ಲಿ ಕಳೆದ ಮನುಷ್ಯ ಎಲ್ಲಾ ಲಕ್ಷ್ಮಣ ರೇಖೆಗಳೆಡೆ ಎಲ್ಲಾ ರೀತಿ - ರಿವಾಜುಗಳಾಚೆ ಎಲ್ಲಾ ಬಂಧನ ನಿಯಮಗಳಾಚೆ ಒಂದು ತನ್ನೊಂದಿಗೆ ಬದುಕು ಸವೆಸಿದ್ದ ಮನುಷ್ಯ ಇವನು ಇಷ್ಟು ಸಾಮಾನ್ಯ ಸ್ತರದಲ್ಲಿ ಯೋಚಿಸಬಹುದೆಂದು ತಿಳಿದಿರದ ಆಕೆಗೆ ಇನ್ನು ಮುಂದೆ ಆತನ ಅಗತ್ಯವಿಲ್ಲ ಎನಿಸತೊಡಗುತ್ತದೆ. ಆತ ಆಕೆಯನ್ನು ಬಿಟ್ಟು ದೂರದ ತನ್ನ ವಾರದ ದಿಲ್ಲಿಗೆ ತಂದೆ-ತಾಯಿಗಳ ಬಳಿ ಹೊರಟು ಹೋಗುತ್ತಾನೆ. ಆತನಿಲ್ಲದ ಒಂಟಿತನ ಆತನ ಅನುಪಸ್ಥಿತಿ ಮೊದಮೊದಲು ಕಾಡಿದರು. ನಂತರ ಮಗುವನ್ನು ಪಡೆಯುವ ಹೊಂದುವ ಅನುಭವಿಸುವ ಪರಿಕಲ್ಪನೆಯೂ ಸುಂದರವಾಗಿ ಕಾಣುವ ಆಕೆಗೆ ಇನ್ನೂ ಈ ಜೀವನದಲ್ಲಿ ಏನೂ ಬೇಡವೆನಿಸುತ್ತದೆ. ಏನೂ ಬೇಡ ? ಅಂದರೆ ಆತನು ಬೇಡ ? ಚಳಿಯಿದ್ದಾಗ ಬೆಚ್ಚಗಾಗಿಸಿದವನು ಧಗೆಯಿದ್ದಾಗ ತಂಪೆರೆದವನು. ಜನನಿಬಿಡ ಬೀದಿಗಳಲ್ಲಿ ಕೈ ಹಿಡಿದು ದಾಟಿಸಿದವನು ಬಾಯಾರಿದಾಗ ಜೀವರಸ ಸುರಿಸಿದವನು. ಹತ್ತು ವರ್ಷಗಳ ಕಾಲ ಎಡೆಬಿಡದೆ ಸಂಗತಿಯಾದವನು ಈಗ ಬೇಡವೆನಿಸುತ್ತದೆ. ಆದುದರಿಂದ ಆತನ ಬಗೆಗೆ ದ್ವೇಷವಾಗಲಿ, ಕೋಪವಾಗಲಿ ಆಕೆಗೆ ಉಂಟಾಗುವುದಿಲ್ಲ.

ನಂತರವೂ ಆತ ತಮ್ಮ ಸಂಬಂಧವನ್ನು ಮದುವೆಯ ಬಂಧನಕ್ಕೆಳೆಯುವ ಮೂಲಕ ತನ್ನ ಭಯವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿ ತನ್ನ ತಾಯಿಯನ್ನು ಒಪ್ಪಿಸಿ ಈ ವಿಚಾರವನ್ನು ಆಕೆಗೆ ಫೋನ್ ಮೂಲಕ ತಿಳಿಸಿದಾಗ ಸ್ಸಾರಿ ನನಗೀಗ ಯಾರ ಅವಶ್ಯಕತೆಯೂ ಇಲ್ಲ. ಯಾವುದೇ ರೀತಿಯ ಅವಶ್ಯಕತೆಯೂ ಇಲ್ಲ. ನನಗೆ ಬೇಕಾದುದೆಲ್ಲಾ ನನಗೆ ಸಿಕ್ಕಿದೆ. ನಿನ್ನ ದಾರಿ ನೀನು ನೋಡಿಕೋ ಎಂದು ನಿರಾಕರಿಸಿಬಿಡುತ್ತಾಳೆ.

ಈ ಕಥೆಯಲ್ಲಿ ಕಂಡುಬರುವ ಇವರು ಸಹವಾಸದ ಸಂಬಂಧ ಈಗಾಗಲೇ ಇರುವ ಕೌಟುಂಬಿಕ ಮಾದರಿಗಳಾದ ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬಗಳ ಆಚೆಗೆ ಆಧುನಿಕ ಸಮಾಜದಲ್ಲಿ ಇತ್ತೀಚೆಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಕೌಟುಂಬಿಕ ಮಾದರಿಯಾಗಿದೆ. ಈ ಸಂಬಂಧಗಳು ವೈಯಕ್ತಿಕ ನೆಲೆಯಲ್ಲಿ ಪ್ರಾರಂಭಗೊಂಡು ಸಾಮಾಜಿಕ ನೆಲೆಯಾಗಿ ಪರಿವರ್ತನೆಯಾಗುತ್ತದೆ.

ಅ) ಪುರುಷ ಪಾತ್ರಗಳು ಚಿತ್ರಿತವಾಗಿರುವ ಕ್ರಮ

ಕಥೆಗಳು ಸ್ತ್ರೀ ಕೇಂದ್ರಿತ ನೆಲೆಯಾಗಿದ್ದರೂ ಸಹ ಪೂರಕವಾಗಿ ಪುರುಷನ ಪಾತ್ರ ಹಿರಿದು. 'ಸ್ತ್ರೀ' ಎಂದು ಗುರುತಿಸಿಕೊಳ್ಳುವುದು 'ಪುರುಷನ' ಪಾತ್ರವಿದ್ದಾಗ ಮಾತ್ರ ಆ ಕಾರ್ಯ ಈ ಕಥೆಗಳಾಗಿವೆ. ಪುರುಷ ಪ್ರಧಾನ ಸಮಾಜದಲ್ಲಿ ಪಿತೃಪ್ರಧಾನ ವ್ಯವಸ್ಥೆಯ ನಿರ್ಮಾಣವಾಗಿದೆ. ಇದರೆಲ್ಲದರ ಕೇಂದ್ರ ಬಿಂದುವಾಗಿ ಹೆಣ್ಣು ಇವರ ಕಥೆಗಳಲ್ಲಿ ಪ್ರಧಾನವಾಗುತ್ತಾಳೆ. ಇದಕ್ಕೆ ಸಮನಾದಂತೆ ಪುರುಷನು ವಿಭಿನ್ನ, ನೆಲೆಯಲ್ಲಿ ತನ್ನ ವ್ಯಕ್ತಿತ್ವದ ಚೌಕಟ್ಟನ್ನು ನಿರ್ಮಿಸಿದ್ದಾರೆ. ಇವೆಲ್ಲವನ್ನು ಕೆಳಗಿನ ಅಂಶಗಳ ಆಧಾರದ ಮೇಲೆ ತಿಳಿಯಬಹುದಾಗಿದೆ.

1. ಪುರುಷ ಬಗೆಗಿನ ವಿವಿಧ ದೃಷ್ಟಿಕೋನ

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಪುರುಷನ ಕಣ್ಣಿಂದ ಹೇಗೆ ಗ್ರಹಿಸಲಾಗುತ್ತದೆ ಎಂಬುದನ್ನು ಹಿಂದೆಯೇ ವಿವರಿಸಲಾಗಿದೆ. ಇಡೀ ಸಮಾಜದಲ್ಲಿ ಮತ್ತು ತನ್ನ ಒಳಗೂ ಕೂಡ ಮೌಲ್ಯಗಳ ಮಟ್ಟದಲ್ಲಿ ಹುದುಗಿರುವ ಪುರುಷಪರ ನಿಲುವುಗಳಿಂದ ಹೆಣ್ಣು ಪರಕೀಯತೆಯನ್ನು ಅನುಭವಿಸುತ್ತಿದ್ದಾಳೆ. ತನ್ನಲ್ಲೇ ಹುದುಗಿರುವ ಸ್ತ್ರೀ ವಿರೋಧಿ ಧೋರಣೆಗಳಿಂದ ತನಗೆ ತಾನೇ ಅನ್ಯಳಾಗುತ್ತಾಳೆ. ಅವಳ ಯೌವ್ವನ ಕಾಲದಲ್ಲಿ ಪುರುಷ ದೃಷ್ಟಿಯ ಶಾಖ, ಪ್ರಖರತೆಗಳನ್ನು ಅವಳು ಸಹಿಸಬೇಕಾಗುತ್ತದೆ. ಇದಕ್ಕೆ ರೂಪಕವಾಗಿ 'ಮುಳ್ಳುಗಳು' ಕಥೆಯು ಸಮರ್ಥವಾಗಿದೆ ಎಂದು ಗುರುತಿಸಬಹುದು. ಅವರ ಕಥನ ಎಷ್ಟು ತೀವ್ರವಾಗಿದೆಯೆಂದರೆ ಈ ಕಲ್ಲು ಮುಳ್ಳಿನ ಸರ್ವ ವ್ಯಾಪಿತ್ವ ನಮಗೂ ತಟ್ಟುತ್ತದೆ. ಮುಳ್ಳುಗಳು ಕಥೆಯಲ್ಲಿ ಓದಿ, ಉದ್ಯೋಗಸ್ಥಳಾಗಿ, ಹಾಸ್ಟೆಲ್ ವಾಸ ಮಾಡುತ್ತಿರುವ ಅವಿವಾಹಿತೆ ಶಾಂತಿಗೆ ಎಲ್ಲಾ ಕಡೆ ಮುಳ್ಳುಗಳ ಅನುಭವವಾಗುತ್ತದೆ. ತನ್ನ ವಿದ್ಯಾರ್ಥಿಗಳು, ದಾರಿಹೋಕರು, ಹಾಸ್ಟೆಲಿನ ಕಸ ಗುಡಿಸುವ ಮಾದ, ಕೊನೆಗೆ ಹಾಸ್ಟೆಲಿನ ಮುಂದೆ ಸದಾ ಬಾಲ ಅಲ್ಲಾಡಿಸುತ್ತಾ ಬಿದ್ದಿರುವ ಗಂಡು ನಾಯಿ ಎಲ್ಲರ ಕಣ್ಣುಗಳಲ್ಲೂ ಚುಚ್ಚು ಮುಳ್ಳುಗಳಿರುವಂತೆ ಅನ್ನಿಸಿ ಶಾಂತಿ ಹಿಂಸೆ ಪಡುತ್ತಾಳೆ. ಈ ಮುಳ್ಳುಗಳ ಅನುಭವ ನಿಜವೋ ಭ್ರಮೆಯೋ ಎಂದು ಯೋಚಿಸಿ, ಯೋಚಿಸಿ ಶಾಂತಿ ಹಣ್ಣಾಗುತ್ತಾಳೆ. ಕೊನೆಗೂ ಅವಳು

ಯಾವ ತೀರ್ಮಾನಕ್ಕೆ ಬಂದು ತಲುಪುತ್ತಾಳೆಂದರೆ

> ''ಈ ಮುಳ್ಳಿನಿಂದ ದೃಷ್ಟಿಯೊಂದೇ ಸತ್ಯ. ಉಳಿದುದೆಲ್ಲ ಭ್ರಮೆ. ರಸ್ತೆಯಲ್ಲಿ, ಕಾಲೇಜಿನಲ್ಲಿ, ಬಸ್ಸಿನಲ್ಲಿ, ಮಾರ್ಕೆಟ್ಟಿನಲ್ಲಿ ಈ ಇಡೀ ಜಗತ್ತಿನ ತುಂಬಾ ಸತ್ಯವಾದುದೆಂದರೆ ಅದೊಂದೇ ''.

ಕಣ್ಣುಗಳಲ್ಲಿ ಮುಳ್ಳುಗಳಿಲ್ಲದಿರುವ ಗಂಡಸಿಗಾಗಿ ಶಾಂತಿ ನಿರಂತರವಾಗಿ ಹುಡುಕುತ್ತಿದ್ದಾಳೆ. ತನಗೆ ಈಚೆಗೆ ಹತ್ತಿರವಾಗುತ್ತಿರುವ ದೇಸಾಯಿಯ ಕಣ್ಣಲ್ಲಿ ಮುಳ್ಳಿರುವವೋ ಇಲ್ಲವೋ ಎಂಬ ಅವಳ ಅನುಮಾನದಲ್ಲೇ ಕಥೆ ಮುಗಿಯುತ್ತದೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸೂಕ್ಷ್ಮ ಮನಸ್ಸಿನ ಸ್ತ್ರೀಯೊಬ್ಬಳು ಅನುಭವಿಸುವ ಸ್ತ್ರೀ ವಿಶಿಷ್ಟ ಅನುಭವ ಇದು. ಇಲ್ಲಿನ ನಾಯಕಿ ''ತನಗೆ ಒಳಗೆ ತೊಂದರೆ ಕೊಡುವ ಮುಳ್ಳು ತನ್ನ ಹೊರಗೆ ಇದೆ ಎಂದು ಸಾಧಿಸುತ್ತಾಳೆ. ಆದರೆ ಮುಳ್ಳಿನ ಅನುಭವಕ್ಕೆ ನಾಯಕಿಯ ಮನಸ್ಸು ಮಾತ್ರ ಕಾರಣ ಎಂದು ನಾವು ಒಪ್ಪಲಾಗುವುದಿಲ್ಲ. ಸಂಸ್ಕೃತಿ ದತ್ತ ಸಂಗತಿಗಳು ಮತ್ತು ನಾಯಕಿಯ ಸೂಕ್ಷ್ಮ ಮನಸ್ಸು ಎರಡೂ ಸೇರಿಯೇ ಈ ಮುಳ್ಳುಗಳ ಅನುಭವವನ್ನು ಉಂಟು ಮಾಡಿವೆ.

ಮಲೆನಾಡು ಪ್ರದೇಶದಿಂದ ನೌಕರಿಗೆಂದು ಬಂದು ಮುಂಬೈ ಸೇರಿದ ಆಕೆ ಒಂಟಿ. ಡೆಲ್ಲಿಯಿಂದ ಬಂದು ಸೇರಿದವನು ಆತ. ಇಬ್ಬರಿಬ್ಬರು ಪರಸ್ಪರ ಪರಿಚಿತರಾದರು. ಇವರ ಜೀವನ ಒಂದೇ ಸೂರಿನಡಿ. ಇವರ ಪ್ರಪಂಚದಲ್ಲಿ ಯಾವುದೇ ರೀತಿಯ ಬೇಡಿಕೆಯೂ ಇರಲಿಲ್ಲ. ನಿರೀಕ್ಷೆಯೂ ಇರಲಿಲ್ಲ. ಇಬ್ಬರ ನಡುವೆ ಯಾವುದೇ ರೀತಿಯ ಘರ್ಷಣೆಯೂ ಏರ್ಪಟ್ಟಿರಲಿಲ್ಲ. ಹಾಗಾಗಿ ಸಹ ಜೀವನ ಇವರ ಬದುಕಾಗಿತ್ತು. ಇವರ ಅನ್ಯೋನ್ಯತೆ, ಸಂಬಂಧಕ್ಕೆ ದಾಖಲೆ ಎನ್ನುವುದು ಇರಲಿಲ್ಲ. ಹಾಗಾಗಿ ಇವರ ಸಂಬಂಧ ಜನರ ಆಡುವ ಬಾಯಿಗೆ ತುತ್ತಾಗಿತ್ತು. ಇದಾವುದಕ್ಕೂ ತಲೆಕೆಡಿಸಿಕೊಳ್ಳದ ಇವರು ಬದುಕನ್ನು ಹಾಗೆ ನಡೆಸುತ್ತಿದ್ದರು. ಹೀಗೊಂದು ದಿನ ಬದುಕಿನ ಹತ್ತು ವರ್ಷಗಳು ಕಳೆದಾಗ....ಒಡಲಲ್ಲಿ ಹೊಸ ಜೀವಿಯ ಮಿಸುಕಾಟ ಪ್ರಾರಂಭವಾಯಿತು. ಗರ್ಭಪಾತಕ್ಕಾಗಿ ಹೇಳುವ ಆತ , ಅದೇ ತನ್ನ ಜೀವ ನನಗೆ ತಾಯ್ತನದ ಸುಖ ಬೇಕೆನ್ನುವ ಆಕೆ, ಇವರ ನಡುವೆ ವಿಷಯ ದ್ವಂದ್ವಕ್ಕೆ ಎಡೆಮಾಡಿಕೊಟ್ಟಿತು. ಇದರಿಂದ ಗಂಡಿನ ಸ್ವಾರ್ಥಪರತೆ, ಲಾಲಸೆ, ಕ್ರೌರ್ಯಗಳು ಎಂದು

ಗುರುತಿಸಬೇಕೋ ಅಥವಾ ಯಾವುದೇ ರೀತಿಯ ಅಡೆತಡೆಗಳು ಬಂದರೂ ಎದುರಿಸುತ್ತೇನೆ ಎಂಬ ಛಲ ಹೊಂದಿರುವವಳು ಆಕೆ. ಗಂಡು ತನ್ನ ಹೆಸರಿಗೆ ಸಮಾಜದ ದೃಷ್ಟಿಯಲ್ಲಿ ಯಾವುದೇ ರೀತಿಯ ಧಕ್ಕೆಯುಂಟಾಗಬಾರದೆಂದು ಹಂಬಲಿಸುವನು. ಗಂಡು ಕೇವಲ ತನ್ನ ಅನುಕೂಲಕ್ಕಾಗಿ, ಸಂತೋಷಕ್ಕಾಗಿ ಅಷ್ಟೇ ದಾಖಲು ಮಾಡದ ಸಂಬಂಧವನ್ನು ಬೆಳೆಸಿದನೇ ಅಥವಾ ಇದರ ಅರಿವು ಅವನಿಗಿರಲಿಲ್ಲವೇ?...ಹೆಣ್ಣು ಇದರೆಲ್ಲದರ ಹೊಣೆಗಾರಿಕೆಯನ್ನು ಹೊರಲು ಸಿದ್ಧಳಿದ್ದಳು. ಆದರೆ ಸಮಾಜ ಅವಳನ್ನು ದೂಷಿಸುತ್ತದೆ. ಇದರ ಅರಿವು ಅವಳಿಗಿದ್ದರೂ ಸಹ ಎದುರಿಸಲು ಸಿದ್ಧಳಿದ್ದಾಳೆ.

ಹೆಣ್ಣಿನ ಸ್ವಾತಂತ್ರ್ಯದ ಅರಿವಿನ ಬಗ್ಗೆ ಜಾಗೃತಿ ಮೂಡಿಸಲು, ಗುಲಾಮಗಿರಿತನದ ಬಗ್ಗೆ ಭಾಷಣ ಮಾಡಲು ವಿಮಲಾ ಸಿದ್ಧಳಾಗಿದ್ದಾಳೆ. ಅದೆಲ್ಲದರ ಲೋಪ-ದೋಷಗಳನ್ನು ಟೀಕಿಸುತ್ತಾಳೆ. ಇದು ಕೇವಲ ವೇದಿಕೆಯ ಭಾಷಣವಾಗಿ ಸೀಮಿತಗೊಳ್ಳುತ್ತದೆ. ಆದರೆ ತನ್ನ ಸಂಸಾರಿಕ ನೆಲೆಯಲ್ಲಿ ಕುಂತು ನೋಡಿದಾಗ ಅವಳ ಸ್ವಾತಂತ್ರ್ಯ ತನ್ನ ಗಂಡನ ಮಾತಿಗೂ ಸ್ಪಂದಿಸಲಾಗದ ಸ್ಥಿತಿಯದು. ಅಂದರೆ ಹೆಣ್ಣು ಸ್ವಾತಂತ್ರ್ಯದ ಜಾಗೃತಿ ಮೂಡಿಸಲು ಸಮಾಜಕ್ಕೆ ಹೊರಡುತ್ತಾಳೆ. ಆದರೆ ಅದೇ ಜಾಗೃತಿಗೆ ತನ್ನ ಸಂಸಾರದಲ್ಲಿ ಜಾಗವಿಲ್ಲದಿರುವುದನ್ನು ಗಮನಿಸಬಹುದು. ಇಲ್ಲಿ ಗಂಡಿನ ಪ್ರಭುತ್ವ-ದೃಷ್ಟಿಕೋನ ಮತ್ಯಾವ ಬಗೆಯದು ಇಲ್ಲ. ಗಂಡು ತನ್ನೆಲ್ಲಾ ಹೊರೆಗಳನ್ನು ಹೆಣ್ಣಿನ ಸ್ವಾತಂತ್ರ್ಯದ ಮೇಲೇರಲು ಹೊಂದಿದ್ದಾನೆಯೇ ಅಥವಾ ಹೆಣ್ಣಿನ ಜವಾಬ್ದಾರಿಯನು ತಾನು ಹೊರಲು ಸಿದ್ಧನಿಲ್ಲವೇ ಇದು ಯಾವ ಬಗೆಯದು ಎಂಬುದೇ ಪ್ರಶ್ನೆಯಾಗುತ್ತದೆ. ಒಟ್ಟಾರೆಯಾಗಿ ಹೆಣ್ಣು ಭಾಷಣ ಮಾಡಲು ಅನುಮತಿ ಪಡೆಯುವುದು ಅವಳ ಪರಿಸ್ಥಿತಿಯನ್ನು ಕುರಿತು ಹೇಳುತ್ತದೆ. ಇದು ಸ್ವಾತಂತ್ರ್ಯದ ಬಗೆಗಿನ ದೃಷ್ಟಿಕೋನ. ಇದರ ನಿಲುವನ್ನು ಗ ಂಡು ತಳೆಯುವ ದೃಷ್ಟಿಕೋನವಾಗಿದೆ.

'ಕವಲು' ಕಥೆಯಲ್ಲಿ ಮಿನಿ ಸ್ವಭಾವ ಮುಗ್ಧತೆಯಿಂದ ಕೂಡಿದೆ. ಆಕೆಗೆ ನಾ ನಿನ್ನ ಯಾಕೆ ಪ್ರೀತಿ ಮಾಡ್ಲಿಕ್ಕೆ ಸುರೂ ಮಾಡಿದರೆ ಅದು ಬರೀ ಪ್ರೀತಿ ಹ್ಯಾಗ್ಯಾದೀತು ? ಪ್ರೀತಿ ಅಂದರ I just happiness....ಅದಕ್ಕ ಕಾರಣ-ಪರಿಣಾಮದ ಸಂಬಂಧ ಇಲ್ಲ. ಆತನ Logic ಆಕೆಗೆ ಎಂದು ತಪ್ಪಾಗಿ ತೋರಿಲ್ಲ. ಇಂತಹ ಮಾತುಗಳಿಂದಲೇ ಅವಳನ್ನು ತನ್ನವಳನ್ನಾಗಿ ಮಾಡಿಕೊಂಡ ಸ್ವಭಾವದವನು. ಆಕೆಯನ್ನು ಯಾವ ರೀತಿಯ ಪ್ರಶ್ನೆಗಳನ್ನು

ಹಾಕಿಕೊಳ್ಳುವುದಕ್ಕೆ ಅವಕಾಶ ಕೊಡದವನು. I am brave man ಎಂದು ಹೇಳುವುದರ ಮೂಲಕ ಸನ್ನಿವೇಶವನ್ನು ಸರಳೀಕರಿಸುವನು. ತನಗೆ ಮದುವೆಯಾಗಿ ತನ್ನ ಹೆಂಡತಿ ಇದ್ದರೂ ಸಹ ಮಿನಿಯ ಒಡನಾಟ ಆತನಿಗೆ ಬೇಕು. ಶಾಂತಾ ಅಂದರ ನನ್ನ ಪಾಲಿಗೆ ಬರಿಯ means ಅಂದರ ಜೀವನಾ ನಡೆಸೋ means ನೀ ಹಾಗಲ್ಲ. ನನ್ನ ಪಾಲಿಗೆ you are on end ನನ್ನ ಜೀವನದ ಅಂತಿಮ ಲಕ್ಷ್ಯ.....ಇಂಥ ಮಾತುಗಳಿಂದಲೇ ಜೀವನವನ್ನು ಸಾಗಿಸುವ ಮಿನಿ ಬದುಕಿನ ನಿರ್ಧಾರದ ಹಂತ ತಲುಪುತ್ತಾಳೆ. ಅವನ ನಡುವಳಿಕೆಗಳು ಮಿನಿಯ ಮನಸ್ಸಿನಲ್ಲಿಯೇ ಲೆಕ್ಕಾಚಾರ ಮಾಡಲಿಕ್ಕೆ ಶುರು ಮಾಡುತ್ತವೆ. ಆದ್ದರಿಂದ ಇದು ಅವಳ ಅನುಭವದ ಪಾಠವೂ ಆಗಿದೆ. ಕೊನೆಗೆ ಮದುವೆಯಾಗಿ ೨೦ ವರ್ಷಗಳ ಕಾಲ ಜೀವನ ನಡೆಸಿದ ಪತ್ನಿ ಶಾಂತಾ ತೀರಿಹೋದಾಗದ ಮಿನಿಯನ್ನು ಮದುವೆಯಾಗಲು ಸಿದ್ಧನಾಗುತ್ತಾನೆ. ಅಂದ್ಹಾಗ ನಾವು ಎಂದ ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಹೋಗೋಣ ಮಿನಿ ?.. ಈ ಮಾತುಗಳು ಆಕೆಯ ದೃಢವಾದ ಮನಸ್ಸನ್ನು ಕಲಕುತ್ತವೆ. ದಕ್ಕನೆ ದಡಕ್ಕನೆ ಎದ್ದು ಡ್ರಾಯರಿನಿಂದ ಬಿಳಿ ಕಾಗದ ತೆಗೆದು ಬರೆಯುತ್ತಾಳೆ. ''ನನ್ನನ್ನು ಕ್ಷಮಿಸು, ಕೆನಾಡಕ್ಕೆ ಹೋಗುವುದನ್ನು ಕ್ಯಾನ್ಸಲ್ ಮಾಡುವುದು ಈಗ ಸಾಧ್ಯವಿಲ್ಲ. ಬಹಳ ತಡವಾಯಿತು ನಾಳೆಯೇ ನಾನು ಅದರ ಪೂರ್ವ ತಯಾರಿಗಾಗಿ ಮುಂಬೈಗೆ ಹೋಗುತ್ತವೆ. ನೀನು ಹಿಂದಿರುಗಿ ಬಂದಾಗ ನಾನಿರುವುದಿಲ್ಲ. ನಮ್ಮ ದಾರಿ ಕವಲೊಡೆದಿದೆ.

ಗಿರಿಜಾಳ ಲಗ್ನ ಚೆನ್ನಾಗಿ ಮಾಡು ಅವಳಿಗೆ ನಿನ್ನ ಆಶೀರ್ವಾದಗಳು. ನಿನಗೆ ಹೆಚ್ಚಿಗೆ ಹೇಳುವ ಅವಶ್ಯಕತೆಯಿಲ್ಲ. you are a brave man.

ಇದು ಮಿನಿಯ ಬದುಕಿನಲ್ಲಿ ತೆಗೆದುಕೊಂಡು ದೃಢ ನಿರ್ಧಾರದ ಕವಲಾಗಿದೆ.

2. ಪಿತೃ ಮೌಲ್ಯಗಳ ನಿರಾಕರಣೆ ಮತ್ತು ಉಲ್ಲಂಘನೆ

ಈ ಕಥೆಗಳಲ್ಲಿ ಪಿತೃಮೌಲ್ಯಗಳನ್ನು ನಿರಾಕರಿಸುವ ಕ್ರಮ : ಮೀರುವುದು ಅವರಿಗೆ ಒಂದು ದೊಡ್ಡ ಸಮಸ್ಯೆಯ ಅಲ್ಲ. ..ಸಮಸ್ಯೆಯೇನಿದ್ದರೂ ಹೀಗೆ ಮೀರಿ ನಿಂತ ಮೇಲೆ ಬದುಕಿನ ಸಾರ್ಥಕದ ದಾರಿ ಯಾವುದು ? ತಮ್ಮ ವ್ಯಂಗ್ಯ, ಕಟಕಿ, ಕುಹಕ, ರೊಚ್ಚು, ಬಯ್ಗಳದ ಮಾತುಗಳ ಮೂಲಕ ಆಗಾಗ ಓದುಗರ ಪ್ರಜ್ಞೆಗೆ ಅವರು ಶಾಕ್‌ಕೊಡುವ ಕೆಲಸ ಮಾಡಿದ್ದಾರೆ.

''ಜಗತ್ತೇ ತನ್ನನ್ನು ಅನುಮಾನಿಸುತ್ತದೆ. ಇಡೀ ಜಗತ್ತಿನ ವಿರುದ್ಧ
ಬಂಡೇಳಬೇಕು, ಒಬ್ಬೊಬ್ಬರನ್ನಾಗಿ ಎಲ್ಲದನ್ನು ಜೀವಂತ ಸುಡಬೇಕು
ಕೊನೆಗೂ ತಾನೂ ಅದೇ ಬೆಂಕಿಯಲ್ಲಿ ಬಿದ್ದು ಹೋಗಬೇಕು.''

ಎಂಬ ರೊಚ್ಚನ್ನು ಶಾಂತಿಯು ವ್ಯಕ್ತಪಡಿಸುತ್ತಾಳೆ. ಅವಳ ಮನಸ್ಸಿನಲ್ಲಿ ಈ ಮೌಲ್ಯಗಳನ್ನು ಅನುಸರಿಸದಿರುವುದು ಕಾಣುತ್ತದೆ. ಸಮಾಜದ ಕಟ್ಟುಪಾಡುಗಳನ್ನು ಯಾವುದೇ ತರಹದ ಅಂಜಿಕೆಯಿಲ್ಲದೆ ಧಿಕ್ಕರಿಸುವ ಸಾಹಸ ಇಲ್ಲಿ ಕಂಡುಬರುತ್ತದೆ.

'ಅತಿಥಿ' ಯ ಕತೆಯು ತಾನೂ ಮದುವೆಯಾಗಲಿಲ್ಲ ಎಂದು ಮರುಕಪಟ್ಟ ಹುಡುಗಿಗೆ ಹಾಸ್ಟೆಲ್ ವಾರ್ಡನ್ ಲೀಲಾವತಿ ಈ ರೀತಿ ಹೇಳಬೇಕೆಂದುಕೊಳ್ಳುತ್ತಾಳೆ.

'ಏ ಹುಡುಗಿ, ಮದುವೆ, ಮಕ್ಕಳು - ಸಂಸಾರ ಇವುಗಳನ್ನು ಹೆಣ್ಣು ಕತ್ತೆಗಳೂ ಮಾಡುತ್ತವೆ. ವೈಸ್ ಪ್ರಿನ್ಸಿಪಾಲ್ ಆಗಲೂ ಹಾಸ್ಟೆಲಿನ ವಾರ್ಡನ್ ಆಗಲು ನನ್ನ ಹಾಗಿರಲು ಯೋಗ್ಯತೆ ಬೇಕು.. ಅಂದೆ....ತಿಳಿಯುತ್ತೇನೆ.

ಇದು ಒಪ್ಪಿತ ಮನಸ್ಥಿತಿಯಾಗಿರದೆ, ತಾನೇ ಎಲ್ಲಾ ಎಂದು ಹೇಳುವ ಪುರುಷ ಪ್ರಧಾನ ಸಮಾಜದ ಪಿತೃ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಧಿಕ್ಕರಿಸಿ ನೋಡುವ ಬಗೆಯದಾಗಿದೆ.

'ಹೊರಟು ಹೋದವನು' ಕತೆಯ ನಾಯಕಿಗೆ ಜಗತ್ತು ತನಗೆ ಅನ್ಯಾಯ ಮಾಡಿದೆ. ತನ್ನ ಬೆಳಕನ್ನು ಕಸಿದುಕೊಂಡಿದೆ' ಎಂದು ಕೋಪ. ಅದಕ್ಕೇ ಎಲ್ಲರ ಮೇಲೂ ಸೇಡು ತೀರಿಸಿಕೊಳ್ಳಬೇಕೆಂಬ ದಾಹ.

''ಈ ತ್ಯಾಗ ಪ್ರೀತಿಸುವ ವ್ಯಕ್ತಿಯಲ್ಲಿ ನಂಬಿಕೆಯಿದ್ದಾಗ ಮಾಡುವ
ತ್ಯಾಗಕ್ಕಿಂತಲೂ ನಂಬಿಕೆಯಿಲ್ಲದೇ ಬರೇ ಪ್ರೀತಿಗಾಗಿ ಮಾಡುವ ತ್ಯಾಗ
ದೊಡ್ಡದೆಂದು ಹಿಂದೆಂದೂ ಕೇಳಿದ ನೆನಪು ಸತೀಶನಿಗೆ ತನ್ನಲ್ಲಿ
ನಂಬಿಕೆಯಿಲ್ಲವೆಂದು ತನಗೆ ಗೊತ್ತಿದೆ
ಹಾಗಾದರೆ ಪ್ರೀತಿಯಿರಬಹುದೇ ?

ಈ ನಾಯಕಿಗೆ ಬೆನ್ನಲುಬಲ್ಲದ ''ಯಾವಾಗಲೂ ತನ್ನನ್ನು ಓಲೈಸಲು ಪ್ರಯತ್ನಿಸುವ ಗಂಡನನ್ನು ಎತ್ತಿ ಬೆಂಕಿಯುಗುಳವ ಬಂಬಿನಲ್ಲಿ ಹಾಕಬೇಕು'' ಅನಿಸುತ್ತದೆ. ಹೀಗೆ ಬೆಂಕಿ ಹಚ್ಚುವ ಎಲ್ಲವನ್ನು ಧ್ವಂಸ ಮಾಡುವ ಬಯಕೆಯಿರುವ ಮಾಡಬೇಡ ಅಂದದನ್ನು ಮಾಡುವ ವ್ಯವಸ್ಥೆ ಹಾಳಾಗುವುದನ್ನು ನೋಡಿ ಹಿಂಸಾನಂದ ಪಡುವವರು ಕಾಣಿಸುತ್ತಾರೆ.

ಹೆಣ್ಣಿನ ಮದುವೆಯ ನಂತರ ಅವಳ ಸ್ವಾತಂತ್ರ್ಯ, ಕ್ರಿಯಾಶೀಲತೆ ನಾಶವಾಗುತ್ತದೆ ಎಂಬುದನ್ನು ಪ್ರಸ್ತುತಪಡಿಸುತ್ತಾರೆ. ಕೊನೆಗೆ ಹೆಣ್ಣು ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಿಡುತ್ತಾಳೆ ಎಂಬ ಅಂಶವನ್ನು ಸಾಬೀತುಪಡಿಸುತ್ತಾರೆ. ಆಕಸ್ಮಿಕ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯತೆ ಕೊಟ್ಟಾಗ ಅವಳ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುವ ಪುರುಷ ವರ್ಗವನ್ನು ಪರೋಕ್ಷವಾಗಿ ಟೀಕೆ ಮಾಡುತ್ತಾ...ಅವರುಗಳ ಸೌಲಭ್ಯಕಾಂಕ್ಷೆಯನ್ನು ಖಂಡಿಸುತ್ತಾರೆ. ಮತ್ತೆ ಹೆಣ್ಣು ತನ್ನ ಸ್ವಂತ ವ್ಯಕ್ತಿತ್ವ ಉಳಿಸಿಕೊಳ್ಳಿಲು ಹೊರಟಾಗ ಯಾರು ಸಹಕರಿಸಲಾರದು ಎಂಬುದನ್ನು ಹೇಳುತ್ತಾರೆ.

ಇಷ್ಟೆಲ್ಲಾ ಜಂಜಾಟ, ತುಮುಲಗಳ ನಡುವೆ ದೈಹಿಕ ಮತ್ತು ಮಾನಸಿಕ ಶೋಷಣೆಗೆ ಒಳಗಾಗಿ ಸಮಾಜದಲ್ಲಿ ಬದುಕು ಸಾಗಿಸಲೇ ಬೇಕಾದ ಪರಿಸ್ಥಿತಿ ಬಂದಾಗ ಆಕೆಯ ಮುಂದಿರುವ ದಾರಿ ಎರಡೇ ಒಂದು ಪಿತೃ ಪ್ರಧಾನ ವ್ಯವಸ್ಥೆಗೆ ತಲೆಬಾಗಿ ಅದು ಹೇಳಿದಂತೆ ಕೇಳುವುದು ಇಲ್ಲವೇ 'ಕವಲು' ದಾರಿಯಲ್ಲಿ ಸಾಗುವುದು.

3. ಪುರುಷ ಪಾತ್ರಗಳ ಚಿತ್ರಣದಲ್ಲಿ ಉಂಟಾಗಿರುವ ವಿಭಿನ್ನತೆ

ಈ ಕಥೆಗಳಲ್ಲಿ ಕೇಂದ್ರಬಿಂದುವಾಗಿ 'ಹೆಣ್ಣು' ಪ್ರತಿಬಿಂಬಿಸುತ್ತಾಳೆ. ಈಕೆಯ ಎಲ್ಲಾ ಸ್ಥಾನಗಳಿಗೂ ಪೂರಕವೆಂಬಂತೆ ಸಮನಾಗಿ 'ಗಂಡು ಕಾಣಿಸಿಕೊಳ್ಳುತ್ತಾನೆ. ಇದರ ಗ್ರಹಿಕೆ ಪುರುಷ ಗ್ರಹಿಕೆಯೆಡೆ ನಿಂತು ಪುರುಷನನ್ನು ನೋಡುವುದಾಗಿದೆ. ಇಲ್ಲಿ ಪುರುಷ ಒಡೆಯನೂ ಅಲ್ಲ. ವಿಶೇಷ ಜೀವಿಯೂ ಅಲ್ಲ. ಅವನ ದೌರ್ಬಲ್ಯಗಳು ಲೋಪ ದೋಷಗಳು ಎಷ್ಟೋ ಸಲ ಹೆಂಗಸಿಗಿಂತಲೂ ಹೇಡಿಯಾಗಿ ವರ್ತಿಸುವ ರೀತಿ ಅವನಲ್ಲೂ ಇರಬಹುದಾದ ಹೆಣ್ಣು ಗುಣಗಳು ಕಥೆಯಲ್ಲಿ ಅತ್ಯಂತ ಸಮರ್ಥವಾಗಿ ಮೂಡಿಬಂದಿವೆ.

ನೀನೇ ತಂತಿ ಕತೆಯ ಹರೀಶ - ಗಿಣಿಯನ್ನು ಪಂಜರದಲ್ಲಿಟ್ಟುಕೊಂಡಿರುವುದು, ಹೆಂಡತಿಯನ್ನು, ಪ್ರೇಮಿಸುವುದು- ತನ್ನ ಕೈಜಾರಿ ಹೋಗುತ್ತಾರೆ ಎಂಬ ಭ್ರಮೆಯಿಂದ. ಆದರೆ ಸಾಬೀತುಪಡಿಸುವುದು ನಾನು ಅಕ್ಕರೆಯಿಂದ ಸಾಕಿರುವುದರಿಂದಲೇ ನನ್ನ ಬಳಿ ಇದೆ ಎಂದು ಹೇಳುತ್ತಾನೆ. ಇವನ ದೌರ್ಬಲ್ಯ, ಸೂಕ್ಷ್ಮವಾಗಿ ಕಾಣಿಸಿಕೊಂಡಿದೆ.

ಒಂದು ರವಿವಾರ' ಕತೆಯಲ್ಲಿನ ರೇಖಾ, ಶಾಂತಾ, ಗಿರಿಜಾ ನಾಯಕಿಯರೂ ಒಂದೇ ಕೊಠಡಿಯ ಸಂಸಾರದವರು. ಆ ರೂಮಿನಲ್ಲಿನ ಜೀವನ ಇಡೀ ಬದುಕಿನ ಮಜಲನ್ನು ಪ್ರತಿಬಿಂಬಿಸುತ್ತದೆ. ಜಗನ್ನಾಥನ್ ಎಂಬ ಶ್ರೀಮಂತ ಈತನಿಗೆ ಗರ್ವ ಅವನ ಔಟಿಂಗ್‌ಗಳ ಕಥೆ ಆಫೀಸಿಗೆಲ್ಲ ಚಿರಪರಿಚಿತ. ಅವನ ಸ್ಪೆಷಾಲಿಟಿ ಎಂದರೆ ಪ್ರತಿವಾರ ಒಬ್ಬ ಹೊಸ ಹುಡುಗಿಯನ್ನು ಕರೆದೊಯ್ಯುವುದು ಮತ್ತು ಆ ಹುಡುಗಿ ಕಳೆದ ವಾರದ ಹುಡುಗಿಗಿಂತ ಹೆಚ್ಚು ಸುಂದರಿಯಾಗಿರುವುದು ನೋಡಲು ಸಾದಾ ಇದ್ದ ಹುಡುಗಿಯರು ಅವನ ಕಣ್ಣಲ್ಲೇ ಕಾಣುವುದಿಲ್ಲ. ಬಹಳ ರಸಿಕನಿದ್ದಿರಬೇಕು ಆತ, ಈತನ ಜೊತೆಯಲ್ಲಿ ಹೋಗಿದ್ದ ವಸುಧಾ ಎಲ್ಲವನ್ನು ಹೇಳುವಾಗ ಛೀ.. ನಾಚಿಕೆಯಾಗುವುದಿಲ್ಲವೇ ಎಂದು ಅಂದುಕೊಳ್ಳುತ್ತಾರೆ.

'ಗಂಡು' ತನ್ನ ನಡವಳಿಕೆಯಿಂದ ಕೆಟ್ಟವನಾದರೂ ಸಹ ಅದಕ್ಕೆಲ್ಲಾ ಪ್ರೇರಕ ಶಕ್ತಿಯಾಗಿ ಹೆಣ್ಣು ನಡೆದುಕೊಳ್ಳುತ್ತಾಳೆ.

'ಬಿಡುಗಡೆ' ಕಥೆಯು ಸರೋಜಾಳು ಬಿಡುಗಡೆ ಹೊಂದುವುದನ್ನು ಗುರುತಿಸಿದ್ದೇವೆ. ಆದರೆ ಸಂಕೋಲೆಗೆ ಸಿಕ್ಕಿ ಹಾಕಿಕೊಂಡವಳು ಅವಳೇ. ಗಂಡ ಎಂದಾಕ್ಷಣ ಪ್ರತಿ ಹಂತದಲ್ಲಿಯೂ ಸೋಲುವ, ಸಹಿಸುವ ಸ್ವಭಾವವನ್ನು ಕಲಿಯುತ್ತಾಳೆ. ಇಲ್ಲಿ ಯಾವುದೇ ಸಂದರ್ಭದಲ್ಲಿಯೂ ಸಮಾಜದಲ್ಲಿ ಪ್ರತಿಭಟಿಸುವ ಕಾರ್ಯ ನಡೆಯುವುದಿಲ್ಲ.

ಒಟ್ಟಾರೆಯಾಗಿ ಕಥೆಗಳಲ್ಲಿನ ನಾಯಕಿಯರು ಗಂಡುಗಳ ಬಗ್ಗೆ 'ಕುಹಕದಿಂದ' ವ್ಯಂಗ್ಯ ಕಟಕಿಗಳಿಂದ ಯೋಚಿಸುತ್ತಾರೆ. ಇಷ್ಟಲ್ಲದೇ ಮದುವೆ ಎಂಬ ಸಂಸ್ಥೆಯು ಎಂಥದೇ ದುರ್ಬಲ ಗಂಡಿಗೂ ಕೊಡುವ ಅಧಿಕಾರವನ್ನು ಸಹ ಗುರುತಿಸಬಹುದು.

ಅಧ್ಯಾಯ - ೪

ಆಧುನಿಕತೆ ಮತ್ತು ಹೆಣ್ಣು

ಕಥೆಗಳಲ್ಲಿ ಕಾಣಿಸಿಕೊಳ್ಳುವ ಹೆಣ್ಣುಗಳು ಸುಶಿಕ್ಷಿತರು. ಉದ್ಯೋಗಸ್ಥರು ಮುಂಬಯಿಯಂತಹ ನವನಾಗರೀಕ ಜಗತ್ತಿನಲ್ಲಿ ಬದುಕುತ್ತಿರುವವರು. ಹೀಗಾಗಿ, ಸಹಜವಾಗಿ ಇವರ ಆಲೋಚನೆ, ನಡವಳಿಕೆಯ ಮೇಲೆ ಪಾಶ್ಚಾತ್ಯ ಪ್ರಭಾವ ಬಿದ್ದಿರುವಂತಹದೆ ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಇವರು ಅರ್ಥಮಾಡಿಕೊಳ್ಳಬಲ್ಲರು. ತಮಗೆ ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳ ಬಗೆಗೆ ಯೋಚಿಸಬಲ್ಲರು. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಸ್ವಾವಲಂಬಿಗಳಾಗಿದ್ದಾರೆ. ಹೀಗಾಗಿ ಈ ಅಂಶಗಳೂ ಅವರ ಆಯ್ಕೆ. ನಿರ್ಧಾರ ನಡವಳಿಕೆಯಲ್ಲಿ ಬಹುಮುಖ್ಯ ಪಾತ್ರವಹಿಸಿವೆ.

ಹೆಣ್ಣುಗಳು ಎಷ್ಟರ ಮಟ್ಟಿಗೆ ಗೆಲುವು ಸಾಧಿಸುತ್ತಾರೆ ಎಂಬುದು ಆಮೇಲೆ ಪ್ರಶ್ನೆಗೆ ಒಳಗಾಗಬಹುದಾದ ವಿಚಾರವಾದರೂ ಸಮಕಾಲೀನ ಸಾಹಿತ್ಯ ಧೋರಣೆ. ವೈಚಾರಿಕ ಚಿಂತನೆಗಳಿಗೆ ಲೇಖಕಿ ತಮ್ಮನ್ನು ತಾವು ತೆಗೆದುಕೊಂಡಿದ್ದಾರೆ. ಹೆಣ್ಣಿನ ಸಂವೇದನೆ, ಅನುಭವ, ಪುರುಷ ಚಿಂತನೆಯ ಮೂಸೆಯೊಳಗೆ ಮೂಡಿಸುವ ಮಹಿಳಾ ಸಂವೇಧನೆ, ಅನುಭವ, ವ್ಯಾಖ್ಯಾನಗಳಿಗೆ ತೀವ್ರ ವಿರೋಧವಿದೆ. ಈ ಎಲ್ಲವನ್ನೂ ಹೆಣ್ಣಿನ ಅನುಭವ, ಸೂಕ್ಷ್ಮತೆಗಳ ಮನೆಯೊಳಗೆ ಎರಕ ಹೊಯ್ಯುವ ಪ್ರಯತ್ನ ಮಾಡಿದರು. ಸಿದ್ಧ ಹೆಣ್ಣಿನ ಮಾದರಿಗಳನ್ನು ಮುರಿದು ಹೊಸ ಹೆಣ್ಣನ್ನು ಕಟ್ಟುವ ಸಾಹಸ ಧೈರ್ಯ ಮಾಡಿರುವುದನ್ನು ಕಥೆಗಳಲ್ಲಿ ಗುರುತಿಸಬಹುದು.

ಹೀಗೆ ವೀಣಾ ಅವರ ಕಥೆಗಳಲ್ಲಿ ಪರಂಪರಾಗತ ಮೌಲ್ಯಗಳನ್ನು ಅನುಸರಿಸಿಕೊಂಡು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದೆ. ಹೆಣ್ಣು ಆಯ್ಕೆಯನ್ನು ವಸ್ತುವಾಗಿ ತೆಗೆದುಕೊಳ್ಳುವುದರ ಮೂಲಕ ಆಧುನಿಕತೆ ಮಗ್ಗಲು ಮಾಡಿದ್ದಾಳೆ. ಕಥೆಗಳಲ್ಲಿ ಹೆಣ್ಣುಗಳು ಆಧುನಿಕತೆ ಎಂಬ ವಾಸ್ತವ ಪ್ರ ಪಂಚಕ್ಕೆ ಪರಂಪರೆಯ ಕನಸಿನೊಂದಿಗೆ ಪ್ರವೇಶ ಮಾಡುವುದರ ಮೂಲಕ ಅರ್ಥೈಸಿಕೊಳ್ಳುತ್ತಾಳೆ. ಇಲ್ಲಿನ ಹೆಣ್ಣುಗಳು ದುರ್ಬಲ ಮನಸ್ಕರಲ್ಲ

ಪ್ರಜ್ಞಾವಂತರು, ದೃಡತೆಯುಳ್ಳವರು ಬದುಕಿನ ಮಜಲನ್ನು ತೋರಿಸುವ ದಿಟ್ಟತನ ಹೊಂದಿರುವವರು.

ಅ) ಕುಟುಂಬದ ಪರಿಕಲ್ಪನೆ

ಭಾರತೀಯ ವ್ಯವಸ್ಥೆ ಕೌಟುಂಬಿಕ ಕಾಳಜಿಯನ್ನು ಸ್ತ್ರೀಗೆ ವಹಿಸಿಬಿಟ್ಟಿದೆ. ಆ ಹೆಣ್ಣು ಕೌಟುಂಬಿಕ ಚೌಕಟ್ಟಿನಾಚೆಗೆ ಕಾಲಿಡದೆ ಅದರೊಳಗೆ ಇದ್ದುಕೊಂಡೇ ಅದರ ಕಟ್ಟುಪಾಡುಗಳಿಗೆ ಒಳಗಾಗಿ ಕೌಟುಂಬಿಕ ಸ್ಥಿರತೆಗೆ ಎಂದಿಗೂ ಕುಂದು ಬರದಂತೆ ನಡೆದುಕೊಳ್ಳಬೇಕೆಂಬ ಪುರುಷ ಪ್ರೇರಿತ ಮನೋಭಾವ ಆಕೆಯನ್ನು ಕುಟುಂಬವೆಂಬ 'ಸುರಕ್ಷಿತ ಕೋಟೆ'ಯಲ್ಲಿಟ್ಟು ಶತಮಾನಗಳಿಂದ ಶೋಷಿಸುತ್ತಲೇ ಬಂದಿದೆ. ಇಂತಹ ಶೋಷಿತಾ ಮಹಿಳಾವರ್ಗದ ಧ್ವನಿಯಾಗಿ ಕಾಣಿಸಿಕೊಂಡ ಅನೇಕ ಲೇಖಕಿಯರೂ ತಮ್ಮ ಕೃತಿಗಳಲ್ಲಿ ಗಂಡಿನ ಪ್ರಪಂಚಕ್ಕೆ ಗೋಚರವಾಗದ ಸ್ತ್ರೀಯರ ಅಂತರಂಗವನ್ನು ತೆರೆದಿಟ್ಟರು.

ತಮಗೆ ಆಗುತ್ತಿರುವ ಅನ್ಯಾಯ, ಶೋಷಣೆ, ಅವಮಾನ ಇವುಗಳನ್ನೆಲ್ಲಾ ಮೌನವಾಗಿ ಇವು ತಮಗಷ್ಟೇ ಮೀಸಲು ಎಂದು ಅನುಭವಿಸಿಕೊಂಡು ಬಂದಾ ಮಹಿಳಾ ಜಗತ್ತನ್ನು ಸೃಷ್ಟಿಸುತ್ತಲೇ ಇವೆಲ್ಲವುಗಳ ವಿರುದ್ಧ ತನ್ನ ಮನೆಯಲ್ಲಿಯೇ ತಮ್ಮ ಮೇಲೆ ತನ್ನವೇ ಎಸಗುತ್ತಿರುವ ಕ್ರೌರ್ಯದ ವಿರುದ್ಧ ತಿರುಗಿ ಬಿದ್ದ ಆಧುನಿಕ ಸ್ತ್ರೀಯನ್ನು ಚಿತ್ರಿಸಿ ಮಹಿಳೆಯರು ತಮ್ಮ ಪ್ರತಿಭಟನೆಯನ್ನು ತೋರಿಸತೊಡಗಿದರು. ಇದರಿಂದ ಇದುವರೆಗೂ ಸ್ತ್ರೀ ಪ್ರಪಂಚಕ್ಕೆ ಅಗೋಚರವಾಗಿದ್ದ ಅಸಾಧ್ಯವಾಗಿದ್ದ ಆದರೆ ಅವರ ಮನದಾಳದಲ್ಲಿ ಸುಪ್ತವಾಗಿದ್ದ ಕುಟುಂಬದಾಚೆಗಿನ ಜಗತ್ತಿನ ಪ್ರವೇಶ ಅವರ ಕಥೆಗಳ ಮೂಲಕ ಸಾಧ್ಯವಾಗತೊಡಗಿತು. ಇಂತಹ ಸಂದರ್ಭದಲ್ಲೇ ಕೌಟುಂಬಿಕ ಆವರಣದೊಳಗಿನ ಉಸಿರು ಗಟ್ಟಿಸುವ ಸ್ಥಿತಿಯಿಂದ ಮುಕ್ತವಾದ ಹೊಸ ಪ್ರಪಂಚಕ್ಕೆ ಕಾಲಿಡಲು ಸಾಧ್ಯವಾಯಿತು. ಈ ಹೊರ ಹೋಗುವ ಪ್ರಕ್ರಿಯೆಯಿಂದ ಸಹಜವಾಗಿ ಕೌಟುಂಬಿಕ ಅಸ್ಥಿರತೆಗೆ ಕಾರಣವಾಯಿತು.

ವಿಷಮ ದಾಂಪತ್ಯ, ಲೈಂಗಿಕ ಅಸಮಾನತೆ, ಗಂಡಿನ ದೌರ್ಜನ್ಯ ಆರ್ಥಿಕ ದಾಸ್ಯ, ಇವೆಲ್ಲಕ್ಕೂ ಕಾರಣವಾಗುವ ಸ್ತ್ರೀಯ ಅಸಹಾಯಕತೆ ಇವುಗಳನ್ನೆಲ್ಲಾ ಸುರಕ್ಷಿತ ಹೆಣ್ಣು ಮೀರಿ ನಿಲ್ಲುವ ಸಾಧ್ಯತೆಗಳನ್ನು ಲೇಖಕಿಯರು ಮಾಡತೊಡಗಿದರು. ಕೃತಕ ಗಾಂಭೀರ್ಯಕ್ಕೆ ಒಳಗಾಗಿ

ಜೀವನದ ಉಲ್ಲಾಸಗಳಿಂದ ವಂಚಿತರಾದ ಹೆಣ್ಣುಗಳ ದಾಂಪತ್ಯ, ಚಿತ್ರಗಳು, ವಿಷಮ ದಾಂಪತ್ಯಕ್ಕೆ ಸಿಕ್ಕಿ ನರಳುವ ಹೆಣ್ಣುಗಳು ಬಂಜೆತನದ ಆಪಾದನೆಗೆ ನೋಯುವವರು ಅದರಿಂದ ಪಾರಾಗಲು ಯತ್ನಿಸುವ, ಪರ್ಯಾಯ ಸಂಬಂಧಗಳಿಗೆ ಒಳಗಾಗುವ ಹೆಣ್ಣುಗಳು ಷಂಡ-ಗಂಡನೊಡನೆ ಬದುಕನ್ನು ನೀತಿ ವೈವಾಹಿಕ ಕ್ರೌರ್ಯಕ್ಕೆ ಸಿಲುಕಿದವರು. ಇಂತಹ ಹಲವು ಮಾದರಿಗಳನ್ನು ಲೇಖಕಿ ತಮ್ಮ ಕಥೆಗಳಲ್ಲಿ ಪರಿಚಯಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಲೇಖಕಿಯರು ತಳೆಯುವ ನಿಲುವುಗಳು ಬಹುಮಟ್ಟಿಗೆ ಸ್ತ್ರೀ ಕೇಂದ್ರಿತವಾದ ಅವರ ಧೋರಣೆಗೆ ಸಾಕ್ಷಿಯಾಗಿದೆ. ಈ ದೃಷ್ಟಿಯಿಂದ ಲೇಖಕರಿಗಿಂತ ಭಿನ್ನವಾದ ನೆಲೆಗಳಲ್ಲಿ ಕೌಟುಂಬಿಕ ಪರಿಸರದ ಚಿತ್ರಣ ನೀಡುವಲ್ಲಿ ಸಾಧ್ಯವಾಗಿರುವುದು ಕಥೆಗಳ ವೈಶಿಷ್ಟ್ಯವಾಗಿದೆ.

ಕಥೆಗಳನ್ನು ಬರೆಯುವಾಗ ಪಿತೃಪ್ರಧಾನ ವ್ಯವಸ್ಥೆಯ। ಮೌಲ್ಯಗಳನ್ನೇ ಒಪ್ಪಿಕೊಂಡು ಬರೆಯುವವರನ್ನು ಆ ಮೌಲ್ಯಗಳೊಡನೆ ಮುಖಾಮುಖಿಯಾಗಿ ಬರೆಯುವವರನ್ನು ಕಾಣಬಹುದಾಗಿದೆ. ಆಧುನಿಕ ಶಿಕ್ಷಣದಿಂದ ಕಾಣಿಸಿಕೊಂಡ ಹೊಸ ಆಲೋಚನಾ ಕ್ರಮದಿಂದ ಹುಟ್ಟಿದ ಸ್ತ್ರೀವಾದಿ ದೃಷ್ಟಿಕೋನ ಹೀಗೆ ಮುಖಾಮುಖಿಯಾಗುವುದು ಕಾಣಿಸಿಕೊಂಡಿದೆ. ಈ ಎರಡು ರೀತಿಗಳಲ್ಲಿ ಅಂದರೆ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಒಪ್ಪುವ ಮತ್ತು ಅವುಗಳೊಡನೆ ಮುಖಾಮುಖಿಯಾಗುವ ಎರಡು ಸಂದರ್ಭಗಳಲ್ಲಿಯೂ ಲೇಖಕಿಯರು ಬರೆಯುವುದು ಬಹಳ ಮುಖ್ಯವಾಗಿ ಕೌಟುಂಬಿಕ ಪರಿಧಿಯೊಳಗಿನ ಸ್ತ್ರೀಯ ಬಗೆಗೆ ಈ ಚೌಕಟ್ಟಿನೊಳಗೆ ಹೆಣ್ಣು ಅಲ್ಲಿಯ ಒಪ್ಪಿತ ಮೌಲ್ಯಗಳೊಡನೆ ಮುಖಾಮುಖಿಯಾಗುವ ಪ್ರಶ್ನಿಸುವ, ಪ್ರತಿಭಟಿಸುವ ಸಂದರ್ಭ ಬಂದಾಗಲೆಲ್ಲಾ ಸಹಜವಾಗಿ ಅಲ್ಲಿ ಸಂಘರ್ಷ ಕಾಣಿಸಿಕೊಳ್ಳುತ್ತದೆ. ಈ ಸಂಘರ್ಷವೇ ವಿಘಟನೆಗೂ ದಾರಿ ಮಾಡಿಕೊಡುತ್ತದೆ. ಇಂತಹ ಸಂಘರ್ಷದ ಸಂದರ್ಭವನ್ನು ಸೃಷ್ಟಿಸಿರುವ ಕತೆಗಾರ್ತಿಯರಲ್ಲಿ ಪ್ರಮುಖವಾಗಿ ನವ್ಯ ಪ್ರಜ್ಞೆಯ ಸ್ತ್ರೀದನಿಯೆಂದು ಗುರುತಿಸಿಕೊಂಡಿರುವುದು ವೀಣಾರವರು. 'ಕಥೆಗಳಲ್ಲಿ ಸ್ತ್ರೀ ಪರವಾದ ಶೋಧನೆಯಲ್ಲಿ ಪ್ರಧಾನ ಉದ್ದೇಶವಾಗಿಟ್ಟುಕೊಂಡು ಬದುಕಿನ ಅಪಾಯಕಾರಿ ಘಟಕಗಳನ್ನು ತೀರಾ ನಿರ್ಲಿಪ್ತವಾಗಿ ಮುಖಾಮುಖಿಯಾಗುವ ಧೈರ್ಯ ತೋರಿದ್ದಾರೆ. ಆಧುನಿಕತೆ ಒಡ್ಡುವ ಸಂಘರ್ಷದಲ್ಲಿ ಬದುಕಿನ ಕೇಂದ್ರವಾಗುವ ಹೆಣ್ಣು-ಗಂಡಿನ ಸಂಬಂಧದ ಕೌಟುಂಬಿಕ ಆಶಯ ಇವರ ಸೃಜನಶೀಲತೆಯ ಪ್ರೇರಣೆಯಾಗಿದೆ.

ಸಮಕಾಲೀನ ಸಂದರ್ಭದಲ್ಲಿ ಗಂಡು-ಹೆಣ್ಣು ಸಂಬಂಧಗಳ ಬಗೆಗಿನ ಇವರ ಧೈರ್ಯದ ಹಾಗೂ ಮುಕ್ತ ಬರಹ ಆಗ ಹೊಸದಾಗಿತ್ತು. ಅವರ ಕಥೆಗಳ ವಸ್ತು ಪುರುಷರಿಂದ ಸ್ತ್ರೀಯ ಶೋಷಣೆ ಹಾಗೂ ಸ್ತ್ರೀ ಅನುಭವಿಸುವ ನೋವು, ಯಾತನೆಗಳು, ಅವಳ ಧೋರಣೆ ಸ್ವೀಕೃತಿಯದಾಗಲಿ ಅಥವಾ ಬಂಡಾಯದ್ದಾಗಿರಲಿ ಒಟ್ಟು ಪರಿಣಾಮದಲ್ಲಿ ಅಂತರವಿರುವುದಿಲ್ಲ ಎನ್ನುವುದು ಅರಿವಿಗೆ ಬರುತ್ತದೆ. ಆದರೆ ಇಂಥ ಸ್ವೀಕೃತಿಯ ಸಂದರ್ಭದಲ್ಲಿಯೂ ಇಲ್ಲಿನ ಸ್ತ್ರೀಪಾತ್ರಗಳು ಪುರುಷ ಮೌಲ್ಯಗಳ ಸಿದ್ಧಚೌಕಟ್ಟುಗಳಿಗೆ ತಮ್ಮನ್ನು ತಾವು ಬಂಧಿಸಿಕೊಳ್ಳಲು ಸಿದ್ಧರಿಲ್ಲದೆ ಬಾಹ್ಯವಾಗಿ ಬಂಡಾಯವನ್ನೂ ವ್ಯಕ್ತಪಡಿಸದೆ ತಮ್ಮ ಆಂತರಿಕವಾದ ಸ್ವ-ಪ್ರಜ್ಞಾ ಜಗತ್ತಿನಲ್ಲಿ ಅವುಗಳೊಟ್ಟಿಗೆ ಮುಖಾಮುಖಿಯಾಗುವುದೇ ಹೆಚ್ಚು. ಇಂತಹ ಪಾತ್ರಗಳಿರುವಂತೆಯೇ ಯಾವ ಮುಲಾಜಿಗೂ ಒಳಗಾಗದೆ ದಿಟ್ಟತನದ ವ್ಯಕ್ತಿತ್ವದಿಂದ ಕೌಟುಂಬಿಕ ಚೌಕಟ್ಟಿನ ಅಥವಾ ಅದರಾಚೆಗೂ ಗಂಡು-ಹೆಣ್ಣಿನ ಸಂಬಂಧಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಲು ಇಚ್ಛಿಸುವ ಮತ್ತು ವಹಿಸುವ ಪಾತ್ರಗಳು ಕಂಡು ಬರುತ್ತವೆ. ಅದರಲ್ಲೂ ಇಲ್ಲಿನ ಹೆಚ್ಚಿನ ಸ್ತ್ರೀ ಪಾತ್ರಗಳು ಓದಿ ವಿದ್ಯಾವಂತರಾಗಿ ಸ್ವತಂತ್ರವಾಗಿ ಜೀವಿಸುತ್ತಿರುವವರಾಗಿರುವುದರಿಂದ ತಮ್ಮ ಲೈಂಗಿಕತೆಯ ಬಗ್ಗೆ ಯಾವ ಬೂಟಾಟಿಕೆಯನ್ನು ತೋರದೆ ಮುಕ್ತವಾಗಿ ಅಭಿವ್ಯಕ್ತಿಸುವಲ್ಲಿ ಬೆಚ್ಚಿ ಬೀಳಿಸುವಷ್ಟು ಪ್ರಾಮಾಣಿಕವಾಗಿ ಕಂಡುಬರುತ್ತಾರೆ.

ಹೆಣ್ಣಿನ ಸ್ವಾತಂತ್ರ್ಯ ಮತ್ತು ದಾಂಪತ್ಯದಾಚೆಗಿನ ಲೈಂಗಿಕ ಸಂಬಂಧವನ್ನು ಪುರುಷ ಪ್ರಧಾನ ಸಮಾಜ' ಯಾವಾಗ ನಮ್ಮಲ್ಲಿ ಸಾಂಸ್ಕೃತಿಕ ಗ್ರಹಿಕೆಯಾಗಿ ನೆಲೆಯಾಯಿತೋ ಅಂದಿನಿಂದ ಹೆಣ್ಣನ್ನು ಶೀಲದ ಪ್ರಾತಿನಿಧಿಕ ಆಶಯವಾಗಿ ಇಟ್ಟುಕೊಳ್ಳಲಾಯಿತು. ಇದರಿಂದಾಗಿ ಹೆಣ್ಣು ಗಂಡಿನ ಲೈಂಗಿಕತೆ ಸಂಬಂಧಗಳು ಗಂಡಿನ ಪಾತ್ರ ಹಿಂದೆ ಸರಿದು ಕುಟುಂಬದ ಬೆಳವಣಿಗೆಯಲ್ಲಿ ಹೆಣ್ಣಿನ ಪರಿಶುದ್ಧತೆ ಮುಖ್ಯವೆಂದು ಪರಿಗಣಿಸಿ ಶೀಲದ ಸಾಂಸ್ಕೃತಿಕ ಆಶಯಗಳು. ಆಕೆಗಷ್ಟೇ ಸೀಮಿತಗೊಳಿಸಲಾಯಿತು. ಹೆಣ್ಣಿಗೆ ಪರಪುರುಷನ ಸಂಪರ್ಕವಿಲ್ಲದಿರುವುದೇ ಶೀಲದ ಅತ್ಯುನ್ನತ ಲಕ್ಷಣವೆಂದು ಸ್ಥಾಪಿಸಲಾಯಿತು. ಇದಕ್ಕೆ ಹೊರತಾಗಿ ಯೋಚಿಸಿದಾಗ ಲೈಂಗಿಕ ಸಂಬಂಧದಲ್ಲಿ ಇಬ್ಬರೂ ಕಳೆದುಕೊಳ್ಳುವ ಮತ್ತು ಪಡೆದುಕೊಳ್ಳುವ ಸಾಧ್ಯತೆಗಳು ಸಮಾನವಾಗಿಯೇ ಇರುತ್ತದೆ. ಆದರೆ ಭಾರತೀಯ

ಪರಂಪರೆಯಲ್ಲಿ ಹೆಣ್ಣು ಸಾಂಸ್ಕೃತಿಕ ಪ್ರತಿನಿಧಿಯಾದ್ದರಿಂದ ಅಲ್ಲಿ ಪರಿಶುದ್ಧತೆಯನ್ನು ಸ್ವೀಕರಿಸುತ್ತಲೇ ಅದನ್ನು ಒಡೆಯುವ ಭಾರತೀಯ ಆಕ್ರಮಣಕಾರಿ ಧೋರಣೆಯು ಹೆಣ್ಣಿನ ಸಾಧ್ಯತೆಗಳನ್ನು ಹಾಗೆಯೇ ಇರಿಸಿಕೊಳ್ಳುವ ನಾಟಕವಾಡುತ್ತಾ ತನ್ನ ಪಾವಿತ್ರ್ಯವನ್ನು ಆಕೆಯ ಸಾಂಸ್ಕೃತಿಕ ವಿಶೇಷಗಳನ್ನು ನಾಶಮಾಡುವುದರ ಮೂಲಕ ತಿರಸ್ಕರಿಸಿತು. ಆದ್ದರಿಂದ ಭಾರತೀಯ ಕೌಟುಂಬಿಕ ಆವರಣದಲ್ಲಿ ನ್ಯಾಯದ ಗ್ರಹಿಕೆಯು ಗಂಡಿನ ಈ ಪಾವಿತ್ರ್ಯ ನಾಶದ ಹಿನ್ನೆಲೆಯಲ್ಲಿ-ಹೆಣ್ಣಿನಲ್ಲಿ ಮಾತ್ರ ನೆಲೆಯಾಗಿದೆ.ಇಲ್ಲಿನ ಸ್ತ್ರೀ ಪಾತ್ರಗಳು ಮುಖಾಮುಖಿಯಾಗಲು ಆ ಮೂಲಕ ಮಾನವೀಯ ನೆಲೆಯ ಬದುಕು ಅಂದ ವಿಘಟನ ಸಂದರ್ಭದಲ್ಲಿ ನಾಶವಾಗಬಹುದೆ ಎಂಬುದನ್ನು ಕಾಣಲು ಪ್ರಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಡುಗಡೆ ಸಂಕಲನದ ಹೀಗೊಂದು ಕತೆ ಮತ್ತು ಕೊನೆಯ ದಾರಿ ಸಂಕಲನದ ಅದೇ ಹೆಸರಿನ ಕತೆಯನ್ನು ಗಮನಿಸಬಹುದು.

ಹೀಗೊಂದು ಕತೆ'ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ಮಿಥ್ಯಾಚರಣೆಯನ್ನು ಬಯಲಿಗೆಳೆಯುವ ಒಂದು ಕಥೆ ಈ ಕತೆಯ ನಾಯಕಿ ಸಾಮಾಜಿಕವಾದ ಕೌಟುಂಬಿಕವಾದ ಯಾವುದೇ ಕಷ್ಟ-ಪಾಡುಗಳಿಗೆ ಒಳಗಾಗದೇ ತನ್ನ ಗೆಳೆಯನ ಜೊತೆ ಹತ್ತು ವರ್ಷಗಳ ಸಹವಾಸ ಮಾಡಿ ನಂತರ ಗರ್ಭಿಣಿಯಾಗುತ್ತಾಳೆ. ತಮ್ಮ ಈ ಸಂಬಂಧಕ್ಕೆ ಸಮಾಜ ಒಪ್ಪಿತವಾದ ವಿವಾಹದ ಮುದ್ರೆ ಇಲ್ಲ ಎನ್ನುವ ಕಾರಣಕ್ಕಾಗಿಯೂ ಆ ಗರ್ಭವನ್ನು ತೆರೆಸಲು ಇಚ್ಛಿಸದೆ ಹುಟ್ಟುವ ಮಗುವಿನ ಬಗ್ಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುತ್ತಾಳೆ. ಆದರೆ ಆತ ಇದುವರೆಗೂ ಸಮಾಜದ ಯಾವುದೇ ರೀತಿ-ರಿವಾಜುಗಳಿಗೆ ತಲೆಕೆಡಿಸಿಕೊಳ್ಳದೆ ಆಕೆಯೊಂದಿಗೆ ವಿವಾಹ ಬಂಧನವಿಲ್ಲದೆಯೂ ಹತ್ತು ವರ್ಷಗಳ ಕಾಲ ಬದುಕಿದ್ದವ ಈಗ ಮಗುವಿನ ವಿಷಯದಲ್ಲಿ ಗೊಂದಲಕ್ಕೀಡಾಗುತ್ತಾನೆ. ವಾಸ್ತವ ಮತ್ತು ಸಮಾಜದ ಪ್ರತಿಕ್ರಿಯೆಗಳ ಮಧ್ಯೆ ತಾಕಲಾಡುವ ಅವನ ನಿಲುವು ಮಗುವಿಗೆ ಸಮಾಜದಲ್ಲಿ ಒಂದು ಸ್ಥಾನಕೊಡಬೇಕಾಗುತ್ತದೆಂದು ಇದನ್ನು ಸಮಾಜ ಒಪ್ಪುವುದಿಲ್ಲವೆಂದು ಆ ಮಗುವನ್ನು ನಿರಾಕರಿಸುತ್ತಾನಲ್ಲದೆ ಭ್ರೂಣಾವಸ್ಥೆಯ ಆ ಮಗುವನ್ನು ಕಳೆದುಕೊಳ್ಳಲು ಇಚ್ಛಿಸದ ಆಕೆಗೆ ಇದು ನಾನು ನಿನ್ನನ್ನು ಮದುವೆಯಾಗಬೇಕೆಂದು ಒತ್ತಾಯಿಸುವ ರೀತಿಯೂ ಎಂದು ಹೇಳುತ್ತಾನೆ. ಆದರೆ ಹತ್ತು ವರ್ಷ ಜೊತೆಯಲ್ಲಿ ಕಳೆದ ಮನುಷ್ಯ ಎಲ್ಲಾ ಲಕ್ಷ್ಮಣ

ರೇಖೆಗಳಾಚೆ ಎಲ್ಲಾ ರೀತಿ - ರಿವಾಜುಗಳಾಚೆ, ಎಲ್ಲಾ ಬಂಧನ-ನಿಯಮಗಳಾಚೆ ಬಂದು ತನ್ನೊಂದಿಗೆ ಬದುಕು ಸವೆಸಿದ್ದು ಮನುಷ್ಯ ಇವನು ಇಷ್ಟು ಸಾಮಾನ್ಯ ಸ್ತರದಲ್ಲಿ ಯೋಚಿಸಬಹುದೆಂದು ತಿಳಿದಿರದ ಆಕೆಗೆ ಇನ್ನು ಮುಂದೆ ಆತನ ಅಗತ್ಯವಿಲ್ಲ ಎನಿಸತೊಡಗುತ್ತದೆ. ಆತ ಆಕೆಯನ್ನು ಬಿಟ್ಟು ದೂರದ ತನ್ನ ಊರಾದ ದಿಲ್ಲಿಗೆ ತಂದೆ-ತಾಯಿಗಳ ಬಳಿ ಹೊರಟು ಹೋಗುತ್ತಾನೆ. ಆತನಿಲ್ಲದ ಒಂಟಿತನ, ಆತನ ಅನುಪಸ್ಥಿತಿ ಮೊದಮೊದಲು ಕಾಡಿದರು. ನಂತರ ಮಗುವನ್ನು ಪಡೆಯುವ ಹೊಂದುವ ಅನುಭವಿಸುವ ಪರಿಕಲ್ಪನೆಯ ಸುಂದರವಾದ ಕಾಣುವ ಆಕೆಗೆ ಇನ್ನೂ ಈ ಜೀವನದಲ್ಲಿ ಏನೂ ಬೇಡವೆನಿಸುತ್ತದೆ. ಏನು ಬೇಡ ? ಅಂದರೆ ಆತನು ಬೇಡ ? ಚಳಿಯಿದ್ದಾಗ ಬೆಚ್ಚಗಾಗಿಸಿದವನು. ಧಗೆಯಿದ್ದಾಗ ತಂಪೆರದವನು. ಜನ ನಿಬಿಡ ಬೀದಿಗಳಲ್ಲಿ ಕೈ ಹಿಡಿದು ದಾಟಿಸಿದವನು. ಬಾಯಾರಿದಾಗ ಜೀವರಸ ಸುರಿಸಿದವನು. ಹತ್ತು ವರ್ಷಗಳ ಕಾಲ ಎಡೆಬಿಡದೆ ಸಂಗಾತಿಯಾದವನು ಈಗ ಅದು ಬೇಡವೆನಿಸುತ್ತದೆ. ಆದುದರಿಂದ ಆತನ ಬಗೆಬಗೆಗೆ ದ್ವೇಷವಾಗಲಿ. ಕೋಪವಾಗಲಿ ಆಕೆಗೆ ಉಂಟಾಗುವುದಿಲ್ಲ.

ನಂತರವೂ ಆತ ತಮ್ಮ ಸಂಬಂಧವನ್ನು ಮದುವೆಯ ಬಂಧನಕ್ಕೆಳೆಯುವ ಮೂಲಕ ತನ್ನ ಭಯವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿ ತನ್ನ ತಾಯಿಯನ್ನು ಒಪ್ಪಿಸಿ ಈ ವಿಚಾರವನ್ನು ಆಕೆಗೆ ಫೋನ್ ಮೂಲಕ ತಿಳಿಸಿದಾಗ ಸ್ಸಾರಿ, ನನಗೀಗ ಯಾರ ಅವಶ್ಯಕತೆಯೂ ಇಲ್ಲ. ಯಾತರ ಅವಶ್ಯಕತೆಯೂ ಇಲ್ಲ. ನನಗೆ ಬೇಕಾದುದೆಲ್ಲಾ ನನಗೆ ಸಿಕ್ಕಿದೆ. ನಿನ್ನ ದಾರಿ ನೀನು ನೋಡಿಕೋ ಎಂದು ನಿರಾಕರಿಸಿ ಬಿಡುತ್ತಾಳೆ.

ಈ ಕಥೆಯಲ್ಲಿ ಕಂಡು ಬರುವ ಅವರ ಸಹ-ವಾಸದ ಸಂಬಂಧಿ ಈಗಾಗಲೇ ಇರುವ ಕೌಟುಂಬಿಕ ಮಾದರಿಗಳಾದ ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬಗಳ ಆಚೆಗೆ ಆಧುನಿಕ ಸಮಾಜದಲ್ಲಿ ಇತ್ತೀಚೆಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಕೌಟುಂಬಿಕ ಮಾದರಿಯಾಗಿದೆ. ಇದಕ್ಕೆ ಸಮಾಜದಲ್ಲಿ ಮನ್ನಣೆ ಇಲ್ಲದಿದ್ದರೂ ಇಂದಿನ ಯುವ ಜನಾಂಗ ನಗರದ ಒತ್ತಡದ ಬದುಕಿನಲ್ಲಿ ಪಾಶ್ಚಾತ್ಯ ಮಾದರಿಯ ಜೀವನ ಕ್ರಮದ ಅನುಕರಣೆಯ ಮೂಲಕ ವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದನೆಯಲ್ಲಿ ತಮಗೆ ಇಷ್ಟ ಬಂದ ಈ ರೀತಿಯ ಕುಟುಂಬಗಳನ್ನು

ಸೃಷ್ಟಿಸಿಕೊಳ್ಳುತ್ತಿದ್ದಾರೆ. ಯಾವುದೇ ಷರತ್ತು ನೀತಿ-ನಿಯಮಗಳು ನಿರ್ಭಂಧಗಳಿಲ್ಲದೆ ಈ ಸಹವಾಸ ಎಂಬ ಹೆಸರಿನಲ್ಲಿ ಕರೆಸಿಕೊಂಡು ಇಂದಿನ ಯುವ ಜನಾಂಗದಲ್ಲಿ ಹೆಚ್ಚು ಜನಪ್ರಿಯವಾಗುತ್ತಿರುವ ಸಹಜೀವನ ಒಂದು ರೀತಿಯಲ್ಲಿ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಗೆ ಸವಾಲಾಗಿ ಪರಿಣಮಿಸುತ್ತಿದೆ. ಮುಂದಿನ ತಲೆಮಾರುಗಳಿಗೆ ಕಂಡು ಬರಬಹುದಾದ ಕೌಟುಂಬಿಕ ಬದಲಾವಣೆಗಳ ಮುನ್ಸೂಚನೆಯಂತೆ ಇಂದು ಈ ಸಹವಾಸ ಪದ್ಧತಿ ಕಂಡುಬರುತ್ತಿದೆ.

ಆದರೆ ಈ ಕುಟುಂಬದ ಮಾದರಿಯಲ್ಲಿಯೂ ಇರಬಹುದಾದ ಸಂಘರ್ಷದ ಸ್ವರೂಪವನ್ನು ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯಲ್ಲಿ ಕಂಡುಬರುವ ಅಸ್ತಿತ್ವ ಕಳೆದುಕೊಳ್ಳುವ ಭಯವನ್ನು ಈ ಕಥೆಯಲ್ಲಿ ತರುವುದರ ಮೂಲಕ ಈ ಆಧುನಿಕ ವ್ಯವಸ್ಥೆ ಈಗಾಗಲೇ ಇರುವ ಕುಟುಂಬ ವ್ಯವಸ್ಥೆಗೆ ಪರ್ಯಾಯವಾಗಬಾರದು ಎಂಬುದನ್ನು ಈ ಕತೆ ಹೇಳುತ್ತದೆ.

ಕೊನೆಯ ದಾರಿ' ಕತೆಯ ಹೆಣ್ಣಿನ ಮತ್ತೊಂದು ಜೈವಿಕ ಬಯಕೆಯಿಂದ ಲೈಂಗಿಕತೆಯ ಮೇಲಿನ ಪುರುಷನ ನಿಯಂತ್ರಣವನ್ನು ಅಥವಾ ಅಧಿಕಾರವನ್ನು ಪ್ರಶ್ನಿಸುವಂಥದ್ದು. ಹೀಗೊಂದು ಕತೆಯಲ್ಲಿನ ಹೆಣ್ಣಿನ ಜೈವಿಕ ಬಯಕೆಯಾದ ತಾಯ್ತನದ ಮೇಲೆ ನಿಯಂತ್ರಣ ಸಾಧಿಸಲು ಬಯಸುವ ಸಮಾಜ ಕಟ್ಟಿಕೊಂಡ ಕೃತಿ ಪೊರೆಯಾದ ಮದುವೆಯನ್ನು ಧಿಕ್ಕರಿಸುವ ನಾಯಕಿಯ ಹಾಗೆಯೇ ಇಲ್ಲಿಯ ಲಿಲ್ಲಿಯ ತನು ಸಹಜಲೈಂಗಿಕ ಬಯಕೆಯ ಮೇಲೆ ಅಧಿಕಾರ ಹೊಂದಿರುವ ಪುರುಷ ವ್ಯವಸ್ಥೆಯ ನಿಯಂತ್ರಣ ಸಾಧನವಾದ ವಿವಾಹ ಬಂಧನ ಅದರ ಮೂಲಕ ಕೌಟುಂಬಿಕ ಬಂಧನವನ್ನು ನಿರಾಕರಿಸಿ ಅದನ್ನು ಮೀರಿ ಹೊರಬಂದವಳು ಹಾಗೆ ಅವಳು ಕುಟುಂಬದಾಚೆ ಬರಲುಕಾರಣ ಅವಳ ಗಂಡನ ಕುಡುಕುತನ, ಚಾರತನ ಹಾಗೂ ಅವನ ಕ್ರೂರ ಹಿಂಸೆಯೂ ಕಾರಣವಾದರೂ ತದನಂತರ ಎಂದೂ ಆ ರೀತಿಯ ಬಂಧನಕ್ಕೆ ಒಳಪಡಲು ಬಯಸದ ಲಿಲ್ಲಿಯ ಕುಟುಂಬದ ಒಳಗೆ ಸಿಗುತ್ತಿದ್ದ ಲೈಂಗಿಕ ತೃಪ್ತಿ ಯನ್ನು ಅದರಾಚೆಗೆ ಪಡೆಯಲು ಬಯಸುತ್ತಾಳೆ. ಮತ್ತು ಪಡೆಯುತ್ತಾಳೆ ಸಹ ಆದರೆ ಒಂದು ರೀತಿಯಲ್ಲಿ ಹೀಗೊಂದು ಕತೆಯ ನಾಯಕಿಯಂತೆ ಈಕೆಯೂ ಈ ರೀತಿಯ ಸಂಬಂಧಗಳ

ಮೂಲಕ ಬಯಸುವುದು ತಾಯ್ತನದ ಆಗಿರುತ್ತದೆ. ಇವರಿಬ್ಬರಿಗೂ ಅಸ್ತಿತ್ವದ ಸಮಸ್ಯೆಗಳೇ ಮುಖ್ಯವಾಗುತ್ತದೆಯೇ ಹೊರತು ನೈತಿಕತೆಯಲ್ಲ.

ಈ ಎರಡೂ ಕತೆಗಳಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆಯ ಅಧಿಕಾರ ಹಂಚಿಕೆಯ ಮೌಲ್ಯಗಳನ್ನು ಮೊಟಕುಗೊಂಡಿರುವ ಸ್ವಾತಂತ್ರ್ಯವನ್ನು ಪ್ರಶ್ನಿಸುತ್ತಿದ್ದಾರೆಯಾದರೂ ಆ ಮೂಲಕ ಈಗಾಗಲೇ ಸ್ವೀಕೃತಗೊಂಡಿರುವ ಕೌಟುಂಬಿಕ ವ್ಯವಸ್ಥೆಯನ್ನು ಪ್ರಶ್ನಿಸುವುದರಿಂದ ಇದ್ದ ಬದುಕನ್ನು ಹಾಗೇ ಒಪ್ಪಿಕೊಳ್ಳದೇ ಅದನ್ನು ಅಲ್ಲಾಡಿಸಿ ನೋಡಿಯೇ ಬಿಡೋಣ ಎನ್ನುವ ಪ್ರಯೋಗ ಮನೋಭಾವದ ಮೂಲಕ ಕೌಟುಂಬಿಕ ಪಲ್ಲಟಗಳನ್ನು ಚಿತ್ರಿಸಿದ್ದಾರೆ.

ಆ) ಪರಂಪರಾಗತ ಮಹಿಳೆ

ಇತಿಹಾಸ, ಸಂಸ್ಕೃತಿ ಈ ಪದಗಳಂತೆಯೇ ಪರಂಪರೆ ಎನ್ನುವುದು ವಿಶಾಲ ಅರ್ಥವ್ಯಾಪ್ತಿಯುಳ್ಳದ್ದು. ಇವೆಲ್ಲವೂ ಕಾಲಗರ್ಭದಲ್ಲಿ ಅಡಗಿರುವ ವಿಚಾರಗಳೇ ಇತಿಹಾಸದಲ್ಲಿ ಅಹಿತಕರ ಘಟನೆಗಳು ಇರಬಹುದು, ಸಂಸ್ಕೃತಿಯಲ್ಲಿ ಕುಸಂಸ್ಕೃತಿಗಳೂ ನುಸಳಿಕೊಂಡಿರಬಹುದು. ಹಾಗೆಯೇ ಪರಂಪರೆಯಲ್ಲೂ ದುಷ್ಟವಿಚಾರಗಳು ತಲೆದೋರಿರಬಹುದು. ಇವೆಲ್ಲವೂ ನಿಂತ ನೀರಿನಂತೆ ಅದರೊಳಗೆ ತಿಳಿನೀರೂ ಇರಬಹುದು. ರಾಡಿಯೂ ಇರಬಹುದು. ಇವುಗಳಲ್ಲಿ ಯಾವುದನ್ನು ಕೆದಕುವುದು ನಿಂತ ನೀರಿಗೆ ಕಲ್ಲೆಸೆದಂತೆ ತಿಳಿನೀರಿನ ತಳದಲ್ಲಿ ಇರುವ ಕಲ್ಮಶವನ್ನು ಹೊರಗೆ ಎಳೆಯುವ ಪ್ರಯತ್ನ ಮಾಡಲು ಶ್ರಮವಹಿಸಬೇಕು.

ಹಿಂದೊಮ್ಮೆ ಸಮಾಜ ಒಪ್ಪಿದ್ದರಿಂದ ಯಾವ ವಿಚಾರವನ್ನೇ ಆಗಲಿ ಪುನರ್‌ವಿಮರ್ಶಿಸಲು ಅಥವಾ ಅದಕ್ಕೆ ಹೊಸದೊಂದು ಆಯಾಮ ನೀಡಲು ಬಯಸುವ ಯಾರಿಗೇ ಆದರೂ ದಿಟ್ಟತನವಿರಬೇಕು. ಈಗ ನಮ್ಮ ಭಾರತೀಯ ಸಮಾಜದಲ್ಲಿ ಮಹಿಳೆಯರ ಬದುಕಿಗೆ ಸಂಬಂಧಪಟ್ಟಂತೆ ಪರಂಪರೆಯೊಂದು ಈಗಾಗಲೇ ಸೃಷ್ಠಿಯಾಗಿದೆ. ಭಾರತೀಯ ಸಂದರ್ಭದಲ್ಲಿ ಸಮಾಜದ ಯಾವುದೇ ವಿಚಾರಕ್ಕೆ ಸಂಬಂಧಪಟ್ಟಂತೆ ಪುರುಷರದೇ ಮೇಲುಗೈಯಾಗಿರುವಂತೆ ಈ ಪರಂಪರೆಯ ನಿರ್ಮಾಣದಲ್ಲಿ ಸ್ತ್ರೀಯರನ್ನು ಕುರಿತ ಪುರುಷ ಚಿಂತನೆಗಳೇ ಹೆಚ್ಚಾಗಿವೆ. ಇಂಥ ಪರಂಪರೆಯ ಸೃಷ್ಠಿಯಲ್ಲಿ ಮಹಿಳೆಯರು

ಏಕೆ ಭಾಗವಹಿಸಲಾಗಲಿಲ್ಲ ಎನ್ನುವುದಕ್ಕೆ ನೂರು ಜನ್ಮ ಇತಿಹಾಸದಲ್ಲಿ ಸಂಸ್ಕೃತಿಯಲ್ಲಿ ಕಾರಣಗಳನ್ನು ಹುಡುಕುತ್ತಾ ಹೋಗಬಹುದು. ಸಮಾಜದ ಕೆಳಗಿನ ಸ್ತರದಲ್ಲೇ ತಮ್ಮ ಚಟುವಟಿಕೆಗಳನ್ನು ನಡೆಸಬೇಕಾಗಿದ್ದ ಮಹಿಳೆಯರು ಸಮಾಜವೊಂದರ ನಿರ್ಮಾಣಕ್ಕೆ ಪೂರಕವಾಗುವ ಪರಂಪರೆಯ ವಿಚಾರದಲ್ಲೂ ಭಾಗವಹಿಸದೇ ಹೋಗಿದ್ದರಿಂದ ಅವರಿಗೇ ಸಂಬಂಧಪಟ್ಟ ವಿಷಯವೊಂದರಲ್ಲಿ ಅವರು ಹೊರತಾಗಿ ಉಳಿದರು ಎನ್ನಬಹುದು.

ಪ್ರಸ್ತುತ ಸಂದರ್ಭವು ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರ ಮೇಲೆ ಹೊರಲಾಗಿರುವ ಹಲವಾರು ವಿಚಾರಗಳು ಈಗ ಸವಕಲಾಗಿದ್ದು ಮಹಿಳೆಯರಿಗೆ ಸಂಬಂಧಪಟ್ಟಂತೆ ಹೊಸ ದೃಷ್ಟಿಕೋನವೊಂದನ್ನು ಸಮಾಜ ಹೊಂದಬೇಕಾಗಿರುವುದು ಅನಿವಾರ್ಯವಾಗಿದೆ. ಧರ್ಮ, ಸಂಪ್ರದಾಯ, ಪರಂಪರೆ, ಮೂಢನಂಬಿಕೆಗಳು ಇವುಗಳ ಹೊದಿಕೆಯಲ್ಲೇ ಅಡಗಿರುವಂಥ ಸ್ತ್ರೀಯರನ್ನು ಆ ಚಿಪ್ಪಿನಿಂದ ಮುಕ್ತರನ್ನಾಗಿಸಬೇಕಾಗಿದೆ. ಸಾಹಿತ್ಯದ ಬದುಕಿಗೆ ಸಮೀಪವೆನಿಸುವ ಕ್ರಿಯಾ ಸ್ತ್ರೀಯರ ಸಾಹಿತ್ಯ ಅತ್ಯಂತ ಫಲವತ್ತಾಗಿ ನಡೆದಿರುವ ಈ ಸಂದರ್ಭದಲ್ಲಿ ಮಹಿಳೆಯರು ಪರಂಪರೆಯನ್ನು ಬೆಂಬಲಿಸಲು ಅಥವಾ ಅದರಲ್ಲಿನ ತೊಡಕುಗಳನ್ನು ಬಯಲಿಗೆಳೆಯಲು ಕಥೆಗಳನ್ನು ಎಷ್ಟರ ಮಟ್ಟಿಗೆ ಬಳಸಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ.

ವೀಣಾರವರ ಕಥೆಗಳಲ್ಲಿನ ನಾಯಕಿಯರು ಪರಂಪರಾಗತ, ಅಸಮಾನತೆಗಳ ಬಗ್ಗೆ ಎಚ್ಚರವಿರುವ ತಮ್ಮ ಬದುಕಿನ ನಿರ್ಧಾರವನ್ನು ತಾವೇ ಕೈಗೊಳ್ಳುವ ಸಾಮರ್ಥ್ಯದ ದಿಟ್ಟ ನಿಲುವಿನವರು ಇವರ ಮೂಲಕ ಹೆಣ್ಣಿನ ಇತ್ಯಾತ್ಮಕ ಮಾದರಿಗಳನ್ನು ನಮ್ಮ ಮುಂದಿಡುತ್ತಾರೆ. ಇವರ ಹೀಗೊಂದು ಕಥೆ ಕಥಾನಾಯಕಿಯ ಸ್ವತಂತ್ರ ನಿಲುವನ್ನು ಪ್ರತಿಪಾದಿಸುವಂತೆಯೇ ಪುರುಷನ ಅಹಂ ಪ್ರಜ್ಞೆ ಎಲ್ಲಾ ಸಂದರ್ಭದಲ್ಲೂ ಪ್ರಕಟವಾಗದಿದ್ದರೂ ಸುಪ್ತವಾಗಿಯಂತೂ ಇದ್ದೇ ಇದ್ದು ತನಗೆ ಧಕ್ಕೆಯಾಗುವಾಗ ಹೇಗೆ ಎಲ್ಲಾ ಮುಖವಾಡಗಳನ್ನೂ ಕಿತ್ತೊಗೆದು ಮೇಲೆದ್ದು ನಿಲ್ಲುತ್ತದೆ ಎಂಬುದನ್ನು ಧ್ವನಿಸುತ್ತದೆ.

ಬಿಡುಗಡೆ'ಕಥೆಯ ನಾಯಕಿ ಕ್ರೂರಿಯೂ, ಅಹಂಕಾರಿಯೂ ಆದ ಗಂಡ ಸತ್ತಾಗ ಹೊರಗೆ ದುಃಖಿಸಿದಂತೆ ನಟಿಸಿದರೂ ಅಡುಗೆ ಮನೆಗೆ ಹೋಗಿ ಹಾಲು ಕುಡಿದು ಸ್ವಸ್ಥವಾಗಿ

ಮಲಗುತ್ತಾಳೆ. 'ಕೊನೆಯದಾರಿ'ಕಥೆಯಲ್ಲಿ ಪರಸ್ತ್ರೀ ಸಂಗಕ್ಕೆ ಹಾತೊರೆಯುವ ಪುರುಷರು, ಜವಾಬ್ದಾರಿ ಹೊರುವ ಸಂದರ್ಭದಲ್ಲಿ ಎಷ್ಟು ತರ್ಕಬದ್ಧವಾಗಿ ನುಣುಚಿಕೊಳ್ಳುತ್ತಾರೆ ಎಂಬುದನ್ನು ಕುತೂಹಲದಿಂದ ಗಮನಿಸುತ್ತ ತನಗೆ ತಕ್ಕ ಸಂಗಾತಿಯನ್ನು ಅರಸುತ್ತಾ ಹೋಗುವ ಮುಕ್ತ ನಿಲುವಿನ ಹೆಣ್ಣಿನ ಚಿತ್ರವಿದೆ. ಲೈಂಗಿಕ ವಿಷಯಗಳ ಬಗ್ಗೆ ಹೆಣ್ಣಿನ ಆಲೋಚನೆ ಯಾವ ರೀತಿ ಇರುತ್ತದೆ ಎಂಬುದರ ಒಂದು ದಿಟ್ಟ ಚಿತ್ರಣವೂ ಇದೆ.

'ಅತಿಥಿ' ಹೆಣ್ಣಿನ ಮನಸ್ಸಿನ ಅವಳ ನಿಲುವಿನ ಮತ್ತೊಂದು ಮಗ್ಗುಲನ್ನು ಅನಾವರಣಗೊಳಿಸುವ ಕಥೆಯಾಗಿದೆ. ತನ್ನ ಬದುಕಿನ ಯಾವುದೋ ಆದರ್ಶಕ್ಕಾಗಿ ಮದುವೆಯಾಗದೆ ಉಳಿದ ಪ್ರೊ. ಲೀಲಾವತಿ ಹಾಸ್ಟೆಲಿನ ವಾರ್ಡನ್ ಆದಾಗ ಹದಿಹರೆಯದ ಹೆಣ್ಣುಗಳ ಹೊಸ ಪ್ರಣಯ ಮುಗ್ಧತೆ, ಬದುಕಿನ ಚೆಲುವನ್ನು ಮೊಗೆದು ಕುಡಿಯುವಂತೆ ಅವರಾಡುವ ಚೆಲ್ಲಾಟಗಳು, ಜೀವಂತಿಕೆ, ಇವುಗಳನ್ನು ಕಂಡುಕಳೆದುಕೊಂಡ ತನ್ನ ಬದುಕಿನ ಕ್ಷಣಗಳಿಂದಾಗಿ ಹುಡುಗಿಯರ ಮೇಲೆ ಸೇಡು ತೀರಿಸಿಕೊಳ್ಳುವ 'ಸ್ಯಾಡಿಸ್ಟ್'ಗಳ ಕಥೆಯಾಗಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಯಾವುದೇ ಕೌಟುಂಬಿಕ ಪರಿವಲಯದಲ್ಲೂ ಗಟ್ಟಿಯಾಗಿ ಬೇರಿಳಿಯದ ಪ್ರೊ. ಲೀಲಾವತಿ ತನ್ನ ಬದುಕಿಗೆ ಅತಿಥಿಯಾಗಿ ಬಿಡುತ್ತಾಳೆ.

ಕೆಲವೊಮ್ಮೆ ಕೆಲವರು ಹೊಸದೇನನ್ನೋ ಸಾಧಿಸುತ್ತೇವೆಂಬ ಆದರ್ಶಗಳ ಭರವಸೆಗಳನ್ನು ಕೊಡುತ್ತಾ ಅಂಥ ಪರಿಸ್ಥಿತಿ ತಮ್ಮ ಜೀವನದಲ್ಲಿ ಅಥವಾ ತಮ್ಮ ಕುಟುಂಬಗಳಲ್ಲಿ ಬಂದಾಗ ಆ ಬಗ್ಗೆ ಯಾವ ರೀತಿಯ ಪ್ರತಿಕ್ರಿಯೆಯನ್ನು ತೋರಿಸದೇ ರೂಢಮೂಲವಾದ ಕಟ್ಟುಪಾಡುಗಳನ್ನೇ ಮತ್ತೇ ಮತ್ತೇ ಆಚರಣೆಗೆ ತರುತ್ತಿದ್ದಾಗ ಈ ಬಗ್ಗೆ ಪ್ರಶ್ನಿಸಿದರೆ ತಮ್ಮ ಜವಾಬ್ದಾರಿಯನ್ನು ಬೇರೆಯವರ ಹೆಗಲ ಮೇಲೆ ಜಾರಿಸಿ ತಮ್ಮ ಪಾತ್ರವೇನು ಇದರಲ್ಲಿ ಇಲ್ಲ ಎಂಬ ದೇಶಾವರಿಯ ನಗೆ ಚಟಾಕಿಯಲ್ಲಿ ತೋರಿಸಿ ಬಿಡುತ್ತಿದ್ದಾರೆ. ಇದಕ್ಕೆ ಮೂಲಕಾರಣ ''ಸ್ತ್ರೀಯರ ಪ್ರಗತಿ ವಿಮೋಚನೆ ಬಾಹ್ಯ ಜಗತ್ತಿನ ಬದಲಾವಣೆಗಳನ್ನು ಅವಲಂಬಿಸಿರುವಂತೆಯೂ ಸ್ತ್ರೀಯರ ಮಾನಸಿಕ ಜಗತ್ತಿನ ಪರಿವರ್ತನೆಗಳನ್ನು ಅವಲಂಬಿಸಿವೆ. ಪರಂಪರಾಗತವಾಗಿ ಬಂದು ಬೇರೂರಿದ ಮೂಲಕ

ಮೌಲ್ಯಗಳ ವಿನಾಶ ಹೊಸ ಮೌಲ್ಯಗಳ ಸ್ವೀಕಾರ ಒಂದು ಸಂಕೀರ್ಣ ಪ್ರಕ್ರಿಯೆ. ಆದರೆ ಈ ಪ್ರಕ್ರಿಯೆಯಿಲ್ಲದೆ ನಿಜವಾದ ಪರಿವರ್ತನೆ ಅಸಾಧ್ಯ. ಇಂಥದ್ದೊಂದು ಆಂತರಿಕ ಧೈರ್ಯ ಮೂಡದೇ ಇದ್ದಾಗ 'ನಾವು ಎಷ್ಟೇ ಮುಂದುವರೆದರೂ ಕ್ರಾಂತಿಯ ಮಾತನಾಡಿದರೂ ಸ್ವಾತಂತ್ರ್ಯ ಹಕ್ಕುಗಳ ಬಗ್ಗೆ ಹೋರಾಡಿದರು. ... ನಂ ದೇಶದಲ್ಲಿ ಯಾವಾಗ್ಲೂ ಗಂಡಸಿಗೊಂದು ಕಾಯ್ದೆ. ಹೆಂಗಸರಿಗೆ ಬೇರೆಯೇ ಒಂದು ಕಾಯ್ದೆ . ಒಂದು ಕೆಲಸದಲ್ಲಿ ಅದೆಷ್ಟೋ ಕೆಟ್ಟದ್ದಾಗಿರ್ಲಿ ಗಂಡಸು ಮಾಡಿದ್ರೆ ಸಮಾಜ ಆ ಕಡೆ ನೋಡೋ ದೃಷ್ಟೀನೇ ಬೇರೆ. ಅದೇ ಕೆಲ್ಸ ಒಂದು ವೇಳೆ ಹೆಂಗಸು ಮಾಡಿದ್ರೆ ಅದೇ ಸಮಾಜ ರಂಪಾಟ ಮಾಡಿ ಬಿಡುತ್ತೆ. ಮೇಲೇರಲು ಹೇಗೆ ಹೆಂಗಸಿಗೆ ಸ್ವಾತಂತ್ರ್ಯ ಇಲ್ಲವೋ, ಹಾಗೆಯೇ ತನಗೆ ಬೇಕೆಂದಾಗ ಕೆಟ್ಟು ಹೋಗಲು ಆಕೆಗೆ ಸ್ವಾತಂತ್ರ್ಯವಿಲ್ಲ. ತಪ್ಪು ಯಾರದೇ ಆಗಿದ್ದರೂ ಕೆಟ್ಟ ಹೆಸರು ಬರೋದು ಹೆಂಗಸಿಗೆ . ಗಂಡಸರು ಎನ್ನುವ ಅಭಿಪ್ರಾಯವಾಗಿದೆ. ಈ ಸ್ಥಿತಿ ಈ ಗತಿ ಈ ಬುದ್ದಿಯ ಭೂತಕಾಲ, ವರ್ತಮಾನದಲ್ಲೂ ಕಾಡುತ್ತಲೇ ಇದೆ. ಹೀಗೆ ಬಹುತೇಕ ಭೂತ ಹಿಡಿದವರೇ ಆಗಿ ಬಿಟ್ಟಿರುವುದರಿಂದ...ಭೂತದಿಂದ ಬಿಡುಗಡೆ ಪಡೆಯಲೆತ್ನಿಸುವವರನ್ನು ಅಸ್ಪೃಶ್ಯರಂತೆ ಕಾಣುತ್ತಾ ಅಂಥವರಿಂದ ತಮ್ಮನ್ನು ತಮ್ಮ ಮಕ್ಕಳನ್ನು ದೂರವಿಡುತ್ತಿದ್ದಾರೆ. ಆಚರಣೆಗೆ ತರುವುದಿರಲಿ ಆ ಬಗ್ಗೆ ಯೋಚಿಸುವುದು ಪಾಪಿಕಾರ್ಯ ಎಂಬ ಭೀತಿ ಮಡಿವಂತಿಕೆಯನ್ನು ತುಂಬುತ್ತಿದ್ದಾಗ ಹಾಗೆಯೇ ಅಶ್ಲೀಲತೆಯ ಲೇಪನವನ್ನು ದಟ್ಟವಾಗಿ ಹಚ್ಚಿ ಬಿಟ್ಟಿದ್ದಾರೆ.

ಹಾಗಿದ್ದಂತೆ ಹೆಣ್ಣಿನ ಅಂತರಂಗದಲ್ಲಿ ಗಂಡಸಿನಂತೆ ಆಸೆ-ಆಕಾಂಕ್ಷೆಗಳು ಇಲ್ಲವೇ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸುವ ಛಲ ಇಲ್ಲವೇ ? ಆತ್ಮವಿಶ್ವಾಸವಿಲ್ಲವಾ ಈ ಎಲ್ಲಾ ಇಲ್ಲವೇಗಳು 'ಇವೆ' ಎಂದಾದರೂ ಅವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಮಡಿವಂತಿಕೆ ಏಕೆ ? ಕೊನೆ ಪಕ್ಷ ಕಥೆ - ಕಾದಂಬರಿಗಳಲ್ಲಿ ತರುವ ಪ್ರಯತ್ನ ಮಾಡಿ ಅದನ್ನು ಓದುಗರಿಗೆ ಮುಟ್ಟಿಸಬಹುದಲ್ಲವೇ ? ಇಲ್ಲೂ ಕೂಡ ಸೀಮಾ ರೇಖೆಯೂ...ಹೆಣ್ಣಿನ ಬೆತ್ತಲೆಯ ಅಂತರಂಗವನ್ನು ದಾಖಲಿಸುವುದಾಗಿದೆ.

ಪರಂಪರಾಗತ ನಂಬಿಕೆಗಳ ಮೌಲ್ಯಗಳ ಚಿಪ್ಪಿನೊಳಗೆ ಹುದುಗಿಕೊಳ್ಳದೇ ತೆರೆದಿಟ್ಟ ಮನಸ್ಸು, ತೆರೆದಿಟ್ಟ ಬದುಕು ಇವನ ಚಾವಡಿಗೆ ತರುವ ಕೆಲಸ ಈ ಕಥೆಗಳ ಸ್ವರೂಪದಾಗಿದೆ.

ಮಹಿಳೆ ಆಧುನಿಕ ಜಗತ್ತನ್ನು ಸ್ವೀಕರಿಸಿದ್ದರೂ ಸಹ ಪರಂಪರೆಯನ್ನು ಬಿಟ್ಟು ಬದುಕುವ ಕಲೆಯನ್ನು ಕಲಿತಿಲ್ಲ. ವಸ್ತುವಿಗೆ ಹಿನ್ನೆಲೆಯಿದ್ದಾಗ ಮಾತ್ರ ಅದು ರೂಪ ತಾಳುತ್ತದೆ. ಹಾಗಾಗಿ 'ಹೆಣ್ಣು' ಕೂಡ ಪರಂಪರೆ ಎಂಬ ಹಿನ್ನೆಲೆಯಿಂದಲೇ ಬಂದವಳು ಅದು ಅವಳು ಒಪ್ಪಿಕೊಂಡಿರುವ ಆಧುನಿಕತೆ ಎಷ್ಟರ ಮಟ್ಟಿಗೆ ಸೂಕ್ತ ಎಂಬುದನ್ನು ಕಥೆಯ ಸ್ವರೂಪದಲ್ಲಿ ಅರಿಯಬಹುದಾಗಿದೆ.

ಇ) ಉದ್ಯೋಗಸ್ಥ ಮಹಿಳೆ

ಕಥೆಗಳಲ್ಲಿ ಕಾಣಿಸಿಕೊಳ್ಳುವ ಬಹುತೇಕ ಹೆಣ್ಣುಗಳು ಹೊರಗೆ ಹೋಗಿ ಉದ್ಯೋಗ ಮಾಡುವವರು. ಇವರು ಮುಂಬೈಯಂತಹ ನಗರದಲ್ಲಿ ಬದುಕುತ್ತಿರುವವರು. ಇಂದು ಆಧುನಿಕ ಸಮಾಜದಲ್ಲಿ ದುಡಿಯುವಂತಹ ಉದ್ಯೋಗಸ್ಥ ಮಹಿಳೆಯ ಬದುಕು ಅನುಭವಿಸುವವಳಿಗಷ್ಟೇ ನಿಲುಕುತ್ತದೆ. ಅಂತಹ ಹೆಣ್ಣು ತನ್ನ ಸಂಸಾರದಲ್ಲಿ ದುಡಿಯುವುದು ಅನಿವಾರ್ಯ. ವಿಪರ್ಯಾಸವೆಂದರೆ ತನ್ನ ಕುಟುಂಬದಲ್ಲಿ ದುಡಿಯುವ ದುಡಿಮೆ ದಾಖಲಾಗುವುದಿಲ್ಲ. ಕಾರಣ ಆಕೆ ಆರ್ಥಿಕವಾಗಿ ದುರ್ಬಲಳು. ಸಮಾಜ ಗುರುತಿಸುವ ರೀತಿಯಲ್ಲಿ ಹೇಳುವುದಾದರೆ ಆರ್ಥಿಕವಾಗಿ ಸ್ವಾವಲಂಭನೆಯನ್ನು ಪಡೆದಿರುವಾಕೆಯೇ ನಿಜವಾದ ಉದ್ಯೋಗಸ್ಥ ಮಹಿಳೆ.

ಈ ನಿಟ್ಟಿನಲ್ಲಿ ಬಹುತೇಕ ನಾಯಕಿಯರು ಇವರ ಬದುಕಿನ ಬವಣೆ, ಸಮಾಜ, ಕುಟುಂಬ, ಅವಳ ಅಂತರ್ಮುಖತೆ ವಾಸ್ತವ ಪ್ರಜ್ಞೆ ಇವೆಲ್ಲವೂ ಅವಳನ್ನು ಸುತ್ತುವರಿದಿದೆ. ಇಂತಹ ಹಲವು ಮುಖಗಳ ಮಜಲುಗಳನ್ನು ಗುರುತಿಸುವ ಕೆಲಸ ಇದರದಾಗಿದೆ.

ಮುಳ್ಳುಗಳು ಕತೆಯ ನಾಯಕಿಯಾದ ಶಾಂತ ಕಾಲೇಜಿನಲ್ಲಿ ಪ್ರಾಧ್ಯಾಪಕಿ. ಲಗ್ನವಾಗದ ಲಗ್ನಕ್ಕೆ ಕಾತರಳಾಗಿ ನಿಂತವಳು. ತನ್ನ ಜೀವನವನ್ನು ಆರ್ಥಿಕವಾಗಿ ನಿಭಾಯಿಸುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುವವಳು. ಹಾಗೆಯೇ ದಾಂಪತ್ಯದ ಜೀವನವನ್ನು ಹಂಬಲಿಸುತ್ತಿರುವಳು. ಇಲ್ಲಿ ಆಯ್ಕೆಯ ಪ್ರಶ್ನೆ ಜೀವನದ ನಿರ್ಧಾರವನ್ನು ತಿಳಿಸುತ್ತದೆ.

'ಅತಿಥಿ' ಕಥೆಯ ನಾಯಕಿ ಪ್ರೊ. ಲೀಲಾವತಿ ಹಾಸ್ಟೆಲಿನ ವಾರ್ಡನ್‌ಆಗಿದ್ದು ಅವಿವಾಹಿತಯಾಗಿದ್ದಾಳೆ. ತನ್ನ ಮಹತ್ವಾಕಾಂಕ್ಷೆಗಾಗಿ ತಾರುಣ್ಯದಲ್ಲಿ ವಿವಾಹವನ್ನು ಧಿಕ್ಕರಿಸಿ

ವಯಸ್ಸು ಮೀರಿದಾಗ ವಿವಾಹದ ಅಪೇಕ್ಷೆಯನ್ನು ಹೊಂದಿ ಯೌವ್ವನದ ಆಸೆ ಆಕಾಂಕ್ಷೆಗಳು ಅವಳಲ್ಲಿ ಮೂಡುತ್ತವೆ.ಆದರೆ ಸಂದರ್ಭವು ಮೀರಿರುತ್ತದೆ. ಉದ್ಯೋಗವನ್ನು ಪಡೆದು ಸಮಾಜ ಗದುರುತಿಸುವಲ್ಲಿ ಆಕೆ ಗೆಲುವು ಸಾಧಿಸಿದ್ದಾರೂ ಸಹ ವೈಯಕ್ತಿಕ ಜೀವನದಲ್ಲಿ ಸೋಲನ್ನು ಅನುಭವಿಸುತ್ತಾಳೆ. ಸಭೆ ಸಮಾರಂಭಗಳಿಗೆ ಅತಿಥಿಯಾಗಿ ಹೋಗಿ ತನ್ನೆಲ್ಲಾ ದೃಷ್ಟಿಕೋನದಲ್ಲಿ ವಿಡಂಬನೆ ಸಹಾನುಭೂತಿಗಳ ಸಮತೋಲನವನ್ನು ಹೇಳಿ ಸಮಾಜವನ್ನು ಟೀಕಿಸುವ ಧೈರ್ಯ ಹೊಂದಿದ್ದರೂ ತನ್ನ ಜೀವನದಲ್ಲಿ ತನ್ನ ಅಸ್ತಿತ್ವವೇನು ಎಂಬ ಪ್ರಶ್ನೆಗೆ ಉತ್ತರ ಮೂಡಿಸುವ ಧೈರ್ಯ ಇವಳಲ್ಲಿ ಕಾಣದೇ ಇರುವುದು ಇವಳ ವೈಫಲ್ಯಕ್ಕೆ ಕಾರಣವಾಗಿದೆ.

ಒಂದು ರವಿವಾರ ಕಥೆಯಲ್ಲಿನ ನಾಯಕಿಯು ರೇಖಾ ವೃತ್ತಿಯಲ್ಲಿ ಟೈಪಿಸ್ಟ್. ಈಕೆಯ ಜೊತೆಗಾರ್ತಿಯರು ಶಾಂತ, ಗಿರಿಜ ವಿದ್ಯಾರ್ಥಿನಿಯರು. ಇವರು ಒಂದೇ ರೂಮಿನಲ್ಲಿ ವಾಸವಾಗಿದ್ದು, ಹೆಣ್ಣು ವಿದ್ಯಾರ್ಥಿಯಾಗಿದ್ದಾಗ ಅವಳ ಚಟುವಟಿಕೆ ಅದೇ ಹೆಣ್ಣು ಉದ್ಯೋಗಸ್ಥೆಯಾದಾಗ ಬದಲಾಗುವ ಚಟುವಟಿಕೆಗೆ ತುಂಬಾ ವ್ಯತ್ಯಾಸವಿರುತ್ತದೆ. ಆಕೆಗೆ ಜವಾಬ್ದಾರಿ ನೀಡಿ ಕರ್ತವ್ಯಗಳು ಹೆಚ್ಚುತ್ತವೆ. ಅಂತಹ ವ್ಯಕ್ತಿತ್ವ ರೇಖಾಳದು. ಆದರೆ ವಿದ್ಯಾರ್ಥಿನಿಯರೇ ಆಗಿರುವ ಶಾಂತ ಗಿರಿಜಾರು free ಆಗಿರುವುದನ್ನು ನೋಡಿ ತನ್ನ ಮನಸ್ಸಲ್ಲೇ ಟೀಕಿಸುವುದು ಅವರ ರೀತಿಯಲ್ಲಿ ಆರಾಮಾಗಿ ನಾನು ಇರುವುದಕ್ಕೆ ಆಗುವುದಿಲ್ಲವೆಂದು ಕೊಳ್ಳುವುದು ಅವರು ಹುಡುಗರ ಜೊತೆ ಸುತ್ತಾಡುವುದನ್ನು ನೋಡಿ ಮನದಲ್ಲಿಯೇ ಶಾಪ ಹಾಕುವುದು ಅವಳ ಮನಸ್ಥಿತಿಯ ದೋಷವಾಗಿದೆ. ಹಾಗೆಯೇ ತಾನು ಸ್ವಾವಲಂಭಿ, ಯಾರ ಅಧೀನಳೂ ಅಲ್ಲ, ನನ್ನನ್ನು ನಾನು ನಿಭಾಯಿಸಿಕೊಳ್ಳುವ ಧೈರ್ಯ ನನಗಿದೆ. ನಾನು ಆರ್ಥಿಕವಾಗಿ ಸ್ವಾವಲಂಭಿ ಎಂದುಕೊಂಡು ತನ್ನನ್ನು ತಾನೇ ಸಮರ್ಥಿಸಿಕೊಳ್ಳುತ್ತಾಳೆ.

'ತಾರಾ ಮೇಡಂ ಮತ್ತು ತತ್ವಗಳು' ಕಥೆಯಲ್ಲಿನ ನಾಯಕಿ ತಾರಾ ಮೇಡಂ ಎಂದೇ ಪ್ರಖ್ಯಾತಿ ಹೊಂದಿರುವಂತವಳು. ಈಕೆ ತನ್ನ ಲೆಕ್ಚರಿನಿಂದ ಎಲ್ಲರನ್ನು ಟೀಕಿಸುವ ಆರೋಪಿಯ ಸ್ಥಾನದಲ್ಲಿ ನಿಲ್ಲಿಸುವವಳೂ ಆಗಿದ್ದಾಳೆ. ಈಕೆ ತಪ್ಪು ಮಾಡಿದ ವ್ಯಕ್ತಿಯನ್ನು ಪಕ್ಷಪಾತವಿಲ್ಲದೆ

ಕಟಕಟೆಯಲ್ಲಿ ನಿಲ್ಲಿಸುತ್ತಾಳೆ. ಆದರೆ ತಾರಾ ಮೇಡಂ ಹೆಣ್ಣಿಗೆ ಸ್ವಾತಂತ್ರ್ಯ ಬೇಕೆಂದೇ ಘೋಷಿಸುತ್ತಾ ಹೆಣ್ಣನ್ನು ಶೋಷಣೆ ಮಾಡುವುದೇ ಇವಳ ತತ್ವವಾಗಿದೆ. ಇಂತಹ ಮನಸ್ಥಿತಿಯಿಂದ ದೃಢವಾದ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗದೆ ಕೇವಲ ತತ್ವಗಳಿಗಷ್ಟೇ ಬದ್ಧಳಾಗಿರುತ್ತಾಳೆ. ಇಂತಹ ಮನಸ್ಥಿತಿಯ ಹೆಣ್ಣು ತನ್ನ ಬದುಕಿನ ಸಹಜತೆಯ ಮೌಲ್ಯಗಳನ್ನು ಕಳೆದುಕೊಳ್ಳುತ್ತಾ ತಾನೊಬ್ಬಳೇ ಉದ್ಯೋಗಸ್ಥೆ ಎಂದು ಹೇಳಿಕೊಂಡು ತನ್ನ ಉದ್ಯೋಗದಿಂದಲೇ ಅತೃಪ್ತಿಯ ಭಾವವನ್ನು ಹೊಂದುತ್ತಾಳೆ.

'ನೆರಳು'ಕತೆಯಲ್ಲಿನ ವಯಸ್ಸಾದ ಮುದುಕಿ 'ಅವ್ವ' ತನ್ನ ಕೊನೆಯ ದಿನಗಳನ್ನು ತನ್ನ ಮಗಳು ಮಾಲತಿಯ ಮನೆಯಲ್ಲಿ ಕಳೆಯುತ್ತಾಳೆ. ಈಕೆ ವೃತ್ತಿಯಲ್ಲಿ ಟೀಚರ್ ಆಗಿದ್ದವಳು. ಈಕೆ ತಾನು ದುಡಿಯುವ ಹಂತದಲ್ಲಿ ಎಲ್ಲರನ್ನು, ಎಲ್ಲವನ್ನು ನಿಭಾಯಿಸುವವಳಾಗಿದ್ದಳು. ವಯಸ್ಸಾದ ಮೇಲೆ ಇನ್ನೊಬ್ಬರ ಹಂಗಿನಲ್ಲಿ ಬದುಕುವ ಪರಿಸ್ಥಿತಿ ಬಂತೆಂದು ತನ್ನಲ್ಲೇ ಕೊರಗುತ್ತಾಳೆ. ಆದರೆ ಮಗಳು ಮಾಲತಿ ತನ್ನ ಅವ್ವನನ್ನು ಎಂದೂ 'ಹೊರೆ ' ಎಂಬ ದೃಷ್ಟಿಯಿಂದ ನೋಡಿದವಳು ಅಲ್ಲವೇ ಅಲ್ಲ. ಆದರೂ ಅವ್ವ ವೃತ್ತಿಯಲ್ಲಿದ್ದಾಗ ಹೊಂದುತ್ತಿದ್ದ ತೃಪ್ತಿ ಇಂದು ಅವಳ ಪಾಲಿಗಿಲ್ಲ. ಆದರೂ ಈಗ ಅವಳ ಬಿಡುವಿನ ವೇಳೆಯೂ ಅವಳ ಮನಸ್ಸಿನಲ್ಲಿನ ಪ್ರಶ್ನೆಗೆ ಉತ್ತರ ಸಿಗದೆ ಮೂಕವಾಗಿದೆ.

ಸುಶಿಕ್ಷಿತೆಯಾದ ನೌಕರಿಗೆಂದೇ ಬಂದು ಮುಂಬಯಿ ಸೇರಿದ ಮಲೆನಾಡು ಪ್ರದೇಶದ ನಾಯಕಿ. ಡೆಲ್ಲಿಯಿಂದ ನೌಕರಿಗೆಂದು ಬಂದು ಸೇರಿದವನ ಜೊತೆ ಪರಸ್ಪರ ಸ್ನೇಹಸಂಪರ್ಕ. ಇವರ ಸಂಬಂಧವು ಯಾರೂ ಗುರುತಿಸಲಾರರು. ಇವರಿಬ್ಬರೂ ಒಂದೇ ಸೂರಿನಡಿ ವಾಸವಾಗಿದ್ದರು. ಇವರ ಬದುಕಿನಲ್ಲಿ ಒಬ್ಬರಿಗೊಬ್ಬರಿಗೂ ಬೇಡಿಕೆ, ನಿರೀಕ್ಷೆ, ಅಪೇಕ್ಷೆ ಎಂದೂ ಇರಲಿಲ್ಲ. ಹಾಗೆಯೇ ಇನ್ನೊಬ್ಬರು ಇವರ ಬಗ್ಗೆ ಇಲ್ಲಸಲ್ಲದ ಮಾತುಗಳನ್ನಾಡಿದರೂ ತಲೆ ಕೆಡಿಸಿಕೊಳ್ಳದ ಇವರು ತಮ್ಮ ಜೀವನದ ಹಾದಿಯನ್ನು ಸುಗಮವಾಗಿ ಸಾಧಿಸುತ್ತಿದ್ದರು. ಮುಂದೊಂದು ದಿನ ಹತ್ತು ವ ರ್ಷಗಳು ಕಳೆದಾಗ ಆಕೆಯ ಗರ್ಭದಲ್ಲಿ ಹೊಸ ಜೀವದ ಮಿಸುಕಾಟ ಉಂಟಾದಾಗ ಆಕೆಗೆ ಪ್ರಶ್ನೆಗಳು ಮೂಡುತ್ತವೆ. ಆತ ಗರ್ಭಪಾತ ಮಾಡಿಸಲು ಸಿದ್ಧನಾಗುತ್ತಾನೆ. ಆಕೆ ತಾಯ್ತನದ ಸುಖಕ್ಕೆ ಸಿದ್ಧಳಾಗುತ್ತಾಳೆ.

ಇವರ ನಡುವೆ ವಿಷಯ ದ್ವಂದ್ವಕ್ಕೆ ಎಡೆಮಾಡಿಕೊಡುತ್ತದೆ. ಆದರೂ ದೃತಿಗೆಡದೆ ಛಲದಿಂದ ನಿಭಾಯಿಸುವಾಕೆ ದಿಟ್ಟತನವನ್ನು ಹೊಂದಿರುವಾಕೆ. ಇದಕ್ಕೆಲ್ಲ ಅವಳ ನಾಗರೀಕ ಜೀವನ ಅವಳ ಮನಸ್ಥಿತಿಯನ್ನುಗುರುತಿಸುತ್ತದೆ.

ಹೀಗೆ ಕಥೆಗಳಲ್ಲಿನ ಹೆಣ್ಣುಗಳು ಬಹುತೇಕ ಉದ್ಯೋಗಸ್ಥೆಯರಾಗಿದ್ದಾರೆ. ಇವರು ಮುಂಬಯಿಯಂತಹ ನವ ನಾಗರೀಕ ಜಗತ್ತಿನಲ್ಲಿ ಬದುಕುತ್ತಿರುವವರು. ಸುಶಿಕ್ಷಿತರು, ಧೈರ್ಯವಂತೆಯರು ಹೀಗಾಗಿ ತಮ್ಮ ಬದುಕಿನ ನಿರ್ಧಾರವನ್ನು ತಾವೇ ಕೈಗೊಳ್ಳುವಂತಹವರು. ಸಹಜವಾಗಿ ಇವರ ಆಲೋಚನೆ ನಡವಳಿಕೆಯ ಮೇಲೆ ಪಾಶ್ಚಾತ್ಯ। ಪ್ರಭಾವ ಆಗಿರುವಂತದ್ದೇ. ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ತಾವೇ ಅರ್ಥಮಾಡಿಕೊಳ್ಳಬಲ್ಲವರು. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಸ್ವಾವಲಂಭಿಗಳಾಗಿದ್ದಾರೆ. ಹೀಗಾಗಿ ಬದುಕನ್ನು ಧೈರ್ಯದಿಂದ ಎದುರಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ.

ಅಧ್ಯಾಯ-೫

ಉಪಸಂಹಾರ

'ಕಾಲ ಮತ್ತು ಮನುಷ್ಯನ ಸಂಬಂಧ ವಿಶಿಷ್ಟವಾದದ್ದು ಕಾಲದೊಳಗೆ ಮನುಷ್ಯ, ಮನುಷ್ಯನೊಳಗೆ ಕಾಲ, ನೆಲೆಯೂರಲು ನಡೆಸುವ ಪ್ರಯತ್ನಗಳ ಪ್ರಕ್ರಿಯಾ ರೂಪವೇ ಬದುಕು. ಈ ಬದುಕಿನೊಳಗೆ ಭೂತ, ವರ್ತಮಾನ ಭವಿಷ್ಯತ್‌ಗಳು ಅಡಕವಾಗಿರುತ್ತವೆ. ಭೂತದ ಬುತ್ತಿ ಹೊತ್ತು ವರ್ತಮಾನ ಹುಟ್ಟಿ ಬರುತ್ತದೆ. ವರ್ತಮಾನದ ಆಶಯ, ಆಶಾವಾದವನ್ನು ಹೊತ್ತು ಭವಿಷ್ಯತ್ ಬದುಕಿನ ಪ್ರತೀಕವಾಗುತ್ತದೆ. ಈ ಕಾಲದೊಳಗೆ ಪ್ರವೇಶಿಸಿ ಮತ್ತೆ ಅಲ್ಲಿಂದ ಹೊರಬರಲು ನಡೆಸುವ ಎಲ್ಲಾ ರೀತಿಯ ಕ್ರಿಯೆ, ಪ್ರಕ್ರಿಯೆಗಳಲ್ಲಿ ಸಂವೇದನೆಯ ನೆಲೆಯೊಂದು ನಿರ್ಮಾಣವಾಗುತ್ತದೆ. ಈ ಸಂವೇದನೆಯಲ್ಲಿ ನೋವು-ನಲಿವು, ಸುಖ-ದುಃಖ, ನೀತಿ-ಅನೀತಿ, ನ್ಯಾಯ-ಅನ್ಯಾಯ, ಮೇಲು-ಕೀಳು, ತಾರತಮ್ಯತೆ ಇನ್ನೂ ಅಸಂಖ್ಯಾತ ವಿವರಗಳ ಗುಚ್ಛ. ಈ ಗುಚ್ಛಗಳಲ್ಲಿ ಒಂದಲ್ಲ ಒಂದು ರೀತಿಯ ಮೌಲ್ಯಗಳು ಕಾಣಿಸುತ್ತದೆ. ಜೀವನದಲ್ಲಿ ಇಂತಹ ಮೌಲ್ಯಗಳು ಹಲವಿದೆ. ಹಲವಾರು ರೂಪಗಳಲ್ಲಿವೆ ಇವುಗಳೇ ಸಾಹಿತ್ಯದ ವಸ್ತು ಇವುಗಳ್ನು ಸಂವೇದನೆಗೆ ತಂದು ಕೊಡವುದು ಸಾಹಿತ್ಯದ ಗುರಿ.

ಹೀಗೆ ಸಂವೇದನೆಗೆ ತಂದುಕೊಡುವುದು ಸಾಹಿತ್ಯದ ಗುರಿಯಾದರೂ ಮನುಷ್ಯ ವ್ಯಕ್ತಿಯೊಬ್ಬ ತನ್ನ ಅನುಭವದ ಮಿತಿಯೊಳಗೆ ವಸ್ತುವಿಗೊಂದು ಆಕಾರ ಕೊಡುವುದನ್ನು ಗುರುತಿಸಬಹುದಾಗಿದೆ. ಅಂದರೆ ಅವರವರ ಕಾಣ್ಕೆಗೆ ಅನುಗುಣವಾಗಿ ಮೌಲ್ಯಗಳನ್ನು ಪ್ರತಿಪಾದಿಸುವಾಗ ಆ ಅನುಭವಗಳ ಮೌಲ್ಯಗಳ ಮಿತಿಯೂ ಆಗುವುದನ್ನು ಗುರುತಿಸಬಹುದು. ಆಗ ಮೌಲ್ಯದ ರೀತಿಗಳು ಬದಲಾಗುತ್ತವೆಯೇ ಹೊರತು ಮೌಲ್ಯಗಳಲ್ಲ ಎಂಬುದನ್ನು ಗಮನಿಸಬಹುದು. ಈ ಮುಖಗಳೇ ಸಾಹಿತ್ಯದ ವಸ್ತುವಾಗಿ ಪರಿಣಮಿಸುತ್ತದೆ. ಹೀಗೆ ಮೌಲ್ಯಗಳು ಸಾಹಿತ್ಯದ ವಸ್ತುಗಳಿಂದಾಗಿ ಇವು ಕಥೆಯ ಮೂಲಕ ಹೊರಜಗತ್ತಿನಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತವೆ.

‘ವೀಣಾ ಶಾಂತೇಶ್ವರ’ ಅವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು’ ಈ ಲೋಕದೊಳಗೆ ಪ್ರವೇಶ ಪಡೆಯುವಲ್ಲಿ ಮೊದಲಿಗೆ ಮಹಿಳಾ ಕಥಾ ಸಾಹಿತ್ಯದ ಹುಟ್ಟು, ಬೆಳವಣಿಗೆಯ ವಿವಿಧ ಹಂತಗಳನ್ನು ಗುರುತಿಸುವ ಕೆಲಸ ಇಲ್ಲಾಗಿದೆ. ಮುಂದೆ ಅಧ್ಯಯನದ ವರ್ಗೀಕರಣವನ್ನು ಮಾಡಿಕೊಳ್ಳುವುದರ ಮೂಲಕ ಕಥೆಗಳಲ್ಲಿನ ಹೆಣ್ಣು ವ್ಯಕ್ತಿಗತವಾಗಿ ವಿಕಾಸವಾಗುತ್ತಾ ಬಂದ ಪರಿಯನ್ನು ಗುರುತಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ‘ಮಹಿಳಾ ಕಥಾಸಾಹಿತ್ಯ’ ದ ಸ್ವರೂಪ ಮತ್ತು ಲಕ್ಷಣವನ್ನು ತಿಳಿಸಿಕೊಡುವ ಪ್ರಯತ್ನ ನಡೆದಿದೆ. ಕಥೆ ಹೆಣ್ಣಿಗೆ ಪ್ರಿಯವಾದ ಅಭಿವ್ಯಕ್ತಿ ಮಾಧ್ಯಮವಾಗಿದೆ. ಹೆಣ್ಣು ಬರೆಯಬಲ್ಲಳೇ ? ಎಂಬ ಪ್ರಶ್ನೆ ಇಂದು ಹಾಸ್ಯಾಸ್ಪದವಾಗಿ ಕಾಣಬಹುದು. ಆದರೆ ಈ ಶತಮಾನದ ಪ್ರಾರಂಭದಲ್ಲಿ ಇಂಥ ಪ್ರಶ್ನೆಗಳನ್ನು ಕೂಡ ಅವಳು ಎದುರಿಸಬೇಕಾಯಿತು ಎನ್ನುವುದು ವಾಸ್ತವ ಸತ್ಯ. ಹೆಣ್ಣು ಲೇಖನ ಕ್ರಿಯೆಗೆ ಅನರ್ಹರೆಂದೂ ಹೆಣ್ಣಿಂದ ಇಂತಹ ಗ್ರಂಥಗಳು ಎಂದಿಗೂ ಬರೆಯಲ್ಪಡಲಾರವೆಂದು ಅದೇ ಸುಶಿಕ್ಷಿತರಾದ ಪುರುಷರೇ ಇದನ್ನು ಹೀಗೆ ಸ್ತ್ರೀ ಕರ್ತೃತ್ವದಲ್ಲಿ ಹೊರಡುವಂತೆ ಗುಪ್ತವಾಗಿದ್ದು ಪ್ರಚಲಿಸುತ್ತಿರುವರೆಂದೂ ಇನ್ನೂ ಹಲವು ಸಂದೇಹಗಳಿಂದ ಹುಚ್ಚು ಹುರುಳಾಗಿ ಹೇಳುತ್ತಿದ್ದಾರೆ. ನಮ್ಮ ಸಮಾಧಾನವಿಷ್ಟೆ. ಸಂಶಯ ರೋಗಕ್ಕೆ ಚಿಕಿತ್ಸೆಯಿಲ್ಲ ಪ್ರಯತ್ನ ಮತ್ತು ಅಭ್ಯಾಸಗಳಿಗೆ ಅಸಾಧ್ಯವಾದ ಕೆಲಸಗಳು ಪ್ರಾಯಶಃ ಇರಲಾರವು. ಪುರುಷನಿಗೆ ಇರುವಷ್ಟು ಮೇಧಾಶಕ್ತಿ ಪ್ರತಿಭಾ ಸಂಪನ್ನತೆಗಳು ಸ್ತ್ರೀಯರಲ್ಲಿಯೂ ಸ್ವಾಭಾವಿಕ ಗುಣಗಳಾಗಿದ್ದು ಕೆಲವು ಸಂದರ್ಭಗಳಲ್ಲಿ ಅಧಿಕತರವಾಗಿಯೂ ಕೌಶಲದಂತೆ ಹೊರಹೊಮ್ಮುವುದೂ ಉಂಟ’ ಎಂದು ಹೇಳಿ ಮಹಿಳಾ ಸಾಹಿತ್ಯಕ್ಕೆ ನಾಂದಿ ಇಟ್ಟ ಶ್ರೀಮತಿ ತಿರುಮಲಾಂಬಾ ಸಮರ್ಥವಾಗಿಯೂ ಇಂಥ ಆಕ್ಷೇಪಗಳನ್ನು ತಳ್ಳಿ ಹಾಕಿದರು. ಇವರಿಂದ ಪ್ರಾರಂಭಗೊಂಡ ಮಹಿಳಾ ಕಥಾ ಸಾಹಿತ್ಯವು ನವ್ಯದ ಸಂದರ್ಭದವರೆಗೂ ಇಲ್ಲಿ ವಿವರಣೆಯಿದೆ.

ಎರಡನೇ ಅಧ್ಯಾಯದಲ್ಲಿ ಹೆಣ್ಣು ತನ್ನ ಅಸ್ತಿತ್ವಕ್ಕಾಗಿ, ವ್ಯಕ್ತಿತ್ವಕ್ಕಾಗಿ ಹೋರಾಡುವ ಹಾದಿಯನ್ನು ಗುರುತಿಸಬಹುದು. ಹೆಣ್ಣಿನ ‘ಆಯ್ಕೆ’ಯ ವಿಚಾರಣೆ ಬಗ್ಗೆ ಮಾತಾಡುತ್ತದೆ.

ಹೆಣ್ಣನ್ನು ಬಲವಂತವಾಗಿ ಬಂಧಿಸಿರುವ ಪುರುಷ ಜಗತ್ತಿನ ಲೈಂಗಿಕ ಸ್ವಾಮ್ಯವನ್ನು ತನ್ನ ಆಯ್ಕೆಯ ನೆಲೆಯಲ್ಲಿ ಒಡೆಯ ಹೊರಟ ಹೆಣ್ಣಿನ ಹೋರಾಟವನ್ನು ನಿರೂಪಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಾಯ್ತನದ ಆಯ್ಕೆಯ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಳ್ಳಲು ಹೊರಟ ಹೆಣ್ಣಿನ ಸೋಲನ್ನು ಇದು ಹೇಳುತ್ತದೆ. ಹೆಣ್ಣಿನ ಮನಸ್ಸಿನ ಅವಳ ನಿಲುವಿನ ಮತ್ತೊಂದು ಮಗ್ಗುಲನ್ನು ಅನಾವರಣಗೊಳಿಸುವ ಕಥೆಯಾಗಿದೆ. ಬದಲಾಗುತ್ತಿರುವ ಆಧುನಿಕ ಹೆಣ್ಣಿನ ಸಂವೇದನೆಯನ್ನು ಗುರುತಿಸಲಾಗಿದೆ. ವಿಮೋಚನೆ, ಬಿಡುಗಡೆಗಾಗಿ ಹಂಬಲಿಸುವ ಹೆಣ್ಣುಗಳ ಮಾದರಿ ಇದೆ. ಅವರ 'ಬಿಡುಗಡೆ' ಕಥೆಯ ನಾಯಕಿ ಗಂಡನ ಕ್ರೌರ್ಯ, ಹಿಂಸೆ, ದಬ್ಬಾಳಿಕೆಗಳಿಂದ ನೊಂದಹೆಣ್ಣು, ಗಂಡ ಸತ್ತಾಗ ಅವಳಿಗೆ ಅತೀವ ಆನಂದವಾಗುತ್ತದೆ. ಅಡಿಗೆ ಮನೆಯೊಳಕ್ಕೆ ನುಸುಳಿ ಲೋಟದ ತುಂಬ ಹಾಲನ್ನು ಗಟಗಟನೆ ಕುಡಿಯುತ್ತಾಳೆ. ಅವಳ ಕಣ್ಣೀರೇನಿದ್ದರೂ ಬದುಕಿದ್ದಾಗ ಗಂಡನಿಂದಾಗಿ ತನ್ನ ಕಣ್ಣಿನೊಳಗೆ ತುಂಬಿದ್ದ ಕನಸುಗಳು ಚೂರಾಗಿದ್ದಕ್ಕೇ ವಿನಾ ಅವರ ಸಾವಿಗಾಗಿ ಅಲ್ಲ. ಅವನ ಸಾವು ತನಗೆ ನಿಜವಾದ ಬಿಡುಗಡೆ ಒದಗಿಸಿದೆ ಎಂಬ ನಿಟ್ಟುಸಿರು ಬಿಡುತ್ತಾಳೆ. ಹೀಗೆ ಹೆಣ್ಣಿನ ಅಂತರಂಗದ ತುಮುಲವು ಕಥೆಯಲ್ಲಿ ವ್ಯಕ್ತವಾಗಿರುವ ರೀತಿಯನ್ನು ತಿಳಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಸ್ತ್ರೀ ಪುರುಷ ವ್ಯಕ್ತಿತ್ವಗಳ ಚಿತ್ರಣವನ್ನು ತಿಳಿಸಲಾಗಿದೆ. ಕಥಾವಸ್ತುವು ಗಂಡು-ಹೆಣ್ಣಿನ ಸಂಬಂಧ ವಿಶ್ಲೇಷಣೆ ಕುರಿತದ್ದಾಗಿದೆ. ಈ ಕಥೆಯ ನಿಲುವು ಸ್ತ್ರೀ ಪರವಾಗಿದ್ದರೂ ಅವು ಎಲ್ಲೂ ಘೋಷಣೆಯ ರೂಪ ತಾಳುವುದಿಲ್ಲ. ಕಥೆಯ ಸಂದರ್ಭದಿಂದಲೇ ಅವು ಸಹಜವೆಂಬಂತೆ ಹೊಮ್ಮುತ್ತವೆ. ಪುರುಷರ ನಯವಂಚನೆ ಹೇಡಿತನ ಸಂಪ್ರದಾಯ ಶರಣತೆಗಳನ್ನು ಕಥೆಯ ಮೂಲಕವೇ ಬಯಲುಗೊಳಿಸುತ್ತಾರೆ. ಹೆಣ್ಣು ಬದುಕಿನಲ್ಲಿ ಪ್ರಧಾನ ಎಂದು ಸಮಾಜದಲ್ಲಿ ಪರಿಗಣಿತವಾಗಿರುವ 'ಮದುವೆ' ಎಂಬ ವಿಧಿ. ಈ ವಿಧಿಗೆ ಒಳಗಾದ ಹೆಣ್ಣಿನ ಸ್ವಾತಂತ್ರ್ಯ, ಕ್ರಿಯಾಶೀಲತೆ ನಾಶವಾಗುತ್ತದೆ. ಕೊನೆಗೆ ಹೆಣ್ಣು ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಿಡುತ್ತಾಳೆ ಎಂಬುದನ್ನು ಇಲ್ಲಿನ ಕಥನಗಳಲ್ಲಿ ಗುರುತಿಸಬಹುದಾಗಿದೆ.

ಆಕಸ್ಮಿಕವಾಗಿಯೋ ಅಥವಾ ಉದ್ದೇಶ ಪೂರ್ವಕವಾಗಿಯೇ ಸ್ವಾತಂತ್ರ್ಯಕ್ಕೆ ಪ್ರಧಾನತೆ ಕೊಟ್ಟಾಗ ಅವಳ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳುವ ಪುರುಷ ವರ್ಗವನ್ನು ಟೀಕೆ ಮಾಡುತ್ತಾ ಅವರುಗಳ ಸೌಲಭ್ಯಾಕಾಂಕ್ಷೆಯನ್ನು ಖಂಡಿಸುತ್ತಾರೆ. ಮತ್ತೆ ಹೆಣ್ಣು ತನ್ನ ಸ್ವಂತ ವ್ಯಕ್ತಿತ್ವ ಉಳಿಸಿಕೊಳ್ಳಲು ಹೊರಟಾಗ ಯಾರು ಸಹಕರಿಸಲಾರರು ಎಂಬುದನ್ನು ಸೂಚಿಸುವುದನ್ನು ಗಮನಿಸಬಹುದಾಗಿದಗೆ. ಇಷ್ಟೆಲ್ಲಾ ಜಂಜಾಟ, ತುಮುಲಗಳ ನಡುವೆ ದೈಹಿಕ ಮತ್ತು ಮಾನಸಿಕ ಶೋಷಣೆಗೆ ಒಳಗಾಗಿ ಸಮಾಜದಲ್ಲಿ ಬದುಕು ಸಾಗಿಸಲೇ ಬೇಕಾದ ಪರಿಸ್ಥಿತಿ ಬಂದಾಗ ಹೆಣ್ಣಿನ ಮುಂದಿರುವ ದಾರಿ ಎರಡೇ ಒಂದು ಪಿತೃಪ್ರಧಾನ ವ್ಯವಸ್ಥೆಗೆ ತಲೆಬಾಗಿ ಅದು ಹೇಳಿದಂತೆ ಕೇಳುವುದು ಇಲ್ಲವೇ 'ಕವಲು' ದಾರಿಯಲ್ಲಿ ಸಾಗುವುದು. ಇದರಿಂದಾಗಿ ಲೇಖಕಿಯ ಸೃಜನಾತ್ಮಕತ ವಿಚಾರವಂತಿಕೆಯ ಬಿಂದು ಚಕ್ರದಂತೆ ತಿರುತಿರುಗಿ ಕೊನೆಗೂ ಪರಂಪರಾಗತ ಮೌಲ್ಯಗಳಿಗೆ ಅಂಟಿಕೊಂಡು ಬಿಡುತ್ತದೆಂಬುದನ್ನು ಮನಗಾಣಬಹುದಾಗಿದೆ. ಆದರೆ ಇದರ ಹಿಂದೆ ಅಡಗಿರುವ ಸತ್ಯ ಲೇಖಕಿಯ ಮಾತಿನಲ್ಲಿಯೂ ಹೇಳುವುದಾದರೆ ಮಹಿಳೆ ಧೈರ್ಯವಂತಳಾಗಿರಲಿ, ಗಂಡನನ್ನು ಧಿಕ್ಕರಿಸುವವಳಾಗಿರಲಿ, ಸಂಪ್ರದಾಯ, ವಿರೋಧಿಯಾಗಿರಲಿ ನಮ್ಮ ಪ್ರಸ್ತುತ ಸಮಾಜ ಆಕೆಯನ್ನು ಸುಖ ನಿದ್ರೆ ಮಾಡಲು ಬಿಡುವುದಿಲ್ಲ. ಒಂದಲ್ಲ ಒಂದು ರೂಪದಲ್ಲಿ ಒಂದಲ್ಲ ಒಂದು ವೇಷದಲ್ಲಿ ಎದುರು ನಿಂತು ಹಂತ-ಹಂತವಾಗಿ ಕೆಳಗಿಳಿಸಲು ತುಳಿಯಲು ನೋಡುತ್ತದೆಯೋ ಹೊರತು ಮೇಲೆತ್ತಲು ಅಲ್ಲ ಎಂಬ ಕಟು ವಾಸ್ತವದ ಅರಿವು ಇರುವುದು ಮುಖ್ಯವಾಗುತ್ತದೆ.

ನಾಲ್ಕನೆಯ ಅಧ್ಯಾಯವು 'ಆಧುನಿಕತೆ ಮತ್ತು ಹೆಣ್ಣು' ಈ ಕಥೆಗಳಲ್ಲಿ ಹೊಂದಿರುವ ನೆಲೆಗಟ್ಟನ್ನು ಚಿಂತಿಸಿದೆ. ಇವರ ಕಥೆಗಳುದ್ದಕ್ಕೂ ಕಾಣಿಸಿಕೊಳ್ಳುವಂತಹ ಹೆಣ್ಣುಗಳು ಸುಶಿಕ್ಷಿತರು. ಉದ್ಯೋಗಸ್ಥರು, ಮುಂಬಯಿಯಂತಹ ನವನಾಗರೀಕ ಜಗತ್ತಿನಲ್ಲಿ ಬದುಕುತ್ತಿರುವವರು ಹೀಗಾಗಿ ಸಹಜವಾಗಿ ಇವರ ಆಲೋಚನೆ, ನಡವಳಿಕೆಯ ಮೇಲೆ ಪಾಶ್ಚಾತ್ಯ ಪ್ರಭಾವ ಬಿದ್ದಿರುವಂತಹದೆ ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಇವರು

ಅರ್ಥಮಾಡಿಕೊಳ್ಳಬಲ್ಲರು. ತಮಗೆ ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳ ಬಗೆಗೆ ಯೋಚಿಸಬಲ್ಲರು. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಸ್ವಾವಲಂಬಿಗಳಾಗಿದ್ದಾರೆ. ಹೀಗಾಗಿ ಈ ಅಂಗಗಳೂ ಅವರ ಆಯ್ಕೆ. ನಿರ್ಧಾರ ನಡವಳಿಕೆಯಲ್ಲಿ ಬಹುಮುಖ್ಯ, ಪಾತ್ರವಹಿಸಿರುವುದಂತೂ ನಿಜ.

ಪರಂಪರಾಗತ ಅಸಮಾನತೆಗಳ ಬಗ್ಗೆ ಎಚ್ಚರವಿರುವ ತಮ್ಮ ಬದುಕಿನ ನಿರ್ಧಾರವನ್ನು ತಾವೇ ಕೈಗೊಳ್ಳುವ ಸಾಮರ್ಥ್ಯದ ದಿಟ್ಟ ನಿಲುವಿನವರು ಇವರ ಮೂಲಕ ಹೆಣ್ಣಿನ ಇತ್ಯಾತ್ಮಕ ಮಾದರಿಗಳನ್ನು ನಮ್ಮ ಮುಂದಿಡುತ್ತಾರೆ. ಇವರ 'ಹೀಗೊಂದು ಕಥೆ'ಕಥಾನಾಯಕಿಯ ಸ್ವತಂತ್ರ ನಿಲುವನ್ನು ಪ್ರತಿಪಾದಿಸುವಂತೆಯೂ ಪುರುಷನ ಅಹಂ ಪ್ರಜ್ಞೆ ಎಲ್ಲಾ ಸಂದರ್ಭದಲ್ಲೂ ಪ್ರಕಟವಾಗದಿದ್ದರೂ ಸುಪ್ತವಾಗಿಯಂತೂ ಇದ್ದೇ ಇದ್ದು ತನಗೆ ಧಕ್ಕೆಯಾಗುವಾಗ ಹೇಗೆ ಎಲ್ಲಾ ಮುಖವಾಡಗಳನ್ನೂ ಕಿತ್ತೊಗೆದು ಮೇಲೆದ್ದು ನಿಲ್ಲುತ್ತದೆ ಎಂಬುದನ್ನು ಧ್ವನಿಸುತ್ತದೆ. 'ಬಿಡುಗಡೆ' ಕಥೆಯ ನಾಯಕಿ ಕ್ರೂರಿಯೂ, ಅಹಂಕಾರಿಯೂ ಆದ ಗಂಡ ಸತ್ತಾಗ ಹೊರಗೆ ದುಃಖಿಸುವಂತೆ ನಟಿಸಿದರೂ ಅಡುಗೆ ಮನೆಗೆ ಹೋಗಿ ಹಾಲು ಕುಡಿದು ಸ್ವಸ್ತವಾಗಿ ಮಲಗುತ್ತಾಳೆ. 'ಕೊನೆಯದಾರಿ' ಕಥೆಯಲ್ಲಿ ಪರಸ್ತ್ರೀ ಸ ಂಗಕ್ಕೆ ಹಾತೊರೆಯುವ ಪುರುಷರು ಜವಾಬ್ದಾರಿ ಹೊರುವ ಸಂದರ್ಭದಲ್ಲಿ ಎಷ್ಟು ತರ್ಕಬದ್ಧವಾಗಿ ನುಣುಚಿಕೊಳ್ಳುತ್ತಾರೆ ಎಂಬುದನ್ನು ಕುತೂಹಲದಿಂದ ಗಮನಿಸುತ್ತಾ ತನಗೆ ಸಿಕ್ಕ ಸಂಗಾತಿಯನ್ನು ಅರಸುತ್ತಾ ಹೋಗುವ ಮುಕ್ತ ನಿಲುವಿನ ಹೆಣ್ಣಿನ ಚಿತ್ರವಿದೆ. ಲೈಂಗಿಕ ವಿಷಯಗಳ ಬಗ್ಗೆ ಹೆಣ್ಣಿನ ಆಲೋಚನೆ ಯಾವ ರೀತಿ ಇರುತ್ತದೆ ಎಂಬುದರ ಒಂದು ದಿಟ್ಟ ಚಿತ್ರಣವೂ ಇಲ್ಲಿದೆ.

ಈ ನಿಟ್ಟಿನಲ್ಲಿ ಅಧ್ಯಯನ ಮಾಡಿದಾಗದ ಸಮಾಜದ ಒಂದರ್ಥವೇ ಹೆಣ್ಣು. ಹೆಣ್ಣಿನ ಬಾಳನ್ನು ಕುರಿತು ಸಮಾಜವು ಉತ್ತರ ಕೊಡಬೇಕಾಗಿರುವ ಪ್ರಶ್ನೆಗಳು ಹಲವಾರು. ಹೆಣ್ಣಿನ ಬಾಳನ್ನು ಕುರಿತು ಹೆಣ್ಣಿನ ಅನುಭವದಿಂದ ಮಾತ್ರ ಹೇಳಬಹುದಾದ ಅಭಿಪ್ರಾಯವಿರುತ್ತದೆ.

ಹೆಣ್ಣಿನ ಈ ಅಭಿಪ್ರಾಯವನ್ನು ಸಮಾಜವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಪುರುಷ ಸಂವೇದನೆಗಿಂತ ಭಿನ್ನವಾದ ಮಹಿಳಾ ಸಂವೇದನೆಯೆಂಬುದೊಂದು ಇದೆಯೇ ಎನ್ನುವ ವಿಷಯದಲ್ಲಿ ವಾದಗಳಿವೆ. ಸ್ತ್ರೀಗೆ ಅವಳದೇ ಆದ ಅನುಭವ ಲೋಕವಿದೆ. ಹೆಣ್ಣಿನ ಹೃದಯಕ್ಕಾಗುವ ತಲ್ಲಣಗಳು, ಬೇಗುದಿಗಳನ್ನು ಅತ್ಯಂತ ಸೂಕ್ಷ್ಮವಾಗಿ ನಿರೂಪಿಸಲಾಗಿದೆ. ಹೆಣ್ಣಿನ ಅನನ್ಯತೆಯನ್ನು ಮಾನವೀಯ ಸಂಬಂಧಗಳ ಪರಿವಲಯದೊಳಗೆ ಗುರುತಿಸುವ ಸ್ತ್ರೀ ಸಂವೇದನೆ ಇವರ ಕಥೆಗಳ ಮುಖ್ಯ ಗುಣವಾಗುತ್ತದೆ.

ಲೇಖಕಿಯ ಪರಿಚಯ

೧. ಹೆಸರು	:	ವೀಣಾಶಾಂತೇಶ್ವರ
೨. ಕಾವ್ಯನಾಮ	:	ವೀಣಾ
೩. ಜನ್ಮ ದಿನಾಂಕ	:	೨೨-೦೨-೧೯೪೫
೪. ಜನ್ಮ ಸ್ಥಳ	:	ಧಾರವಾಡ
೫. ತಂದೆಯ ಹೆಸರು	:	ಬಲರಾಮಾಚಾರ್ಯ ಎಲಬುರ್ಗಿ
೬. ತಾಯಿಯ ಹೆಸರು	:	ಇಂದಿರಾ
೭. ಪತಿಯ ಹೆಸರು	:	ಬಿ. ಶಾಂತೇಶ್ವರ
೮. ಶಿಕ್ಷಣ	:	ಎಂ.ಎ. ಎಂ.ಲಿಟ್, ಪಿಹೆಚ್.ಡಿ.
೯. ವೃತ್ತಿ	:	ಪ್ರಾಂಶುಪಾಲರು, ಕನಾಟಕ ಕಲಾ ಕಾಲೇಜು, ಧಾರವಾಡ
೧೦. ಪ್ರಕಟವಾದ ಒಟ್ಟು ಕೃತಿ	:	೧೦
೧೧. ಕೆಲವು ಕೃತಿಗಳು	:	**ಕಥಾಸಂಕಲನಗಳು,** ಮುಳ್ಳುಗಳು (೧೯೬೮) ಕೊನೆಯ ದಾರಿ (೧೯೭೨) ಕವಲು (೧೯೭೬) ಹಸಿವು (೧೯೮೪) ಬಿಡುಗಡೆ (೧೯೯೪) **ಕಿರುಕಾದಂಬರಿಗಳು** ಗಂಡಸರು ಶೋಷಣೆ, ಬಂಡಾಯ ಇತ್ಯಾದಿ.....

೧೨. ಅದೃಷ್ಟ : ಅನುವಾದಿತ ಕಥಾಸಂಕಲನ

೧೩. ಕುರಿಗಾಹಿ ಬಿಲ್ಲೇಸುರ : ನಿರಾಲಾ ಅವರ ಹಿಂದಿ ಕಾದಂಬರಿ ಅನುವಾದ

೧೪. ನದೀ ದೀಪಗಳು : ಆಜ್ಞೇಯರ ಹಿಂದಿ ಕಾದಂಬರಿ ಅನುವಾದ

೧೫. ಹೊಸ ಹೆಜ್ಜೆ : ಮಹಿಳಾ ಕಾವ್ಯ

೧೬. ಮಹಿಳೆಯರ ಸಣ್ಣ ಕಥೆಗಳು

೧೭. ಮಹಿಳಾ ಅಧ್ಯಯನ ಲೇಖನಗಳು

೧೮. ಅಭಿವ್ಯಕ್ತಿ ಸಂಪಾದಿತ

೧೯. ಸಂಚಿಯ ಹೊನ್ನಮ್ಮ : ಪುನರ್‌ಮೌಲ್ಯಮಾಪನ

೨೦. ಇಂಗ್ಲೀಷಿನಲ್ಲಿ ಸುಮಾರು ೨೦ ವಿಮರ್ಶಾ ಲೇಖನಗಳು, ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ.

೨೧. ಹವ್ಯಾಸ : ಸಾಂಪ್ರದಾಯಿಕ ಚಿತ್ರಕಲೆ, ಕೊಳಲು, ಹಿಂದೂಸ್ಥಾನಿ ಸಂಗೀತ ಹಾಗೂ ಪ್ರವಾಸ

೨೨. ಇವರ ಕಿರುಗಥೆ 'ಅತಿಥಿ' ಪ್ರಾಯೋಗಿಕ ಚಲನಚಿತ್ರವಾಗಿ ಮೆಚ್ಚುಗೆ ಪಡೆದಿದೆ.

ಗ್ರಂಥಋಣ

೧. ಡಾ. ಎಚ್.ಎಸ್. ಶ್ರೀಮತಿ (ಸಂ.) : ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಬರಗೂರು ರಾಮಚಂದ್ರಪ್ಪ (ಪ್ರ.ಸಂ.): ವಿವಿಧ ಲೇಖಕರು : ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು

೩. ಡಾ. ಸಬಿಹಾ ಭೂಮಿಗೌಡ, ಡಾ. ಮಲ್ಲಿಕಾ ಘಂಟಿ : ಕನ್ನಡ ಸಾಹಿತ್ಯ ಮತ್ತು ಮಹಿಳೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

೪. ಬರಗೂರು ರಾಮಚಂದ್ರಪ್ಪ (ಪ್ರ.ಸಂ.): ವಿವಿಧ ಲೇಖಕರು : ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು

೫. ಎಚ್.ಎಸ್. ಶ್ರೀಮತಿ : ಚಹರೆ, ಇಳಾ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು.

೬. ಶಶಿಕಲಾ ವೀರಯ್ಯಸ್ವಾಮಿ(ಸಂ.) : ಸಂವೇದನೆ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೭. ಎಚ್.ಎಸ್. ಶ್ರೀಮತಿ : ಮಹಿಳಾ ಅಧ್ಯಯನ (ದಕ್ಷಿಣಾಯನ ಸಂಚಿಕೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಡಾ.ಎಸ್.ವಿ. ಪ್ರಭಾವತಿ : ಕನ್ನಡ ಮಹಿಳಾ ಸಾಹಿತ್ಯದಲ್ಲಿ
ಸ್ತ್ರೀವಾದಿ ನೆಲೆಗಳು,
ಬಿ.ಟಿ.ಎಂ. ಬಡಾವಣೆ,
ಕುವೆಂಪುನಗರ, ಬೆಂಗಳೂರು

೯. ಡಾ. ಡಿ. ಮಂಗಳಾಪ್ರಿಯದರ್ಶಿನಿ : ಸ್ತ್ರೀವಾದ ಮತ್ತು ಮಹಿಳಾ
ಅಧ್ಯಯನ ಒಂದು ಪ್ರವೇಶಿಕೆ
ಮಹಿಳಾ ಅಧ್ಯಯನ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
(೨೦೦೭)

೧೦. ಡಾ. ಡಿ.ಮಂಗಳಾ ಪ್ರಿಯದರ್ಶಿನಿ : ಬೈದವ್ವ ಕೇಳಾ ನನ ಮಾತಾ....
ಸಚ್ಚಿನ್ ಪಬ್ಲಿಷರ್ಸ್, ನಂ. ೬೨೪
೯ನೇ ಡಿ ಮುಖ್ಯರಸ್ತೆ, ಹಂಪಿನಗರ,
ವಿಜಯನಗರ ೨ನೇ ಹಂತ,
ಬೆಂಗಳೂರು.

೧೧. ಡಾ. ಎಚ್.ಎಸ್. ಶ್ರೀಮತಿ : ಸ್ತ್ರೀವಾದ (ಚಿಂತನಮಾಲೆ),
ಪ್ರಸಾರಾಂಗ, ಕನ್ನಡ
ವಿಶ್ವವಿದ್ಯಾಲಯ, ಹಂಪಿ.

೧೨. ಎನ್. ಗಾಯತ್ರಿ : ಮಹಿಳೆ ಬಿಡುಗಡೆಯ ಹಾದಿಯಲ್ಲಿ
ನವಕರ್ನಾಟಕ ಪ್ರಕಾಶನ

೧೩. ಡಾ. ಎಂ.ಎಸ್. ಆಶಾದೇವಿ : ಸ್ತ್ರೀಮತವನ್ನುತ್ತರಿಸಲಾಗದೇ ?
ಸಾಹಿತ್ಯ -ಸಂಸ್ಕೃತಿ ಕುರಿತ ಲೇಖನಗಳು ಅಕ್ಷರ ಪ್ರಕಾಶನ, ಹೆಗ್ಗೋಡು,
ಸಾಗರ.

೧೪. ಗಾಯತ್ರಿ ನಾವಡ : ಮಹಿಳಾ ಸಂಕಥನ,
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು (೨೦೦೩)

೧೫. ಡಾ. ಶೈಲಜ ಹಿರೇಮಠ (ಸಂ.)	:	ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೬. ಆರ್ಯಾಂಭ ಪಟ್ಟಾಭಿ (ಪ್ರ.ಸಂ.) ಸ.ನ. ಗಾಯತ್ರಿ (ಸಂ) ಡಾ. ಎಸ್.ಡಿ. ಶಶಿಕಲಾ	:	ಮಹಿಳಾ ಸಾಹಿತ್ಯ ಸಮೀಕ್ಷೆ ಸಂವಹನ, ೧೨/೧, ಎ ಈವ್ನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು
೧೭. ಡಾ. ಜಿ.ಎಸ್. ಅಮೂರ (ಸಂ.)	:	ಅವಳ ಕತೆಗಳು, ಪ್ರಿಸಂ ಬುಕ್ಸ್ ಪ್ರೈ.ಲಿ. ನಂ. ೧೮೮೫, ೩೨ ಕ್ರಾಸ್, ಬನಶಂಕರಿ, ಬೆಂಗಳೂರು (೧೯೯೯)
೧೮. ತೇಜಸ್ವಿನಿ ನಿರಂಜನ ಸೀಮಂತಿನಿ ನಿರಂಜನ	:	ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಕನ್ನಡ ಸಂಘ,ಕ್ರೈಸ್ಟ್ ಕಾಲೇಜು ಬೆಂಗಳೂರು- (೧೯೯೪)
೧೯. ಡಾ.ಎಚ್.ಎಸ್. ಶ್ರೀಮತಿ	:	ಸೇರಿಕೊಂಡ ಎಳೆಗಳು, ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು (೨೦೦೩)
೨೦. ಬಿ.ಎಸ್. ವೆಂಕಟಲಕ್ಷ್ಮಿ	:	ಕನ್ನಡ ಲೇಖಕಿಯರ ನೆಲೆ-ಬೆಲೆ ಎನ್.ಟಿ. ಶ್ಯಾಂಪ್ರಕಾಶನ ಇಂದಿರಾನಗರ, ಬೆಂಗಳೂರು (೧೯೯೪)
೨೧. ಡಾ. ಎಸ್.ಎಲ್. ಭೈರಪ್ಪ	:	ಕಥೆ ಮತ್ತು ಕಥಾವಸ್ತು, ಸಾಹಿತ್ಯಪ್ರಕಾಶನ, ಜಂಗಮಮೇಸ್ತ್ರಿ ಗಲ್ಲಿ, ಬಳೇಪೇಟೆ, ಬೆಂಗಳೂರು-೫೩ (೧೯೬೯)

೨೨. ಬಿ.ಎಂ. ರೋಹಿಣಿ : ಸ್ತ್ರೀ ಸಂವೇದನೆ,
ಹೇಮಾಂಶು ಪ್ರಕಾಶನ,
ಡೇರೆಬೈಲು, ಮಂಗಳೂರು (೧೯೯೫)

೨೩. ಡಾ. ಕಿಶೋರಿ ನಾಯಕ್.ಕೆ. ; ಸ್ತ್ರೀವಾದ - ನೆಲೆಗಳು ಮತ್ತು
ನಿಲುವುಗಳು, ಪ್ರಸಾರಾಂಗ,
ಮಂಗಳೂರು ವಿಶ್ವವಿದ್ಯಾಲಯ,
(೧೯೯೯)

೨೪. ಜಿ.ಎಸ್. ಅಮೂರ : ಕನ್ನಡ ಕಥನ ಸಾಹಿತ್ಯ,
ಶ್ರೀಹರಿ ಪ್ರಕಾಶನ, ಭಾರತೀ
ನವೋದಯ ನಗರ, ಧಾರವಾಡ-೨,
(೧೯೯೪)

೨೫. ಡಾ.ಎಲ್.ಜಿ.ಮೀರಾ : ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ,
ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್,
ಬೆಂಗಳೂರು (೨೦೦೪)